

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 13 ಬುಧವಾರ 2022

ಸಂಪುಟ: 43 | ಸಂಚಿಕೆ: 88 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ನೀರಿನ ಬಾಕಿ ಪಾವತಿಸುವವರಿಗೆ ಆರು ತಿಂಗಳು 'ಬಡ್ಡಿ ನಿಶ್ಚಲತೆ'

● ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಪ್ರಕಟ ● ಗೃಹ ಬಳಕೆ ನಲ್ಲಿ ಸಂಪರ್ಕಕ್ಕೆ ಮಾತ್ರ ಈ ಯೋಜನೆ ಅನ್ವಯ ● ಬಾಕಿ ಪಾವತಿಸದೇ ಇರುವ ಗ್ರಾಹಕರ ನೀರಿನ ಬಾಕಿ ಬಡ್ಡಿ ಬೆಳೆಯುತ್ತಲೇ ಇರುತ್ತದೆ ● ಅನಧಿಕೃತ, ದೋಷಯುಕ್ತ ಮೀಟರ್‌ವುಳ್ಳ ಗ್ರಾಹಕರಿಗೂ ಬೀಳಲಿದೆ ಭಾರೀ ಶುಲ್ಕದ 'ಬರೆ'



ಮೈಸೂರು,ಜು.12(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 74 ಕೋಟಿ ಬಡ್ಡಿಯೂ ಸೇರಿದಂತೆ 220 ಕೋಟಿ ರೂ. ನೀರಿನ ಶುಲ್ಕ ಬಾಕಿಯಿದ್ದು, ಸದ್ಯಕ್ಕೆ ಪಾಲಿಕೆ ಆದಾಯ ವೃದ್ಧಿಸುವುದು ಹಾಗೂ ಗ್ರಾಹಕರಿಗೆ ನೆರವಾಗುವ ನಿಟ್ಟಿನಲ್ಲಿ ಜು.15ರಿಂದ 6 ತಿಂಗಳು 'ಬಡ್ಡಿ ನಿಶ್ಚಲತೆ ಯೋಜನೆ' (ಹಾಲಿ ಬಡ್ಡಿ ಕಾಯ್ದುಕೊಳ್ಳುವುದು) ಸದವಕಾಶ ಕಲ್ಪಿಸಲಾಗುತ್ತಿದೆ ಎಂದು ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ತಿಳಿಸಿದ್ದಾರೆ.



ಮೈಸೂರು ಮಹಾನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್(ಹಳೆ ಕೌನ್ಸಿಲ್) ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಲಿಕೆ ವ್ಯಾಪ್ತಿಯಲ್ಲಿ 1.80 ಲಕ್ಷ ಮನೆಗಳಿಗೆ ಕೊಳಾಯಿ ಕುಡಿಯುವ ನೀರಿನ ಸಂಪರ್ಕವಿದೆ. ಅದರಲ್ಲಿ ಅನಧಿಕೃತ ಹಾಗೂ ದೋಷಪೂರಿತ ಮೀಟರ್ ಹೊಂದಿರುವ 52 ಸಾವಿರ ಸಂಪರ್ಕ ಪತ್ತೆಯಾಗಿದೆ. ಇಂತಹ ಗ್ರಾಹಕರು ಹಲವು ವರ್ಷಗಳಿಂದ ಪಾಲಿಕೆ ನೀರಿನ ಶುಲ್ಕ ಪಾವತಿಸಿಲ್ಲ. ಹಾಗಾಗಿ 146 ಕೋಟಿ ರೂ. ಅಸಲು ಹಾಗೂ 74 ಕೋಟಿ ರೂ. ಬಡ್ಡಿ ಸೇರಿ 220 ಕೋಟಿ ಬಾಕಿ ಇದೆ. ಬಾಕಿಯಿರುವ 146 ಕೋಟಿ ರೂ.ನಲ್ಲಿ 108 ಕೋಟಿ ಗೃಹಬಳಕೆಯ ಗ್ರಾಹಕರು, ಉಳಿದ ಪಾಲು ವಾಣಿಜ್ಯ ಗ್ರಾಹಕರದ್ದು. 74 ಕೋಟಿ ಬಡ್ಡಿ ಹಣದಲ್ಲಿ 50 ಕೋಟಿ ಗೃಹಬಳಕೆಯ ಗ್ರಾಹಕರು, ಉಳಿದ ಮೊತ್ತ ವಾಣಿಜ್ಯ ಬಳಕೆಯ ಗ್ರಾಹಕರು. ಈಗಾಗಲೇ ಕೌನ್ಸಿಲ್ ಸಭೆ ಒಪ್ಪಿಗೆ ಪಡೆದು ಬಡ್ಡಿ ಮನ್ನಾ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಸರ್ಕಾರದಿಂದ ಇನ್ನು ಯಾವುದೇ ನಿರ್ಧಾರವಾಗಿಲ್ಲ ಎಂದರು. ನೀರಿನ ಶುಲ್ಕ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಪಾಲಿಕೆ ಮತ್ತೊಂದು ಸದವಕಾಶ ಕಲ್ಪಿಸುತ್ತಿದೆ. ಅದೇ 'ಬಡ್ಡಿ ನಿಶ್ಚಲತೆ ಯೋಜನೆ'. ಇದು ಜು.15ರಿಂದ ಮುಂದಿನ ಆರು ತಿಂಗಳ ಅವಧಿಗೆ ಜಾರಿಯಲ್ಲಿರುತ್ತದೆ. ಅದರ ಸದುಪಯೋಗವನ್ನು ▶ 8ನೇ ಪುಟಕ್ಕೆ

> " 24 ಸಾವಿರ ಮಂದಿ ನಿಯಮಬಾಹಿರವಾಗಿ ಕುಡಿಯುವ ನೀರಿನ ಸಂಪರ್ಕ ಹೊಂದಿದ್ದಾರೆ. ಅಲ್ಲದೆ, 26 ಸಾವಿರ ನೀರಿನ ಸಂಪರ್ಕದ ಮೀಟರ್‌ಗಳು ಕೆಟ್ಟು ಹೋಗಿವೆ. ದೋಷಪೂರಿತ ಮೀಟರ್ ಹೊಂದಿರುವವರಿಗೆ ನೋಟಿಸ್ ನೀಡಲಾಗಿದ್ದರೂ ದುರಸ್ತಿ ಮಾಡಿಸಿಕೊಂಡಿಲ್ಲ. ಇಂತಹವರಿಗೆ ಮೂರು ಪಟ್ಟು ಶುಲ್ಕ ವಿಧಿಸಲಾಗುತ್ತದೆ. ಬಿಲ್ ಬಾಕಿ ಉಳಿಸಿಕೊಂಡಿರುವವರ, ಅನಧಿಕೃತ ಸಂಪರ್ಕ ಪಡೆದಿರುವವರ ಮನೆಯ ಸಂಪರ್ಕ ಕಡಿತಗೊಳಿಸಲಾಗುತ್ತಿದೆ. ಇದರಿಂದ ಪ್ರತಿ ತಿಂಗಳು 2 ಸಾವಿರ ಮಂದಿ ಹೊಸದಾಗಿ ನೀರಿನ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸುತ್ತಿದ್ದಾರೆ.
> –ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ





ಕೊಡಗು ಮಳೆ ಹಾನಿ ಪ್ರದೇಶಕ್ಕೆ ಸಿಎಂ ಬೊಮ್ಮಾಯಿ ಭೇಟಿ

ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ; ಸಮಗ್ರ ಮಾಹಿತಿ ಸಂಗ್ರಹ

● ಸಂತ್ರಸ್ತ ಕುಟುಂಬಕ್ಕೆ ಪರಿಹಾರದ ಚೆಕ್ ವಿತರಣೆ ● ರಸ್ತೆಗಳ ದುರಸ್ತಿಗೆ ಆದೇಶ ● ಪರಿಹಾರ ಕಲ್ಪಿಸಲು ಹಣದ ಕೊರತೆಯಿಲ್ಲ ● ಹೂಳೆತ್ತಲು 40 ಕೋಟಿ ರೂ.



ಮಡಿಕೇರಿ ಮಲ್ಲಿಕಾರ್ಜುನ ನಗರದಲ್ಲಿ ಕುಸಿದು ಬಿದ್ದ ಮನೆ ಪರಿಶೀಲಿಸಿದ ಸಿಎಂ ಬೊಮ್ಮಾಯಿ

ಮಡಿಕೇರಿ, ಜು.12–ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಎರಡು ವಾರಗಳಿಂದ ಧಾರಾಕಾರ ಮಳೆ ಸುರಿದಿದ್ದು, ಇದರಿಂದ ಉಂಟಾಗಿರುವ ಹಾನಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರಿಶೀಲನೆ ನಡೆಸಿ, ಸಂತ್ರಸ್ತರಿಗೆ ಅಗತ್ಯ ನೆರವು ನೀಡುವಂತೆ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದ್ದಾರೆ.

ಕುಶಾಲನಗರ ಕೊಪ್ಪ ಮೂಲಕ ಕೊಡಗಿಗೆ ಆಗಮಿಸಿದ ಸಿ.ಎಂ. ಬಸವರಾಜ ಬೊಮ್ಮಾಯಿ ಅವರು ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಕಂದಾಯ ಸಚಿವ ಅಶೋಕ್, ಸಂಸದ ಪ್ರತಾಪ ಸಿಂಹ, ಜಿಲ್ಲೆಯ ಶಾಸಕರುಗಳಾದ ಕೆ.ಜಿ.ಬೋಪಯ್ಯ ಮತ್ತು ಎಂ.ಪಿ.ಅಪ್ಪಚ್ಚು ರಂಜನ್ ಅವರೊಂದಿಗೆ ಜಿಲ್ಲಾ ಕೇಂದ್ರ ಮಡಿಕೇರಿಯ ಮಲ್ಲಿಕಾರ್ಜುನನಗರದಲ್ಲಿ ಮಳೆಯಿಂದ ಕುಸಿದ ಗೋಪಾಲ ಎಂಬುವರ ಮನೆಯನ್ನು ವೀಕ್ಷಿಸಿದರು. ▶ 6ನೇ ಪುಟಕ್ಕೆ

> " ಭೂ ಕುಸಿತ ತಡೆಯಲು ರಿವಿಟ್ಟಿಂಗ್, ರಿಟೇನಿಂಗ್ ತಡೆಗೋಡೆ ಮತ್ತಿತರ ಅತ್ಯಾಧುನಿಕ ತಂತ್ರಜ್ಞಾನವಿದೆ. ಯಾವುದನ್ನು ಬಳಸಬೇಕು ಎಂದು ತಜ್ಞರು ಸಲಹೆ ನೀಡುತ್ತಾರೋ ಅದನ್ನು ಪ್ರಾರಂಭಿಸಿ ಮುಂದಿನ ಮಳೆಗಾಲದೊಳಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ ಗ್ರಾಮೀಣ ಪ್ರದೇಶದಲ್ಲಿ ಟಾಸ್ಕ್ ಫೋರ್ಸ್ ರಚನೆ ಮಾಡಬೇಕು. ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು ಕೆಲಸ ಮಾಡಬೇಕು. ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕಂಟ್ರೋಲ್ ರೂಂ ಸ್ಥಾಪಿಸಬೇಕು. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಈಗಾಗಲೇ ಸಾಕಷ್ಟು ಅನುದಾನ ಲಭ್ಯವಿದೆ. ಅಗತ್ಯವಿದ್ದಲ್ಲಿ ಮತ್ತಷ್ಟು ಅನುದಾನ ನೀಡಲಾಗುವುದು.
> –ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಕೊಡಗು ಜಿಲ್ಲೆಗೆ ವಿಶೇಷ ಅನುದಾನ

ಮಡಿಕೇರಿ, ಜು.12–ಕೊಡಗು ಜಿಲ್ಲೆಯಲ್ಲಿ ಕಳೆದ 12 ದಿನಗಳಿಂದ ಸುರಿದ ಧಾರಾಕಾರ ಮಳೆಗೆ ಸಾಕಷ್ಟು ಹಾನಿ ಆಗಿದ್ದು, ಈ ಸಂಬಂಧ ವಿಸ್ತೃತವಾಗಿ ವರದಿ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿದಲ್ಲಿ ವಿಶೇಷ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಪ್ರಕಟಿಸಿದ್ದಾರೆ. ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಮಳೆ ಹಾನಿಗೆ ಸಂಬಂಧಿಸಿದಂತೆ ಮಾಹಿತಿ ಪಡೆದು ಮಾತನಾಡಿದ ಅವರು, ಕಳೆದ 12 ದಿನಗಳಿಂದ ▶ 6ನೇ ಪುಟಕ್ಕೆ

ಭೂ ಕಂಪನ ಅಧ್ಯಯನ

ಕೊಡಗಿನ ಚೆಂಬು ವಿಭಾಗದಲ್ಲಿ ಪದೇ ಪದೆ ಭೂ ಕಂಪನವಾಗುತ್ತಿದೆ. ಇದಕ್ಕೆ ಕಾರಣಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ರಾಷ್ಟ್ರದ ಪ್ರಮುಖ ಸಂಸ್ಥೆಗಳಿಗೆ ಪತ್ರ ಬರೆಯಲಾಗಿದ್ದು, ನ್ಯಾಷನಲ್ ಜಿಯೋಲಾಜಿಕಲ್ ಸಂಸ್ಥೆ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಟೀರಿಯಲ್, ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ ತಜ್ಞರ ತಂಡ ಮುಂದಿನ ವಾರ ಕೊಡಗಿಗೆ ಆಗಮಿಸಿ ಪರಿಶೀಲನೆ ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿಗಳು ಇದೇ ವೇಳೆ ತಿಳಿಸಿದರು.

ಇದರೊಂದಿಗೆ ಬೆಂಗಳೂರು, ಮೈಸೂರು ವಿಶ್ವವಿದ್ಯಾನಿಲಯಗಳ ಭೂ ಶಾಸ್ತ್ರಜ್ಞರು ಆಗಮಿಸಿ, ಭೂ ಕಂಪನವಾಗುತ್ತಿರುವ ಜನವಸತಿ ಪ್ರದೇಶದಲ್ಲಿ ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಬಹುದು ಎನ್ನುವ ಬಗ್ಗೆ ಅಧ್ಯಯನ ನಡೆಸಲಿದ್ದಾರೆ. ಭೂ ಕುಸಿತಗಳ ಬಗ್ಗೆಯೂ ಪರಿಶೀಲನೆ ನಡೆಸಿ ಮಾಹಿತಿ ಒದಗಿಸಲಿದ್ದಾರೆ. ಸೆಸ್ಮಿಕ್ ವಲಯ ಮುಂದುವರೆಯುವಲ್ಲಿ ಜನವಸತಿ ಆಗದಂತೆ ಕ್ರಮ ವಹಿಸಲಾಗುತ್ತದೆ. ತಜ್ಞರ ತಂಡ ▶ 6ನೇ ಪುಟಕ್ಕೆ

ಜು.15ರಿಂದ ಹತ್ತು ದಿನ ಕಬಿನಿ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಬಿಡುಗಡೆ



ಮೈಸೂರು, ಜು.12(ಎಂಕೆ)– ಕಬಿನಿ ಜಲಾಶಯದ ಅಚ್ಚುಕಟ್ಟು ಪ್ರದೇಶಗಳಲ್ಲಿರುವ ಕೆರೆಗಳಿಗೆ ಜು.15 ರಿಂದ 10 ದಿನಗಳ ಕಾಲ ನಿತ್ಯ 1 ಸಾವಿರ ಕ್ಯೂಸೆಕ್ಸ್ ನೀರು ಹರಿಸಲಾಗುವುದು ಎಂದು ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಜಿಪಂ ಕಚೇರಿಯಲ್ಲಿ 2022ರ ಮುಂಗಾರು ಹಂಗಾಮಿಗೆ ನೀರು ಒದಗಿಸುವ ಕುರಿತು ನೀರಾವರಿ ಸಲಹಾ ಸಮಿತಿ ಸಭೆ ನಡೆಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಕಬಿನಿ ವ್ಯಾಪ್ತಿಯಲ್ಲಿ ಸುಮಾರು 129 ಕೆರೆಗಳಿದ್ದು, ಕೆರೆಗಳು ಮತ್ತು ನಾಲೆಗಳಿಗೆ ನೀರು ತುಂಬಿಸಲು ನಿರ್ಧರಿಸಲಾಗಿದೆ. ಈಗಾಗಲೇ ಕೆರೆಗಳು ಶೇ.30ರಷ್ಟು ನೀರು ತುಂಬಿದ್ದು, ಕೃಷಿಗೆ ಅನುಕೂಲವಾಗುವಂತೆ 10 ದಿನ ಕೆರೆಗಳಿಗೆ ನೀರು ಹರಿಸಿ ನಂತರ ನಾಲೆಗಳಿಗೆ ನೀರು ಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು. ಜು.15 ರಿಂದ 24ರವರೆಗೆ ಕೆರೆಗಳಿಗೆ ಹಾಗೂ ಜು.25ರಿಂದ ಆ.14ರವರೆಗೆ ನಾಲೆಗಳಿಗೆ ನೀರು ಹರಿಸಲಾಗುವುದು. ▶ 8ನೇ ಪುಟಕ್ಕೆ

ಕಬಿನಿ, ಕೆಆರ್‌ಎಸ್‌ಗೆ ಬಾಗಿನ ಅರ್ಪಿಸಲು ಸಿಎಂಗೆ ಆಹ್ವಾನ



> ▶ ಕಬಿನಿ ಹಾಗೂ ಕೆಆರ್‌ಎಸ್ ಜಲಾಶಯಗಳಿಗೆ ಬಾಗಿನ ಅರ್ಪಿಸುವ ಕುರಿತು ಹಾಗೂ ಆಷಾಢ ಮಾಸದಲ್ಲಿ ಒಂದು ದಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಬೇಕು ಎಂದು ಮುಖ್ಯಮಂತ್ರಿಗಳಿಗೆ ಆಹ್ವಾನ ಮಾಡಿದ್ದೇನೆ. ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಬೆಂಗಳೂರಿಗೆ ಹೋದ ಬಳಿಕ ತಿಳಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ.– ಎಸ್.ಟಿ.ಸೋಮಶೇಖರ್, ಜಿಲ್ಲಾ ಉಸ್ತುವಾರಿ ಸಚಿವ

ವಿವಿಧ 52 ನಿಗಮ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷರ ನಾಮನಿರ್ದೇಶನ ರದ್ದು

ಮೈಸೂರು, ಜು.12(ಎಸ್‌ಬಿಡಿ)– ರಾಜ್ಯ ಹಾಗೂ ಜಿಲ್ಲಾ ಮಟ್ಟದ 52 ವಿವಿಧ ನಿಗಮ, ಮಂಡಳಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ನಾಮನಿರ್ದೇಶನವನ್ನು ರದ್ದುಪಡಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ನಿಗಮ ಮಂಡಳಿಗಳ ಕುರಿತು ಯಾರಿಗೆ ಒಂದೂವರೆ ವರ್ಷ ಮೇಲಾಗಿದೆಯೋ ಅವರನ್ನು ತೆಗೆದು, ಹೊಸಬರಿಗೆ ಅವಕಾಶ ನೀಡಲು ಕೋರ್ ಕಮಿಟಿ ಈಗಾಗಲೇ ತೀರ್ಮಾನಿಸಿದ್ದು, ಅದರಂತೆ ಕ್ರಮ ವಹಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೈಸೂರಿನಲ್ಲಿ ಪ್ರತಿಕ್ರಿಯಿಸಿದ ಕೆಲವೇ ಗಂಟೆಗಳಲ್ಲಿ ನಾಮ ನಿರ್ದೇಶನ ರದ್ದಾಗಿರುವವರ ಪಟ್ಟಿಯನ್ನು ಮುಖ್ಯ ಕಾರ್ಯದರ್ಶಿಗಳ ಕಾರ್ಯಾಲಯ ಬಿಡುಗಡೆ ಮಾಡಿದೆ. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ(ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಲಿಮಿಟೆಡ್)ಯ ಅಪ್ಪಣ್ಣ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಕೆ.ಹೇಮಂತ ಕುಮಾರ್ ಗೌಡ, ಮೈಸೂರು ಪೈಂಟ್ಸ್ ಅಂಡ್ ವಾರ್ನಿಷ್ ಕಾರ್ಖಾನೆ ಅಧ್ಯಕ್ಷ ಎನ್.ವಿ.ಫಣೀಶ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ(ಕಾಡಾ)ದ ಎನ್.ಶಿವಲಿಂಗಯ್ಯ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಎಂ.ಎನ್. ನಂದೀಶ್ ಹಂಚೆ, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ರವಿ ಕುಶಾಲಪ್ಪ, ರಾಜ್ಯ ಮದ್ಯಪಾನ ಸಂಯಮ ಅಧ್ಯಕ್ಷೆ ಶೃತಿ, ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ ಅಧ್ಯಕ್ಷ ಜೆ.ಶಿವಲಿಂಗೇಗೌಡ, ರಾಜ್ಯ ▶ 8ನೇ ಪುಟಕ್ಕೆ





ನಾಲ್ವಡಿ, ಸರ್‌ಎಂವಿ ಪ್ರತಿಮೆಗಳಿಗೆ ಭವ್ಯಮಂಟಪ ನಿರ್ಮಾಣ



ಕೆಆರ್‌ಎಸ್ ಅಣೆಕಟ್ಟೆಯ ದಕ್ಷಿಣ ದ್ವಾರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆಗಳ ಪ್ರತಿಷ್ಠಾಪನೆಗೆ ನಿರ್ಮಾಣವಾಗಿರುವ ಭವ್ಯವಾದ ಮಂಟಪಗಳು.

ಮೈಸೂರು, ಜು.12(ಆರ್‌ಕೆ)– ಕೃಷ್ಣರಾಜಸಾಗರ ಜಲಾಶಯದ ದಕ್ಷಿಣ ದ್ವಾರದ ಬಳಿ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಅವರ ಸಂಸ್ಥಾನದಲ್ಲಿ ದಿವಾನರಾಗಿದ್ದ ಅಂದಿನ ಚೀಫ್ ಇಂಜಿನಿಯರ್ ಸರ್ ಎಂ. ವಿಶ್ವೇಶ್ವರಯ್ಯ ಅವರ ಪ್ರತಿಮೆ ಸ್ಥಾಪನೆ ಕಾರ್ಯ ಭರದಿಂದ ಸಾಗಿದೆ.

ಕನ್ನಂಬಾಡಿ ಕಟ್ಟೆ (ಕೃಷ್ಣರಾಜ ಸಾಗರ ಅಣೆಕಟ್ಟೆ) ನಿರ್ಮಿಸಿ ಮಂಡ್ಯ ಜಿಲ್ಲೆಯ ಬರಡು ಭೂಮಿಗೆ ನೀರು ಹರಿಸಿ, ಅಲ್ಲಿನ ಜನರ ಬದುಕು ಹಸನಾಗಿಸಿದ ಹಾಗೂ ಮೈಸೂರು, ಬೆಂಗಳೂರು ನಗರಕ್ಕೆ ಕುಡಿಯುವ ನೀರು ಕಲ್ಪಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ.ವಿಶ್ವೇಶ್ವರಯ್ಯ ಅವರ ಸ್ಮರಣೆಗಾಗಿ ಕೆಆರ್‌ಎಸ್ ಅಣೆಕಟ್ಟೆಯ ದಕ್ಷಿಣ ದ್ವಾರದಲ್ಲಿ ಪ್ರತಿಮೆ ಸ್ಥಾಪಿಸಲು ಕಾವೇರಿ ನೀರಾವರಿ ನಿಗಮ ನಿಯಮಿತವು ನಿರ್ಧರಿಸಿತ್ತು. ಅದರಂತೆ ಈಗಾಗಲೇ ಎರಡೂ ಮಂಟಪಗಳ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಮೈಸೂರಿನ ಕೆ.ಆರ್. ಸರ್ಕಲ್‌ನಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಮಂಟಪವನ್ನೇ ಹೋಲುವಂತೆ ಕೆಆರ್‌ಎಸ್‌ನಲ್ಲೂ ಈ ಇಬ್ಬರು ಮಹನೀಯರ ಪ್ರತಿಮೆಗಳಿಗೆ ಮಂಟಪಗಳನ್ನು ನಿರ್ಮಿಸಲಾಗಿದೆ. ಪ್ರತಿಮೆ, ಮಂಟಪ ನಿರ್ಮಾಣದ ಗುತ್ತಿಗೆ ಪಡೆದಿರುವ ರಮೇಶ್ ಎಂಬುವರು ನಾಲ್ವಡಿ ಮತ್ತು ಸರ್ ಎಂವಿ ಅವರ ಆಳೆತ್ತರದ ಪ್ರತಿಮೆ ಕೆತ್ತಲು ರಾಜಸ್ಥಾನದ ಶಿಲ್ಪಿಗೆ ಜವಾಬ್ದಾರಿ ಒಪ್ಪಿಸಿದ್ದಾರೆ. ಕೃಷ್ಣರಾಜ ಒಡೆಯರ್ ಪ್ರತಿಮೆ ಕೆತ್ತನೆ ಕಾರ್ಯ ಬಹುತೇಕ ಮುಗಿದಿದ್ದು, ಸರ್ ಎಂ. ವಿಶ್ವೇಶ್ವರಯ್ಯ ಅವರ ಪ್ರತಿಮೆ ನಿರ್ಮಾಣ ಕೆಲಸ ಈಗಷ್ಟೇ ▶ 8ನೇ ಪುಟಕ್ಕೆ

ಜು.19ಕ್ಕೆ ಮುಖ್ಯಮಂತ್ರಿ ನೇತೃತ್ವದಲ್ಲಿ ದಸರಾ ಉನ್ನತ ಸಮಿತಿ ಸಭೆ



ಮೈಸೂರು, ಜು.12(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಆಚರಣೆ ಅಂಗವಾಗಿ ಜು.19ರಂದು ಸಂಜೆ 4 ಗಂಟೆಗೆ ವಿಧಾನ ಸೌಧದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿ ಸಭೆ (ಹೈ ಪವರ್ ಕಮಿಟಿ ಮೀಟಿಂಗ್) ನಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಹೈ ಪವರ್ ಕಮಿಟಿ ಮೀಟಿಂಗ್ ಬಳಿಕ ಮುಖ್ಯಮಂತ್ರಿಗಳೇ ಮೈಸೂರಿಗೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಅಭಿವೃದ್ಧಿ ಹಾಗೂ ಇನ್ನಿತರೆ ಯಾತ್ರಾ ಸ್ಥಳಗಳ ಅಭಿವೃದ್ಧಿ ಕುರಿತು ಸಮಗ್ರವಾಗಿ ಸಭೆ ನಡೆಸಿ ಚರ್ಚಿಸಲಿದ್ದಾರೆ. ಮೈಸೂರಿಗೆ ಬಂದಂತಹ ಸಂದರ್ಭದಲ್ಲಿ ಫಿಲಂ ಸಿಟಿ ಕುರಿತು ಸಚಿವರಾದ ಮುರುಗೇಶ್ ನಿರಾಣಿ ಅವರೊಂದಿಗೆ ಸಭೆ ನಡೆಸಿ ತಿಳಿಸಲಿದ್ದಾರೆ ಎಂದರು.

ಧುಮ್ಮಿಕ್ಕಿ ಭೋರ್ಗರೆಯುತ್ತಿರುವ ಚುಂಚನಕಟ್ಟೆ 'ಧನುಷ್ಕೋಟಿ'

● ಜಲಧಾರೆ ಕಣ್ತುಂಬಿಕೊಳ್ಳಲು ಮುಗಿಬೀಳುತ್ತಿರುವ ಪ್ರವಾಸಿಗರು
● ಪುರಾಣದಲ್ಲೂ ಛಾಪು ಮೂಡಿಸಿರುವ ಚುಂಚನಕಟ್ಟೆ ಜಲಪಾತ

ಎಂ.ಟಿ.ಯೋಗೇಶ್ ಕುಮಾರ್

ಚುಂಚನಕಟ್ಟೆ, ಜು.12– ಶ್ರೀರಾಮನ ಪಾದ ಸ್ಪರ್ಶಕ್ಕೆ ಸಾಕ್ಷಿಯಾಗಿತ್ತು ಎಂಬ ಪುರಾಣ ಪ್ರತೀತಿಯುಳ್ಳ ಕೆ.ಆರ್.ನಗರದ ಚುಂಚನಕಟ್ಟೆಯ 'ಧನುಷ್ಕೋಟಿ' ಜಲಪಾತವು ವ್ಯಾಪಕ ಮಳೆಯ ಹಿನ್ನೆಲೆಯಲ್ಲಿ ಧುಮ್ಮಿಕ್ಕಿ ಹರಿಯುವ ಮೂಲಕ ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆ.

ಕಾವೇರಿ ಕಣಿವೆಯಲ್ಲಿ ಕಳೆದ ಹಲವು ದಿನಗಳಿಂದ ವ್ಯಾಪಕ ಮಳೆಯಾಗುತ್ತಿರುವ ಕಾರಣ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ. ಇದರಿಂದ ಅವಧಿಗೂ ಮುನ್ನವೇ ಧನುಷ್ಕೋಟಿ ಜಲಪಾತ ಉಕ್ಕಿ ಹರಿಯತೊಡಗಿದೆ. ಹಾರಂಗಿ ಜಲಾಶಯದಿಂದಲೂ ಅತೀ ಹೆಚ್ಚು ಪ್ರಮಾಣದಲ್ಲಿ ನದಿಗೆ ನೀರು ಬಿಡುತ್ತಿರುವ ಹಿನ್ನೆಲೆಯಲ್ಲಿ ಈ ಜಲಪಾತದ ವೈಭವ ಇಮ್ಮಡಿಗೊಂಡಿದೆ. ಕಳೆದ ಕೆಲವು ವರ್ಷಗಳಿಂದ ಈ ಜಲಪಾತದ ವೀಕ್ಷಣೆಗೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ಆ ಮೂಲಕ ಮೈಸೂರು ಭಾಗದ ಪ್ರವಾಸಿ ತಾಣಗಳಲ್ಲಿ ಈ ಜಲಪಾತವೂ ಗುರುತಿಸಿಕೊಂಡಿದೆ.



ಧುಮ್ಮಿಕ್ಕುವ ಧಾರೆ: ಈ ಬಾರಿ ಜುಲೈ ತಿಂಗಳ ಆರಂಭದಲ್ಲೇ ಚುಂಚನಕಟ್ಟೆ ಜಲಪಾತಕ್ಕೆ ಜೀವಕಳೆ ಬಂದಿದೆ. 65 ಅಡಿ ಎತ್ತರದಿಂದ ಧುಮ್ಮಿಕ್ಕುವ ನೀರು ಜಲಪಾತದಲ್ಲಿ ಹಾಲಿನ ನೊರೆಯಂತಹ ಚಿತ್ರಣದೊಂದಿಗೆ ನೋಡುಗರ ಕಣ್ಮನ ಸೆಳೆಯುತ್ತಿದೆ.

ಕಳೆದ 2 ವರ್ಷಗಳಿಂದ ಕೋವಿಡ್ ಹಿನ್ನೆಲೆಯಲ್ಲಿ ಈ ಜಲಪಾತದತ್ತ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿತ್ತು. ಈ ಬಾರಿ ರುದ್ರ ರಮಣೀಯ ದೃಶ್ಯ ಕಣ್ತುಂಬಿಕೊಳ್ಳಲು ನೂರಾರು ಪ್ರವಾಸಿಗರು ಆಗಮಿಸುತ್ತಿದ್ದಾರೆ. ಸ್ಥಳೀಯರೂ ಜಲಪಾತ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲೇ ಬರುತ್ತಿದ್ದಾರೆ. ಮೈಸೂರು, ಬೆಂಗಳೂರು, ಮಂಡ್ಯ ಸೇರಿದಂತೆ ವಿವಿಧೆಡೆಯಿಂದ ಬರುವ ಪ್ರವಾಸಿಗರ ನೆಚ್ಚಿನ ತಾಣವಾಗುತ್ತಿದೆ ಈ ಜಲಪಾತ.

ಚುರುಕಾದ ವ್ಯಾಪಾರ: ಜಲಪಾತ ವೀಕ್ಷಣೆಗೆ ಬರುವ ಪ್ರವಾಸಿಗರ ನಾಲಿಗೆ ತಣಿಸಲು ಹಲವು ವ್ಯಾಪಾರಿಗಳು ವಿವಿಧ ಬಗೆಯ ತಿನಿಸನ್ನು ಮಾರಾಟ ಮಾಡುತ್ತಿದ್ದಾರೆ. ಧನುಷ್ಕೋಟಿ ಬಳಿಯ ರಸ್ತೆ ಬದಿ ಹಣ್ಣು, ಪಾನಿಪುರಿ, ಮಸಾಲೆ ಪುರಿ, ಬಜ್ಜಿ–ಬೋಂಡ ಸೇರಿದಂತೆ ವಿವಿಧ ತಿನಿಸುಗಳ ವ್ಯಾಪಾರಿಗಳ ವಹಿವಾಟು ಜೋರಾಗಿದೆ.

ಸುಂದರ ತಾಣ, ಬಿಗಿ ಭದ್ರತೆ: ಈ ಜಲಪಾತದ ತಾಣವನ್ನು ಪ್ರವಾಸಿ ಕೇಂದ್ರವಾಗಿಸಲು ಪ್ರವಾಸೋದ್ಯಮ ಇಲಾಖೆ ಕಳೆದ ವರ್ಷವೇ 78.66 ಲಕ್ಷ ರೂ. ವೆಚ್ಚದಲ್ಲಿ ಇಂಟರ್‌ಲಾಕ್ ವ್ಯವಸ್ಥೆಯೊಂದಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ, ಜಲಪಾತ ವೀಕ್ಷಣೆಗೆ ಪರ್ಗೋಲಾ ಮಾದರಿಯಲ್ಲಿ ಗೋಪುರ ನಿರ್ಮಿಸಿದೆ. ಜಲಪಾತ ವೀಕ್ಷಣೆಗೆಂದು ಬರುವ ಪ್ರವಾಸಿಗರು ಅಪಾಯಕಾರಿ ಸ್ಥಳದತ್ತ ತೆರಳದಂತೆ ಪೊಲೀಸ್ ಭದ್ರತೆ ಏರ್ಪಡಿಸಲಾಗಿದೆ. ಸೀತಾ ಮಡು ಜಾಗಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಿದ್ದು, ಬ್ಯಾರಿಕೇಡ್ ಹಾಕಿ ಭದ್ರತೆ ಒದಗಿಸಲಾಗಿದೆ.

ಪುರಾಣದಲ್ಲೂ ಉಲ್ಲೇಖ, ಶ್ರೀರಾಮ, ಲಕ್ಷ್ಮಣ, ಸೀತೆಯ ಹೆಜ್ಜೆ...

ಧನುಷ್ಕೋಟಿ ಜಲಪಾತ ಪುರಾಣದಲ್ಲಿ ಉಲ್ಲೇಖವಾಗಿದೆ. ಜಲಪಾತದಲ್ಲಿ ಸೀತೆ 'ಮಡು' ಹೆಚ್ಚಿನ ಸಂಖ್ಯೆಯ ಪ್ರವಾಸಿಗರ ಸೆಳೆಯುತ್ತಿದೆ. ಪುರಾಣದಲ್ಲಿ ಚುಂಚನ ಕಟ್ಟೆಗೆ ಶ್ರೀರಾಮ, ಲಕ್ಷ್ಮಣ, ಸೀತೆ ಬಂದಿದ್ದರೆಂಬ ಪ್ರತೀತಿಯೂ ಇದೆ. ಆ ವೇಳೆ ಜಲಪಾತದ ಬಳಿ ಸೀತೆ ಸ್ನಾನ ಮಾಡುವಾಗ ಆಕಸ್ಮಿಕವಾಗಿ ಲಕ್ಷ್ಮಣ ಆ ಸ್ಥಳಕ್ಕೆ ಬಂದ. ಇದರಿಂದ ಸೀತಾ ಮಾತೆ ಲಕ್ಷ್ಮಣನ ಕಣ್ಣಿಗೆ ಬೀಳುವುದರಿಂದ ತಪ್ಪಿಸಿಕೊಳ್ಳಲು ಜಲಪಾತದ ಬಲಬದಿಗೆ ಬಂದಾಗ ದೊಡ್ಡ ಕಲ್ಲು ಬಂಡೆ ಸೀಳಿಕೊಂಡು ಸೀತೆಗೆ ಮರೆ ಮಾಡಿ ತಂತೆ. ಆ ಸ್ಥಳ ಸೀತೆ ಮಡು ಎಂದೇ ಪ್ರಖ್ಯಾತಿಗೊಂಡಿದೆ. ರಭಸವಾಗಿ ಹರಿಯುವ ನೀರು, ಸ್ನಾನಕ್ಕೆಂದು ಇಡಲಾಗಿದ್ದ ಎಣ್ಣೆ, ಸೀಗೆಕಾಯಿ ಇಟ್ಟಿದ್ದರೆನ್ನಲಾದ ಬಂಡೆ ಮೇಲಿಂದ ಧುಮುಕುವ ಕೆಂಪು ವರ್ಣ ಈಗಲೂ ಕಾಣುತ್ತದೆ. ರಾಮ, ಲಕ್ಷ್ಮಣರು ಬಂದಿದ್ದರು ಎಂಬ ಪ್ರತೀತಿ ಹಿನ್ನೆಲೆಯಲ್ಲಿ ಮೈಸೂರು ರಾಜವಂಶಸ್ಥ ಕೃಷ್ಣರಾಜ ಒಡೆಯರ್ ಅವರು ಧನುಷ್ಕೋಟಿ ಜಲಪಾತದ ಬಳಿ 'ಶ್ರೀರಾಮದೇವರ ದೇವಾಲಯ' ನಿರ್ಮಿಸಿದ್ದಾರೆ. ಇಂದಿಗೂ ಆ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರುತ್ತಿದೆ.

ರಾಜ್ಯದ ವಿವಿಧೆಡೆ ಫಲಪುಷ್ಪ ಪ್ರದರ್ಶನ

ಬೆಂಗಳೂರು, ಜು.12(ಕೆಎಂಶಿ)–ತೋಟಗಾರಿಕೆ ಇಲಾಖಾ ವತಿಯಿಂದ ಲಾಲ್‌ಬಾಗ್ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಫಲಪುಷ್ಪ ಪ್ರದರ್ಶನಗಳನ್ನು ನಡೆಸಲಾಗುವುದು ಎಂದು ತೋಟಗಾರಿಕೆ ಸಚಿವ ಮುನಿರತ್ನ ಇಂದಿಲ್ಲಿ ತಿಳಿಸಿದ್ದಾರೆ.





ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ಕಾರಣಗಳಿಂದ ಕಳೆದ ಎರಡು ವರ್ಷಗಳಿಂದ ಫಲಪುಷ್ಪ ಪ್ರದರ್ಶನ ನಡೆಸಿರಲಿಲ್ಲ. ನಗರದ ಲಾಲ್‌ಬಾಗ್‌ನಲ್ಲಿ ನಡೆಯಲಿರುವ ಪ್ರದರ್ಶನದಲ್ಲಿ ವಿದೇಶಗಳಿಂದಲೂ ಹೂವುಗಳನ್ನು ತರಿಸಲಾಗಿದೆ.ದಿ. ನಟ ಪುನೀತ್ ರಾಜ್‌ಕುಮಾರ್ ಹೆಸರಿನಲ್ಲಿ ಫ್ಲವರ್ ಶೋ. ರಾಜ್ಯದಲ್ಲಿ ಮಳೆಯಿಂದ ತೋಟಗಾರಿಕೆ ಬೆಳೆ ನಷ್ಟ ವಿಚಾರ. ಸಂಪೂರ್ಣ ವರದಿ ಅಧಿಕಾರಿಗಳು ತರಿಸುತ್ತಿದ್ದಾರೆ.ವರದಿ ಬಳಿಕ ರೈತರಿಗೆ ಮಾಡಬೇಕಿರುವ ಸಹಾಯವನ್ನು ಖಂಡಿತವಾಗಿಯೂ ಮಾಡುತ್ತೇವೆ.ಏನೇನು ನಷ್ಟ ಉಂಟಾಗಿದೆಯೋ ಅದನ್ನು ಗಮನಿಸುತ್ತೇವೆ. ಪ್ರಾಮಾಣಿಕವಾಗಿ ನಾವು ರೈತರ ಜೊತೆ ಇದ್ದೇವೆ ಎಂದರು.

ವಿರಾಟ ನಾಟಕೋತ್ಸವಕ್ಕೆ ಚಾಲನೆ

ಮೈಸೂರು, ಜು.12– ರಾಷ್ಟ್ರೀಯ ಸಂಘಟನೆಯಾದ ಸಂಸ್ಕಾರ ಭಾರತಿ ಮೈಸೂರು ಸಮಿತಿಯು ಜು.11ರಂದು ವಿರಾಟ್ ನಾಟಕೋತ್ಸವ ಅಭಿಯಾನಕ್ಕೆ ಚಾಲನೆ ನೀಡಿದೆ.



ಅಂದು ಚಂಪಕ ಅಕಾಡೆಮಿಯಲ್ಲಿ ನಡೆದ ಈ ವಿಶೇಷ ನಾಟಕ ಶಿಬಿರಕ್ಕೆ ಸಂಸ್ಕಾರ ಭಾರತಿ ಮೈಸೂರು ಸಮಿತಿ ಅಧ್ಯಕ್ಷರಾದ ಗಂಜೀಫಾ ರಘುಪತಿ ಭಟ್ಟರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಶಿಬಿರದ ಸಂಪನ್ಮೂಲ ವ್ಯಕ್ತಿ ಹಾಗೂ ಹಿರಿಯ ರಂಗಕರ್ಮಿ ನಾ.ಶ್ರೀನಿವಾಸ್ (ಪಾಪು) ಮತ್ತು ಉಪಾಧ್ಯಕ್ಷರಾದ ವಿದುಷಿ ನಾಗಲಕ್ಷ್ಮಿ ನಾಗರಾಜನ್, ಪ್ರಹ್ಲಾದ್, ಜಗದೀಶ್ ಇನ್ನಿತರರು ಉಪಸ್ಥಿತರಿದ್ದರು.

ಈ ನಾಟಕೋತ್ಸವ ಅಭಿಯಾನದ ಮೂಲಕ ಮೈಸೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರು ಮತ್ತು ಅವರ ವೀರತ್ವದ ಸನ್ನಿವೇಶಗಳನ್ನು ನಾಟಕದ ಮೂಲಕ ಜನರಿಗೆ ತಲುಪಿಸುವುದೇ ಸಂಘಟನೆಯ ಉದ್ದೇಶವಾಗಿದೆ. ಆ ಮೂಲಕ ಯುವ ಜನತೆಯಲ್ಲಿ ದೇಶಾಭಿಮಾನ ಮೂಡಿಸುವುದು, ಸ್ವಾತಂತ್ರ್ಯ ಹೋರಾಟಗಾರರ ಕಷ್ಟ ನಷ್ಟಗಳ ಅರಿವು ಮೂಡಿಸುವುದಾಗಿದೆ. ಹಲವು ಪ್ರದರ್ಶನಗಳನ್ನು ನೀಡಲು ಉದ್ದೇಶಿಸಿದ್ದು, ಸದ್ಯಕ್ಕೆ 4 ದಿನಗಳ ಶಿಬಿರಕ್ಕೆ ಅಧ್ಯಕ್ಷರು ಶುಭ ಕೋರಿದರು. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಈ ಸದುದ್ದೇಶಿತ ಬೃಹತ್ ಯೋಜನೆಯನ್ನು ಸಂಸ್ಕಾರ ಭಾರತಿ ಕರ್ನಾಟಕ ದಕ್ಷಿಣ ಪ್ರಾಂತ್ಯವು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಂಡಿದೆ.

ನಾಳೆ 'ವೈದ್ಯ ಸೇವಾ ರತ್ನ', 'ಮಾಧ್ಯಮ ಸೇವಾ ರತ್ನ' ಪ್ರಶಸ್ತಿ ಪ್ರದಾನ

ಮೈಸೂರು, ಜು.12– ವೈದ್ಯ ದಿನಾಚರಣೆ ಹಾಗೂ ಪತ್ರಿಕಾ ದಿನಾಚರಣೆ ಹಿನ್ನೆಲೆ ಮೈಸೂರಿನ ಸ್ನೇಹ ಸಿಂಚನ ಟ್ರಸ್ಟ್ ವತಿಯಿಂದ ಜು.14 ರಂದು ನಗರದ ತ್ಯಾಗರಾಜ ರಸ್ತೆಯಲ್ಲಿರುವ ಜಿಲ್ಲಾ ಪತ್ರಕರ್ತರ ಭವನದಲ್ಲಿ ವೈದ್ಯ ಸೇವಾ ರತ್ನ, ಮಾಧ್ಯಮ ಸೇವಾ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಅವರು ರಾಜಶೇಖರ್ ಆಸ್ಪತ್ರೆ ಮುಖ್ಯಸ್ಥರಾದ ಡಾ.ಹೆಚ್.ಬಿ. ರಾಜಶೇಖರ್, ಮೆಡಿವೇವ್ ಆಸ್ಪತ್ರೆ ಮುಖ್ಯಸ್ಥ ಡಾ.ಸಿ.ಶರತ್‌ಕುಮಾರ್ ಅವರಿಗೆ ವೈದ್ಯ ಸೇವಾ ರತ್ನ ಹಾಗೂ 'ಮೈಸೂರು ಮಿತ್ರ' ಪತ್ರಿಕೆ ಹಿರಿಯ ವರದಿಗಾರ ಎಸ್.ಟಿ.ರವಿಕುಮಾರ್ ಮತ್ತು ಕನ್ನಡಪ್ರಭ ದಿನಪತ್ರಿಕೆ ಛಾಯಾಗ್ರಾಹಕ ಅನುರಾಗ್ ಬಸವರಾಜು ಅವರಿಗೆ ಮಾಧ್ಯಮ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಮಣ್ಣಿನ ಸಂರಕ್ಷಣೆ ಅಭಿಯಾನಕ್ಕೆ ಮಾಜಿ ಸಂಸದ ಧ್ರುವನಾರಾಯಣ್ ಬೆಂಬಲ ಕೋರಿಕೆ



ಮೈಸೂರು, ಜು.12–ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ವತಿಯಿಂದ 'ಮಣ್ಣಿನ ರಕ್ಷಣೆ' ಅಭಿಯಾನಕ್ಕೆ ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಬೆಂಬಲ ಕೋರಲಾಯಿತು.

ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡರ ನೇತೃತ್ವದ ನಿಯೋಗ ಭಾನುವಾರ ಧ್ರುವನಾರಾಯಣ್ ಅವರನ್ನು ಜಲದರ್ಶಿನಿ ಅತಿಥಿ ಗೃಹದಲ್ಲಿ ಭೇಟಿ ಮಾಡಿ ರಾಸಾಯನಿಕ ಮುಕ್ತ ಬೇಸಾಯ ಹಾಗೂ ಮಣ್ಣಿನ ಸಂರಕ್ಷಣೆ ಕುರಿತು ಚರ್ಚಿಸಿತು.

ಈ ವೇಳೆ ಸಂಘದ ಉತ್ತಮ ಕಾರ್ಯಚಟುವಟಿಕೆ ಹಾಗೂ ಮಣ್ಣಿನ ಸಂರಕ್ಷಣೆ ಅಭಿಯಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಧ್ರುವನಾರಾಯಣ್ ಅವರು, ಇದೊಂದು ಒಳ್ಳೆ ಬೆಳವಣಿಗೆಯಾಗಿದ್ದು, ರಾಸಾಯನಿಕ ಮುಕ್ತ ವ್ಯವಸಾಯಕ್ಕೆ ಆದ್ಯತೆ ನೀಡಬೇಕಿದೆ. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಮಣ್ಣಿನ ಸತ್ವ ಹಾಳಾಗಲಿದ್ದು, ಅನ್ನದಾತ ಮತ್ತಷ್ಟು ಸಂಕಷ್ಟ ಪಡುವ ಸಂದರ್ಭ ಎದುರಾಗಲಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ರೈತ ಕಲ್ಯಾಣ ಸಂಘದ ಮಣ್ಣಿನ ಸಂರಕ್ಷಣೆ ಅಭಿಯಾನಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದು, ರಾಜ್ಯದ ಎಲ್ಲಾ ಭಾಗದ ರೈತರಿಗೂ ಈ ಬಗ್ಗೆ ಅರಿವು ಮೂಡಿಸಿ, ರಾಸಾಯನಿಕ ತ್ಯಜಿಸಿ, ಸಾವಯವ ಕೃಷಿಗೆ ಆದ್ಯತೆ ನೀಡುವಲ್ಲಿ ಅನ್ನದಾತರ ಜಾಗೃತಿ ಅತ್ಯಗತ್ಯ ಎಂಬ ಭರವಸೆಯ ಮಾತುಗಳನ್ನು ಇದೇ ವೇಳೆ ಧ್ರುವನಾರಾಯಣ್ ವ್ಯಕ್ತಪಡಿಸಿದರು.

ರೈತ ಕಲ್ಯಾಣ ಸಂಘದ ಅಭಿಯಾನ ಉತ್ತಮವಾಗಿದ್ದು, ನಾವು ಸಹ ಈ ಅಭಿಯಾನಕ್ಕೆ ಬೆಂಬಲ ಸೂಚಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ರೈತ ಕಲ್ಯಾಣ ಸಂಘದ ಪದಾಧಿಕಾರಿಗಳು ಹಾಗೂ ವಕೀಲ ನಾಗರಾಜಯ್ಯ, ಕಾಂಗ್ರೆಸ್ ಮುಖಂಡರಾದ ದೊರೆಸ್ವಾಮಿ ನಾಯಕರು, ಶಿವಪ್ಪ ದೇವರು, ಪ್ರದೀಪ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮುಡಾ ಸಿಎ ನಿವೇಶನಗಳ ಮಂಜೂರು ಪ್ರಕ್ರಿಯೆಗೆ ಚಾಲನೆ

● ಉಪ ಸಮಿತಿ ಸಭೆಯಲ್ಲಿ ಆಕಾಂಕ್ಷಿ ಸಂಸ್ಥೆಗಳ ಅರ್ಜಿ ಪರಿಶೀಲನೆ, ಪ್ರಾಧಿಕಾರ ಕರೆದಿದ್ದ 312ರ ಪೈಕಿ 222 ನಿವೇಶನಗಳಿಗೆ 446 ಸಂಸ್ಥೆಗಳಿಂದ ಅರ್ಜಿ ● 90 ಸಿಎ ನಿವೇಶನಗಳಿಗೆ ಒಂದೂ ಅರ್ಜಿ ಸಲ್ಲಿಕೆಯಾಗಿಲ್ಲ

ಮೈಸೂರು, ಜು.12(ಆರ್‌ಕೆ)–ತನ್ನ ಸಿಎ (ನಾಗರಿಕ ಸೌಲಭ್ಯ) ನಿವೇಶನಗಳ ಮಂಜೂರಾತಿ ಪ್ರಕ್ರಿಯೆಗೆ ಕಡೆಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಚಾಲನೆ ನೀಡಿದೆ.

ಮುಡಾ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷ ಹೆಚ್.ವಿ. ರಾಜೀವ್ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಿಎ ನಿವೇಶನ ಮಂಜೂರಾತಿ ಕುರಿತ ಉಪ ಸಮಿತಿ ಸಭೆಯಲ್ಲಿ ನಾಗರಿಕ ಸೌಲಭ್ಯ ನಿವೇಶನ ಕೋರಿ ಸಲ್ಲಿಕೆಯಾಗಿರುವ ಸಂಘ–ಸಂಸ್ಥೆಗಳ ಅರ್ಜಿಗಳ ಪರಿಶೀಲನೆ ನಡೆಸಲಾಯಿತು. ಸಂಘ–ಸಂಸ್ಥೆಗಳ ಅಸ್ತಿತ್ವ, ಅವುಗಳ ಕಾರ್ಯ ನಿರ್ವಹಣೆ, 3 ವರ್ಷಗಳ ಆಡಿಟ್ ವರದಿ, ಬ್ಯಾಂಕ್ ವಹಿವಾಟು, ಧ್ಯೇಯೋದ್ದೇಶಗಳು, ನಿವೇಶನ ಕೋರಿರುವ ಉದ್ದೇಶವು ಬೈಲಾದಲ್ಲಿ ಪ್ರಸ್ತಾಪವಾಗಿದೆಯೇ? ಸಂಸ್ಥೆಯ ಆರ್ಥಿಕ ಸದೃಢತೆ ಹಾಗೂ ನಿವೇಶನ ಮಂಜೂರು ಮಾಡಿದರೆ ಅದರಿಂದ ಸಾರ್ವಜನಿಕರಿಗೆ, ಸಮುದಾಯಕ್ಕೆ ಸಮಾಜಕ್ಕೆ ಅನುಕೂಲವಾಗುತ್ತದೆಯೇ? ಎಂಬಿತ್ಯಾದಿ ಅಂಶಗಳ ಬಗ್ಗೆ ಇಂದಿನ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.



ಅರ್ಜಿದಾರರು ಸಲ್ಲಿಸಿರುವ ದಾಖಲೆ ಪತ್ರಗಳು ನೈಜವಾಗಿರುವ ಬಗ್ಗೆ ಪರಿಶೀಲಿಸಿದ ಸಮಿತಿ ಸದಸ್ಯರು, ಎಲ್ಲವೂ ಸರಿ ಇದೆ ಎಂಬುದು ದೃಢಪಟ್ಟ ಒಂದು ನಿವೇಶನಕ್ಕೆ ಒಬ್ಬರೇ ಕೋರಿರುವ ಹಾಗೂ ಒಂದಕ್ಕೆ 2 ಅಥವಾ 3 ಅರ್ಜಿಗಳು ಬಂದಿರುವ ಪ್ರಕರಣಗಳನ್ನು ಮಾತ್ರ ಇಂದು ಇತ್ಯರ್ಥಗೊಳಿಸಿ ನಿಯಮಾನುಸಾರ ಮಂಜೂರಾತಿಗೆ ಅಂತಿಮಗೊಳಿಸಲಾಯಿತು.

ಒಂದೇ ಸಿಎ ನಿವೇಶನಕ್ಕೆ 3ಕ್ಕಿಂತ ಹೆಚ್ಚು ಮಂದಿ ಸಲ್ಲಿಸಿರುವ ಅರ್ಜಿಗಳನ್ನು ಮುಂದಿನ ಉಪ ಸಮಿತಿ ಸಭೆಗೆ ಮುಂದೂಡಲಾಗಿದ್ದು, ನಾಲ್ಕೈದು ದಿನದ ನಂತರ ಮತ್ತೊಂದು ಸಭೆ ನಡೆಸಿ ಉಳಿದಿರುವ ಅರ್ಜಿಗಳಿಗೆ ಗ್ರೀನ್ ಸಿಗ್ನಲ್ ನೀಡಲು ಇಂದಿನ ಸಭೆಯು ನಿರ್ಧರಿಸಿತು. ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ. ರಾಮದಾಸ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ನಗರ ಯೋಜಕ ಸದಸ್ಯ ಆರ್.ಶೇಷ, ಸಹಾಯಕ ನಿರ್ದೇಶಕ ಯಜ್ಞೇಂದ್ರ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.



ಮೈಸೂರು ನಗರದ ವಿವಿಧ ಮುಡಾ, ಖಾಸಗಿ ಬಡಾವಣೆಗಳಲ್ಲಿ ಲಭ್ಯವಿರುವ ವಿವಿಧ ಅಳತೆಯ 312 ಸಿಎ ನಿವೇಶನಗಳ ಮಂಜೂರಾತಿಗಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು 2021ರ ಅಕ್ಟೋಬರ್ ತಿಂಗಳಲ್ಲಿ ಅಧಿಸೂಚನೆ ಹೊರಡಿಸಿ ಅರ್ಹ ಸಂಘ–ಸಂಸ್ಥೆ, ಟ್ರಸ್ಟ್, ಪ್ರತಿಷ್ಠಾನ, ಸರ್ಕಾರಿ ಇಲಾಖೆಗಳಿಂದ ಅರ್ಜಿ ಆಹ್ವಾನಿಸಿ ಅರ್ಜಿ ಸಲ್ಲಿಸಲು ಡಿಸೆಂಬರ್ 31ರವರೆಗೆ ಅವಕಾಶ ನೀಡಿತ್ತು. 312 ನಿವೇಶನಗಳ ಪೈಕಿ 222ಕ್ಕೆ ಒಟ್ಟು 446 ಸಂಘ–ಸಂಸ್ಥೆಗಳು ಅರ್ಜಿ ಸಲ್ಲಿಸಿವೆ. ಅಂದರೆ ಒಂದೇ ಸಿಎ ನಿವೇಶನಕ್ಕೆ ಹಲವರು ಅರ್ಜಿ ಸಲ್ಲಿಸಿರುವುದು ಕಂಡು ಬಂದಿದ್ದು, ಇನ್ನೂ 90 ಸಿಎ ನಿವೇಶನಗಳಿಗೆ ಒಂದೂ ಅರ್ಜಿ ಬಂದಿಲ್ಲ ಎಂದು ಮೂಲಗಳು ತಿಳಿಸಿವೆ. ಮತ್ತೊಂದು ಸಭೆಯಲ್ಲಿ ಉಪ ಸಮಿತಿಯು ಅಂತಿಮಗೊಳಿಸಲಿದ್ದು, ಈ ತಿಂಗಳ ಕಡೇ ವಾರ ನಡೆಯಲಿರುವ ಮುಡಾ ಸಾಮಾನ್ಯ ಸಭೆಯಲ್ಲಿ ಮಂಜೂರಾತಿಗಾಗಿ ಆಯ್ಕೆಯಾದ ನಿವೇಶನ ಪಟ್ಟಿ ಪ್ರಕಟಿಸುವ ಬಗ್ಗೆ ಅನುಮೋದನೆ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಯೂಟ್ಯೂಬ್ ನೋಡಿ ಟೆಕ್ ಟೂಲ್ ಬಳಸಿ ಕಾರು ಕದಿಯುತ್ತಿದ್ದ ಖತರ್ನಾಕ್ ಕಳ್ಳನ ಬಂಧನ

ಬೆಂಗಳೂರು: ವಿಡಿಯೋ ಜಾಲತಾಣ ಯೂಟ್ಯೂಬ್ ನೋಡಿ ಟೆಕ್ ಟೂಲ್ ಬಳಸಿ ಕಾರುಗಳನ್ನು ಕ್ಷಣ ಮಾತ್ರದಲ್ಲೇ ಎಗರಿಸುತ್ತಿದ್ದ ಖತರ್ನಾಕ್ ಕಳ್ಳನನ್ನು ಪೊಲೀಸರು ಬಂಧಿಸುವಲ್ಲಿ ಕೊನೆಗೂ ಯಶಸ್ವಿಯಾಗಿದ್ದಾರೆ.

ಕೋಲಾರದ ಮುಳಬಾಗಿಲು ಮೂಲದ ಅರುಣ್‌ಕುಮಾರ್ (32 ವರ್ಷ) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಆತನಿಂದ ಹತ್ತು ಕಾರುಗಳು, ಒಂದು ಬೈಕ್ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ 'ಎಕ್ಸ್‌ಟೂಲ್ ಆಟೋ ಡಯಾಗ್ನಿಸ್ಟಿಕ್ ಟೂಲ್ಸ್' ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಈತನನ್ನು ಬಂಧಿಸಿರುವ ನಗರದ ಹೆಚ್‌ಎಸ್‌ಆರ್ ಬಡಾವಣೆಯ ಪೊಲೀಸರು ಸುಮಾರು 70 ಲಕ್ಷ ರೂ. ಮೌಲ್ಯದ 10 ಕಾರು ಮತ್ತು ಬೈಕ್‌ಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದುಬಂದಿದೆ. ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂ ಕಿನವರಾದ ಕುಮಾರ್, ಕದ್ದ ಕಾರುಗಳನ್ನು ತಮಿಳುನಾಡಿನ ತಿರುವಣ್ಣಾಮಲೈ, ಚೆನ್ನೈ, ವೆಲ್ಲೂರು, ನಾಮಕ್ಕಲ್, ನಾಗಪಟ್ಟಣಂ ಮತ್ತಿತರ ಕಡೆ ಅಗ್ಗದ ಬೆಲೆಗೆ ಮಾರಾಟ ಮಾಡಿದ್ದಾರೆ. ಹಣವನ್ನು ಪಾರ್ಟಿಗಳಿಗೆ ಖರ್ಚು ಮಾಡುತ್ತಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.07.2022 ಬುಧವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಪೂರ್ಣಿಮಾ, ನಕ್ಷತ್ರ : ಪೂಷಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ವ್ಯಾಸರಾಜ ಮಠ (ಸೋಸಲೆ):** ಮಠಾಧೀಶರಾದ 1008 ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರಿಂದ ತಪ್ತ ಮುದ್ರಾಧಾರಣೆ, ಸ್ಥಳ: ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಬೆಳಗ್ಗೆ 7ರಿಂದ.

■ **ಶ್ರೀ ಸಾಯಿಸರ್ವೇಶ್ವರ ಮಂದಿರ, ಮುಕ್ತಿಧಾಮ–ಮೈಸೂರು ಶಿರಡಿ :** ಗುರುಪೂರ್ಣಿಮಾ, ಬೆಳಗ್ಗೆ 7 ಗಂಟೆಗೆ ಕಾಕಡಾರತಿ, ಅಭಿಷೇಕ ಪೂಜಾ ಕಾರ್ಯಕ್ರಮ, 12.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, 3.30ಕ್ಕೆ ಕುಂಕುಮಾರ್ಚನೆ, ರಾತ್ರಿ 9ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಸಾಯಿಸರ್ವೇಶ್ವರ ಮಂದಿರ, ಗೋಕುಲಂ 2ನೇ ಹಂತ.

■ **ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್ :** ಗುರುಪೂರ್ಣಿಮಾ ಕಾರ್ಯಕ್ರಮ, ಕಾಕಡಾರತಿ, ಜಲಾಭಿಷೇಕ, ಪುಷ್ಪಾರ್ಚನೆ, ಪ್ರಾಕಾರೋತ್ಸವ, ಶೋಡಶೋಪಚಾರ ಪೂಜೆ, ನೈವೇದ್ಯಾರತಿ, ದೂಪಾದರತಿ, ಶೇಜಾರತಿ, ಸ್ಥಳ: ಶಿರಡಿಸಾಯಿ ಶಕ್ತಿ ಸನ್ನಿಧಿ, ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್, ಬೆಳಗ್ಗೆ 7 ಗಂಟೆಯಿಂದ.

■ **ಕ್ರೈಸ್ಟ್ ಕಾಲೇಜು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ :** ಪತ್ರಿಕಾ ದಿನಾಚರಣೆ ಹಾಗೂ ಸ್ಪಾರ್ಕ್‌ಬಜ್ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ಎಂ.ಎಸ್. ಸಪ್ನಾ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಫಾ. ಬಿಜು ಪಿ.ಡಿ., ಸ್ಥಳ:ಕಾಲೇಜು ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಸಿಎಸ್‌ಐಆರ್–ಸಿಎಫ್‌ಟಿಆರ್‌ಐ:** ಡಾ.ಬಿ.ಆರ್.ಅಂಬೇಡ್ಕರ್‌ರವರ 131ನೇ ಜಯಂತ್ಯೋತ್ಸವದ ಪ್ರಯುಕ್ತ ಡಾ.ಅಂಬೇಡ್ಕರ್ ಮತ್ತು ಭಾರತೀಯ ಸಂವಿಧಾನ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಪೊಲೀಸ್ ಮಹಾನಿರ್ದೇಶಕ (ತರಬೇತಿ) ಡಾ.ರವೀಂದ್ರನಾಥ್, ಅಧ್ಯಕ್ಷತೆ: ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಸ್ಥಳ: ಐಎಫ್‌ಟಿಟಿಸಿ ಸಭಾಂಗಣ, ಸಿಎಫ್‌ಟಿಆರ್‌ಐ, ಮಧ್ಯಾಹ್ನ 2.45ಕ್ಕೆ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ರಂಗ ಸಂಭ್ರಮ–2022, ಶ್ರೀ ಗುರುಕಲಾ ಶಾಲೆ ಕಲಾವಿದರಿಂದ ಎಚ್.ಎಸ್. ವೆಂಕಟೇಶ್‌ಮೂರ್ತಿ ವಿರಚಿತ 'ಮಥನ' ಪೌರಾಣಿಕ ನಾಟಕ, ನಿರ್ದೇಶನ : ಹೆಚ್.ಎಸ್. ಕವಿತಾ ಧನಂಜಯ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಬೆಳಗ್ಗೆ 6ಕ್ಕೆ ಕಾಲಾಗ್ನಿಶಮನ ದತ್ತಾತ್ರೇಯ ಸ್ವಾಮಿಗೆ ಸುಪ್ರಭಾತ ಸೇವೆ, ಪವಮಾನ ಹೋಮ, 8ಕ್ಕೆ ಗುರುಪರಂಪರಾ ಪೂಜೆ, ವ್ಯಾಸ ಪೂಜೆ, ಚೈತನ್ಯಾರ್ಚನೆ, 11ಕ್ಕೆ ಪವಮಾನ ಹೋಮ, ದತ್ತ ಹೋಮ, ಪೂರ್ಣಾಹುತಿ, ಸದ್ಗುರು ಪಾದುಕಾ ಪೂಜೆ, ಸಂಜೆ 5ಕ್ಕೆ ಶ್ರೀ ಚಕ್ರಪೂಜೆ, 6ಕ್ಕೆ ಶ್ರೀಗುರು ಗೀತಾ ಪಾರಾಯಣ, ಸಂಜೆ 7ಕ್ಕೆ ಚಾತುರ್ಮಾಸ್ಯ ಪ್ರವಚನ–ವರಾಹ ಪುರಾಣ, ಸ್ಥಳ: ಶ್ರೀಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ, ಊಟಿ ರಸ್ತೆ.

■ **ಚಿನ್ಮಯ ಮಿಷನ್ ಮೈಸೂರು :** ಸ್ವಾಮಿ ಅಪರಾಜಿತನಂದ ಅವರಿಂದ ಇಂಗ್ಲಿಷ್‌ನಲ್ಲಿ ಗೀತಾ ಜ್ಞಾನ ಯಜ್ಞ, ಪುರುಷೋತ್ತಮ ಯೋಗ (ಭಗವದ್ಗೀತೆಯ 15 ಚಾಪ್ಟರ್) ಕುರಿತು ಉಪನ್ಯಾಸ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಶ್ರೀ ಗುರುಪೂರ್ಣಿಮೆ, ಬೆಳಗ್ಗೆ 5.15ಕ್ಕೆ ನಾರಾಯಣ ಸೂಕ್ತಮ್, ಆಚಾರ್ಯೋಪದೇಶಃ, ಗುರುಸ್ತೋತ್ರ, ಮಂಗಳಾರತಿ ಮತ್ತು ಭಜನೆ, ಶ್ರೀ ವಿಷ್ಣುಸಹಸ್ರನಾಮ ಪಾರಾಯಣ, ಪೂಜೆ ಮತ್ತು ಭಜನೆ, ಗ್ರಂಥವಾಚನ, ಶ್ರೀಗುರುಪೂರ್ಣಿಮೆಯ ಬಗ್ಗೆ ಪ್ರವಚನ ಮತ್ತು ಪುಸ್ತಕ ಬಿಡುಗಡೆ, ಶ್ರೀರಾಮಕೃಷ್ಣ ಅಷ್ಟೋತ್ತರ ಅರ್ಚನೆ, ಆರತಿ, ಪ್ರಸಾದ ವಿನಿಯೋಗ, ಸಂಜೆ 6.30ರಿಂದ ವೇದ ಪಠಣ, ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖ ಶಿಖಾಂತ –ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, 6.50 ರೈತರಿಗೆ ಸಲಹೆ, 7.15 ಆದಾಯಕರ ಲೆಕ್ಕಾಚಾರ ಹೇಗೆ, ಮೈಸೂರಿನ ಲೆಕ್ಕ ಪರಿಶೋಧಕ ರವಿಕುಮಾರ್ ಅವರೊಡನೆ ಸಂದರ್ಶನ. ಸಂದರ್ಶಕರು–ದಿವಾಕರ ಹೆಗಡೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ನರಸಿಂಹಲು ವಾಡವಟ್ಟಿ–ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವಿ.ವಂದನ, 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, ಕೊರೊನಾ ಕನಸಿನ ಸುತ್ತ ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ್, 1.20 ಭಾವಗೀತೆ–ರಜನಿ ಅನಿಲ್, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ. ಭಾಗವಹಿಸುವವರು ಆನೂರು ಆರ್. ಅನಂತ ಕೃಷ್ಣಶರ್ಮ, 4.00 ಮಹಿಳಾರಂಗ–ಸ್ತ್ರೀ ಚೇತನ, ಉದ್ಯಮಿ ಶಿಲ್ಪಾ ಪ್ರಸಾದ್ ಅವರೊಂದಿಗೆ ಸಂವಾದದ ನೇರ ಪ್ರಸಾರ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಅನುರಾಧಾ ಮೂರ್ತಿ, 6.50 ಕೃಷಿರಂಗ–ಕಿಸಾನ್‌ವಾಣಿ, ಬಹು ಬೆಳೆ ಪದ್ಧತಿ ಹಾಗೂ ಫಲವತ್ತತೆ ಕುರಿತು ಆರ್. ರೋಹಿತ್ ಅವರೊಡನೆ ಮಾತುಕತೆ, 9.05 ಕ್ಷಿತಿಜ, Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಜಾನಪದ ಸಂಗೀತ–ಮೈಸೂರು ಜಿ. ಗುರುರಾಜ್ ಮತ್ತು ತಂಡ ಮಹದೇವಸ್ವಾಮಿ ಮತ್ತು ಸಂಗಡಿಗರು. ಪ್ರಸ್ತುತಿ–ಅಬ್ದುಲ್ ರಶೀದ್, 10.30 ಸವಿನೆನಪು

■ **ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್:** ಗುರುಪೂರ್ಣಿಮೆ, ಸಾಮೂಹಿಕ ಗ್ರಹದೋಷ ನಿವಾರಣೆ, ಸಾಯಿ ಪೂಜೆ, ಸಂಕಲ್ಪ, ಪುಷ್ಪಾರ್ಚನೆ, ಸಾಯಿಕಳಸ ಸ್ಥಾಪನೆ, ದತ್ತಾತ್ರೇಯ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಪುಷ್ಪಾರ್ಚನೆ, ಗುರುಭಜನೆ, ಪೂಜೆ, ಪ್ರಸಾದ, ಸ್ಥಳ: ಬಾಬಾ ಮಂದಿರ, ಹೆಬ್ಬಾಳು 2ನೇ ಹಂತ.

■ **ಮೈಸೂರು ವಿಶ್ವವಿದ್ಯಾನಿಲಯ, ಸಾಮಾಜಿಕ ಕಾರ್ಯ ಅಧ್ಯಯನ ವಿಭಾಗ:** ಮಾನವೀಯತೆಗಾಗಿ ಯೋಗ ಕುರಿತು ಉಪನ್ಯಾಸ ಮಾಲಿಕೆ, ಮುಖ್ಯ ಅತಿಥಿಗಳು : ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಎನ್.ಆರ್. ಮಂಜುನಾಥ್, ಸಂಪನ್ಮೂಲ ವ್ಯಕ್ತಿ : ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎ.ಎಸ್.ಚಂದ್ರಶೇಖರ್, ಅಧ್ಯಕ್ಷತೆ: ಡಾ.ಹೆಚ್.ಪಿ.ಜ್ಯೋತಿ, ಸ್ಥಳ: ಸೆಮಿನಾರ್ ಹಾಲ್, ಮಾನಸಗಂಗೋತ್ರಿ, ಮಧ್ಯಾಹ್ನ 3ರಿಂದ.

■ **ಸ್ವರ್ಣ ನೃಸಿಂಹ ದತ್ತಸಾಯಿ ಪೀಠಿಕ ಸೇವಾ ಟ್ರಸ್ಟ್:** ಗುರುಪೂರ್ಣಿಮೆ, ಬೆಳಗ್ಗೆ 6 ಗಂಟೆಗೆ ವ್ಯಾಸಪೂಜೆ, ಗಣಪತಿ ಹೋಮ, ಸುದರ್ಶನ ಹೋಮ, ದುರ್ಗಾ ಹೋಮ, ದತ್ತಾತ್ರೇಯ ಹೋಮ, ವೆಂಕಟಾಚಲ ಅವಧೂತರ ಹೋಮ, ಪೂರ್ಣಾಹುತಿ, ಪಾದುಕಾ ಪೂಜೆ, ವಿದ್ಯಾನಂದಶ್ರೀ ಫಲಾನುಭವಿ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ ವಿತರಣೆ, ಗುರುಗಳಿಂದ ಆಶೀರ್ವಚನ, ಭಿಕ್ಷಾವಂದನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಆರ್.ಆರ್.ವೆಡ್ಡಿಂಗ್ ಬೆಲ್ಸ್, ಮೈಸೂರು–ಬನ್ನೂರು ರಸ್ತೆ, ವಾಜಮಂಗಲ ಗ್ರಾಮ.

■ **ಶ್ರೀ ಸುತ್ತೂರು ಮಠ:** ಗುರುಪೂರ್ಣಿಮಾ ಹಾಗೂ ಬೆಳದಿಂಗಳ ಸಂಗೀತ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್‌ರಿಂದ ಉಪನ್ಯಾಸ, ವಿದ್ವಾನ್ ಗಾನಪ್ರವೀಣ್ ಯೋಗೀಶ ಶರ್ಮ ಬಳ್ಳಪದವು ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್‌ಕುಮಾರ್ –ವಯೋಲಿನ್, ವಿದ್ವಾನ್ ಶಿವಶಂಕರಸ್ವಾಮಿ–ಮೃದಂಗ, ಸ್ಥಳ: ಶ್ರೀ ಸುತ್ತೂರು ಮಠ, ಸಂಜೆ 5.30ಕ್ಕೆ.

■ **ತನುಮನ ಸಂಸ್ಥೆ :** ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ ಮತ್ತು ಬುದ್ಧನಾಡ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಸಮ್ಮುಖ : ಪೂಜ್ಯ ಬಂತೆ ತಿಸ್ಸರವರು, ಸಾನ್ನಿಧ್ಯ : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಮಾಜಿ ಸಂಸದ ಆರ್. ಧ್ರುವನಾರಾಯಣ್, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ರಸ್ತೆ, ಸಂಜೆ 5.30ಕ್ಕೆ.

■ **ದೀಕ್ಷಿತ್ ಆರೋಗ್ಯ ಧಾಮ:** ಆನಂದ ಆರೋಗ್ಯ ಕಾರ್ಯಕ್ರಮ, ವಿದ್ವಾನ್ ಹೆಚ್.ಎಸ್.ರಾಕೇಶ್ ಅಯ್ಯರ್ ಅವರಿಂದ ಲಘು ಶಾಸ್ತ್ರೀಯ ಸಂಗೀತ, ವಿದ್ವಾನ್ ವಿ. ರಘುನಂದನ ಭಾರ್ಗವ –ಮೃದಂಗ, ವಿದ್ವಾನ್ ಅಮೋಘ ನಾದುರ್–ಪಿಟೀಲು ವಾದನ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.

■ **ಸುವರ್ಣ ಬೆಳಕು ಫೌಂಡೇಷನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಗುರುವಂದನಾ ಕಾರ್ಯಕ್ರಮ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ: ಸುಜೇಂದ್ರರಾವ್, ಮುಖ್ಯ ಅತಿಥಿಗಳು : ಎನ್.ಎಂ.ನವೀನ್‌ಕುಮಾರ್, ವೀರಭದ್ರಯ್ಯ ಹಿರೇಮಠ, ಡಾ.ದುಂಡಯ್ಯ ಪೂಜಾರ, ಸ್ಥಳ: ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ನಮೋ ಯೋಗ ಭವನ :** ಗುರುಪೂರ್ಣಿಮೆ, ಪ್ರಾಸ್ತಾವಿಕ ನುಡಿ: ಯೋಗಪ್ರಕಾಶ್, ಅಧ್ಯಕ್ಷತೆ: ಮೈಸೂರು ಯೋಗ ಅಸೋಸಿಯೇಷನ್ ಗೌರವ ಅಧ್ಯಕ್ಷ ಬಿ.ವಿ.ಮಂಜುನಾಥ್, ಮುಖ್ಯ ಅತಿಥಿಗಳು: ಡಾ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕಿ ಡಾ.ಕೆ.ಲೀಲಾಪ್ರಕಾಶ್ ಸ್ಥಳ: ನಮೋ ಯೋಗ ಭವನ, ಸಂಜೆ 7ಕ್ಕೆ.

ಕನ್ನಡ ನಾಮಫಲಕ ಅಳವಡಿಸದ ಅಂಗಡಿ-ಮುಂಗಟ್ಟು, ಸಂಸ್ಥೆಗಳ ವಿರುದ್ಧ 10 ದಿನಗಳೊಳಗೆ ಕ್ರಮ ಜರುಗಿಸಿ

● ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಸೂಚನೆ ● ಸದ್ಯ ಇಂತಹ 174 ಸಂಸ್ಥೆ-ಅಂಗಡಿ ವಿರುದ್ಧ ಪ್ರಾಧಿಕಾರಕ್ಕೆ ದೂರು ಬಂದಿದೆ. ಈ ಸಂಖ್ಯೆ ಇನ್ನೂ ಹೆಚ್ಚಿರಬಹುದು, ಪರಿಶೀಲಿಸಿ; ನಾಗಾಭರಣ



ಮೈಸೂರು ಡಿಸಿ ಕಚೇರಿ ಸಭಾಂಗಣದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಡಾ.ಗುಬ್ಬಿಗೂಡು ರಮೇಶ್, ಎಡಿಸಿ ಮಂಜುನಾಥಸ್ವಾಮಿ, ಡಾ.ಸುದರ್ಶನ, ಡಿಸಿಪಿ ಗೀತಾ ಪ್ರಸನ್ನ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಜು.12(ಪಿಎಂ)–ಕನ್ನಡ ನಾಮಫಲಕ ಅಳವಡಿಸದೇ ಸರ್ಕಾರದ ಆದೇಶ ಉಲ್ಲಂಘಿಸಿರುವ ಅಂಗಡಿ–ಮುಂಗಟ್ಟು ಮತ್ತು ಸಂಸ್ಥೆಗಳ ವಿರುದ್ಧ 10 ದಿನಗಳೊಳಗೆ ಕ್ರಮ ಜರುಗಿಸಬೇಕು. ಮುಲಾಜಿಲ್ಲದೆ, ಸದರಿ ನಾಮಫಲಕಗಳನ್ನು ತೆರವುಗೊಳಿಸಬೇಕು ಎಂದು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಸೂಚನೆ ನೀಡಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಪಾಲಿಕೆ ವ್ಯಾಪ್ತಿಯಲ್ಲಿ 174 ಅಂಗಡಿ–ಮುಂಗಟ್ಟು ಮತ್ತು ವಿವಿಧ ಸಂಸ್ಥೆಗಳಲ್ಲಿ ಕನ್ನಡ ನಾಮಫಲಕ ಹಾಕದೇ ಇರುವ ದೂರು ಪ್ರಾಧಿಕಾರಕ್ಕೆ ಸಲ್ಲಿಕೆಯಾಗಿವೆ. ಈ ಸಂಬಂಧ ವಾರ ಅಥವಾ 10 ದಿನಗಳಲ್ಲಿ ಕ್ರಮ ಆಗಬೇಕು. ಇದಕ್ಕೆ ನಿಮಗೆ ಯಾವುದೇ ಸಮಸ್ಯೆ ಆದರೂ ಹೇಳಿ, ಪರಿಹರಿಸಲಾಗುವುದು ಎಂದು ತಿಳಿಸಿದರು.

ಇದಕ್ಕೂ ಮುನ್ನ ಸದರಿ ವಿಷಯಕ್ಕೆ ಸಂಬಂಧ ಸಭೆಗೆ ಮಾಹಿತಿ ನೀಡಿದ ಮೈಸೂರು ನಗರ ಪಾಲಿಕೆ ಉಪ ಆಯುಕ್ತ (ಕಂದಾಯ) ಡಾ.ಎಂ.ದಾಸೇಗೌಡ, ಪಾಲಿಕೆಯ 9 ವಲಯಗಳಲ್ಲಿ ಪೂರ್ಣ ಇಂಗ್ಲಿಷ್ ಬಳಕೆಯ ನಾಮಫಲಕ ತೆರವುಗೊಳಿಸುವ ಕ್ರಮ ವಹಿಸಲಾಗಿದೆ ಎಂದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪ್ರಾಧಿಕಾರದ ಸದಸ್ಯ ಡಾ.ಗುಬ್ಬಿಗೂಡು ರಮೇಶ್, ಕನ್ನಡ ನಾಮಫಲಕ ಅಳವಡಿಸದೇ ಇರುವ ಬಗ್ಗೆ 174 ಸಂಸ್ಥೆ–ಅಂಗಡಿಗಳ ಸಂಬಂಧ ಪ್ರಾಧಿಕಾರಕ್ಕೆ ದೂರು ಸಲ್ಲಿಕೆಯಾಗಿವೆ. ಈ ಸಂಬಂಧ ಪಾಲಿಕೆ ಯಾವ ಕ್ರಮ ವಹಿಸಿದೆ? ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಡಾ.ದಾಸೇಗೌಡ, ಕೈಗೊಂಡಿರುವ ಕ್ರಮಗಳ ಬಗ್ಗೆ ವಲಯ ಕಚೇರಿಗಳಿಂದ ಮಾಹಿತಿ ಪಡೆದು ಪ್ರಾಧಿಕಾರಕ್ಕೆ ಕಳುಹಿಸುವುದಾಗಿ ತಿಳಿಸಿದರು.

ಈ ವೇಳೆ ಮಾತು ಮುಂದುವರೆಸಿದ ನಾಗಾಭರಣ, ಈ ಬಗ್ಗೆ ಮೈಸೂರಿನಿಂದ ನಿರಂತರವಾಗಿ ದೂರು ಬರುತ್ತಿವೆ. ಈ 174ರ ಸಂಬಂಧ ತ್ವರಿತವಾಗಿ ಕ್ರಮ ಆಗಿಲ್ಲ. ಈಗ ಶೀಘ್ರ ಕ್ರಮ ಆಗಲೇಬೇಕು. ಸಮಯಾವಕಾಶ ನೀಡಿದರೆ ಪ್ರಯೋಜನವಿಲ್ಲ. ನೀವೇ ತೆರವಿಗೆ ಮುಂದಾಗಿ. ಜೊತೆಗೆ ಪರವಾನಗಿ ಕೊಡುವಾಗ ಮಾರ್ಗಸೂಚಿಯಲ್ಲಿ ಕನ್ನಡ ನಾಮಫಲಕ ಕಡ್ಡಾಯದ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಿ ಎಂದು ಮಾರ್ಗದರ್ಶನ ನೀಡಿದರು.

ಇದೇ ವೇಳೆ ಮಾತನಾಡಿದ ಡಾ.ಗುಬ್ಬಿಗೂಡು ರಮೇಶ್, ಪರವಾನಗಿ ನವೀಕರಣಕ್ಕೆ ಅರ್ಜಿ ಸಲ್ಲಿಸುವಾಗ ಅದರೊಂದಿಗೆ ನಾಮಫಲಕದ ಫೋಟೋ ಲಗತ್ತಿಸುವುದನ್ನು ಕಡ್ಡಾಯಗೊಳಿಸಲು ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಬಳಿಕ ಮಾತನಾಡಿದ ನಾಗಾಭರಣ, ಕನ್ನಡ ರಹಿತ ನಾಮಫಲಕ ತೆರವು ಕಾರ್ಯಾಚರಣೆ ಸಂಬಂಧ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರೊಂದಿಗೆ ಸಭೆ ನಡೆಸಿ ಎಂದರಲ್ಲದೆ, ಕಾರ್ಯಾಚರಣೆಯ ರೂಪುರೇಷೆ ಸಿದ್ಧಪಡಿಸಿಕೊಂಡು ಮುಂದುವರೆಯುವಂತೆ ನಿರ್ದೇಶನ ನೀಡಿದರು. ಕನ್ನಡ ರಹಿತ ನಾಮಫಲಕ ಕೇವಲ 174 ಮಾತ್ರವಲ್ಲ, 1,074 ಇರುವುದನ್ನು ಪತ್ತೆ ಮಾಡಿ, ಆವಾಗ ಪಾಲಿಕೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಿಗೆ ಇದೇ ವೇಳೆ ನಾಗಾಭರಣ ಸಲಹೆ ನೀಡಿದರು.

ಕನ್ನಡ ನಾಮಫಲಕಕ್ಕೆ ಸಂಬಂಧಿಸಿದಂತೆ ಆರಂಭದಲ್ಲೇ ಮಾತನಾಡಿದ ಎಡಿಸಿ ಡಾ.ಮಂಜುನಾಥಸ್ವಾಮಿ, ಮೈಸೂರು ಜಿಲ್ಲೆಯಲ್ಲಿ ಕನ್ನಡ ನಾಮಫಲಕ ಕಡ್ಡಾಯವಾಗಿ ಹಾಕದೇ ಸರ್ಕಾರದ ಆದೇಶ ಉಲ್ಲಂಘಿಸಿರುವ ಸಂಸ್ಥೆ, ಅಂಗಡಿ–ಮುಂಗಟ್ಟುಗಳಿಗೆ ನೋಟಿಸ್ ಜಾರಿಗೊಳಿಸಲು 2017ರ ಮೇ 10ರಂದು ಪ್ರಾಧಿಕಾರದ ಅಂದಿನ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಈ ಸಂಬಂಧ ಶಿಸ್ತು ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ಹಾಗೂ ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಲಾಗಿತ್ತು ಎಂಬ ವಿಷಯವನ್ನು ಸಭೆಯ ಮುಂದಿಟ್ಟಿದ್ದರು.

ಅಂತರ್ಜಾಲದಲ್ಲಿ ಕನ್ನಡಕ್ಕಿರಲಿ ಆದ್ಯತೆ: ಕರ್ನಾಟಕ ಸರ್ಕಾರದ ಎಲ್ಲಾ ವೆಬ್‌ಸೈಟ್‌ಗಳಲ್ಲಿ ಮೊಟ್ಟ ಮೊದಲ ಆದ್ಯತೆ ಕನ್ನಡಕ್ಕೆ ಇರಬೇಕು. ಹಿಂದೆ ರಾಜ್ಯ ಸರ್ಕಾರ ವೆಬ್‌ಸೈಟ್ ವಿನ್ಯಾಸ ಮಾಡುತ್ತಿದ್ದ ಕೇಂದ್ರ ಸರ್ಕಾರದ ಎನ್‌ಐಸಿ ಬದಲು ರಾಜ್ಯ ಸರ್ಕಾರವೇ ಮಾಡುತ್ತಿದೆ. ಕನ್ನಡಕ್ಕೆ ಪೂರಕವಾಗಿ ಅಗತ್ಯ ವಿನ್ಯಾಸ ಮಾಡಿಸಿಕೊಳ್ಳಲು ಅಧಿಕಾರಿಗಳಿಗೆ ಸಂಬಂಧಿಸಿದವರ ಮೊಬೈಲ್ ಸಂಖ್ಯೆಯನ್ನು ಸಭೆಯಲ್ಲಿ ನೀಡಲಾಯಿತು.

ಕೆಡಿಪಿ ಸಭೆ ಅಜೆಂಡಾದಲ್ಲಿ ಕನ್ನಡವೂ ಸೇರಲಿ: ಕೆಡಿಪಿ ಸಭೆಯ ಕಾರ್ಯಸೂಚಿಯಲ್ಲಿ ಕನ್ನಡ ಅನುಷ್ಠಾನ ಕುರಿತು ಪ್ರಗತಿ ಪರಿಶೀಲನೆಯ ವಿಷಯ ಅಳವಡಿಸದಿರುವ ಬಗ್ಗೆ ನಾಗಾಭರಣ ಆಕ್ಷೇಪ ವ್ಯಕ್ತಪಡಿಸಿದರು. ಕನ್ನಡ ಜಾಗೃತಿ ಸದಸ್ಯರಿಗೂ ಕೆಡಿಪಿ ಸಭೆಗೆ ಆಹ್ವಾನ ನೀಡಬೇಕು ಎಂದೂ ಸೂಚಿಸಿದರು. ಇದೇ ವೇಳೆ ಮಾತನಾಡಿದ ಎಡಿಸಿ ಮಂಜುನಾಥಸ್ವಾಮಿ, ಶೀಘ್ರದಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಈ ವಿಷಯ ಅಳವಡಿಸಲು ಜಿಪಂ ಕಚೇರಿ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿಗಳ ಸಭೆಯಲ್ಲಿಯೂ ಈ ಕ್ರಮ ವಹಿಸಬೇಕೆಂದು ನಾಗಾಭರಣ, ಇದೇ ವೇಳೆ ನಿರ್ದೇಶನ ನೀಡಿದರು.

ಶೇ.100ರಷ್ಟು ಕನ್ನಡಿಗರಿಗೇ ಅವಕಾಶ: ಎಡಿಸಿ ಮಂಜುನಾಥಸ್ವಾಮಿ ಮಾತನಾಡಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ಖಾಸಗಿ ಐಟಿ–ಬಿಟಿ ಕಾರ್ಖಾನೆಗಳು, ಕೈಗಾರಿಕೆಗಳು ಮತ್ತು ಕೇಂದ್ರ ಸರ್ಕಾರಿ ಉದ್ದಿಮೆಗಳಲ್ಲಿ ಗ್ರೂಪ್ ಸಿ ಮತ್ತು ಡಿ ದರ್ಜೆ ಹುದ್ದೆಗಳಲ್ಲಿ ಶೇ.100ರಷ್ಟು ಕನ್ನಡಿಗರಿಗೇ ಅವಕಾಶ ನೀಡುವುದನ್ನು ಕಡ್ಡಾಯಗೊಳಿಸಬೇಕೆಂದು 2017ರಲ್ಲಿ ಪ್ರಾಧಿಕಾರ ಸಭೆಯ ನಡಾವಳಿಯಾಗಿದೆ ಎಂದು ಮಾಹಿತಿ ನೀಡಿದರು.

ಈ ಬಗ್ಗೆ ಸಭೆಗೆ ಮಾಹಿತಿ ನೀಡಿದ ಇಲಾಖೆ ಅಧಿಕಾರಿ, ಇತ್ತೀಚೆಗಷ್ಟೇ ಇಲ್ಲಿಗೆ ವರ್ಗವಾಗಿದ್ದು, ಪರಿಶೀಲಿಸಿ, ಈ ನಿಯಮಾವಳಿ ಪಾಲಿಸಿಲ್ಲವಾದರೆ ನೋಟಿಸ್ ನೀಡಲಾಗುವುದು. ಕೈಗೊಂಡ ಕ್ರಮಗಳ ಬಗ್ಗೆ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸಲಾಗುವುದು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನಾಗಾಭರಣ, ಹಿಂದಿನ ಅಧಿಕಾರಿಗಳು ಈ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕೆಂದು ಸೂಚಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ, ಡಿಸಿಪಿ ಗೀತಾ ಪ್ರಸನ್ನ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇಅರಸ್, ಪ್ರಾಧಿಕಾರದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಮಹೇಶ್ ಮತ್ತಿತರ ಅಧಿಕಾರಿಗಳು, ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರು ಸಭೆಯಲ್ಲಿದ್ದರು.

ಕೇಂದ್ರ ಹೇಳಿದೆಯೆಂದು ಇಲ್ಲಿ ಹಿಂದಿ ಬಳಸಲಾದಿತೇ?

ಮೈಸೂರು: ಕೇಂದ್ರ ಸರ್ಕಾರ ಹೇಳಿದೆಯೆಂದು ರಾಜ್ಯ ಸರ್ಕಾರದ ಆಡಳಿತದಲ್ಲಿ ಹಿಂದಿ ಬಳಸಲು ಸಾಧ್ಯವೇ? ಎಂದ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಯಾವುದೇ ಇಲಾಖೆಗಳಿಗೆ ಹಿಂದಿ ಬಳಸುವಂತೆ ಮಾಹಿತಿ ಬಂದರೆ ಕನ್ನಡಕ್ಕೆ ಆದ್ಯತೆ ನೀಡಬೇಕಿರುವ ಬಗ್ಗೆ ಉಲ್ಲೇಖಿಸಿ ತಕ್ಷಣ ಪತ್ರ ಬರೆದು ಸರಿಪಡಿಸುವಂತೆ ಕೇಳಬೇಕು. ತಮಿಳುನಾಡಿನವರು ಅದೇ ರೀತಿ ಮಾಡುವ ಮೂಲಕ ತಮ್ಮ ಮಾತೃಭಾಷೆಗೆ ಆದ್ಯತೆ ನೀಡುತ್ತಿಲ್ಲವೇ? ಎಂದು ಹೇಳಿದರು.

ಕೇಂದ್ರದ ಯಾವುದೇ ಇಲಾಖೆ, ಸಂಸ್ಥೆಯಿಂದ ಹಿಂದಿ, ಸಂಸ್ಕೃತ ಮತ್ತು ಇಂಗ್ಲಿಷ್ ಚರ್ಚಾ ಕಾರ್ಯಕ್ರಮ ಆಯೋಜನೆ ಮಾಡಿ ಎಂದು ನಿರ್ದೇಶನ ಬಂದರೆ, ನಮ್ಮಲ್ಲಿ ಅದೇ ರೀತಿ ಮಾಡುವವರೂ ಇದ್ದಾರೆ ಎಂದು ಉದಾಹರಣೆ ನೀಡಿದ ಅವರು, ಹಾಗೆ ಮಾಡುವ ಬದಲು ಕನ್ನಡದ ಅಗತ್ಯತೆ ಬಗ್ಗೆ ಉಲ್ಲೇಖಿಸಿ ಪತ್ರ ಬರೆದು ಕೋರಬೇಕು. ತಮಿಳುನಾಡಿನವರು ಇದೇ ರೀತಿ ತಮ್ಮ ಭಾಷೆಗೆ ಆದ್ಯತೆ ನೀಡುವುದನ್ನು ರೂಢಿಸಿಕೊಂಡಿದ್ದಾರೆ ಎಂದರು.

ಗಡಿ ಭಾಗದ ಶಾಲೆಗಳಲ್ಲಿ 'ಭಾಷಾ ಪ್ರಯೋಗಾಲಯ' ಪ್ರಾರಂಭ

ಟಿ.ಎಸ್.ನಾಗಾಭರಣ ಘೋಷಣೆ

ಮೈಸೂರು, ಜು.12(ಎಸ್‌ಬಿಡಿ)– ರಾಜ್ಯದ ಗಡಿ ಭಾಗದ ಶಾಲೆಗಳಲ್ಲಿ ಇನ್ನೊಂದು ತಿಂಗಳಲ್ಲಿ 'ಭಾಷಾ ಪ್ರಯೋಗಾಲಯ' ಆರಂಭಿಸಲಾಗುವುದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಗಡಿ ಭಾಗದಲ್ಲಿ ಪರಿಣಾಮಕಾರಿಯಾಗಿ ಕನ್ನಡ ಬಳಕೆಯಾಗಬೇಕೆಂಬ ಉದ್ದೇಶದಿಂದ ಪ್ರಾಧಿಕಾರದ ವತಿಯಿಂದ ವಿನೂತನ ಯೋಜನೆಯೊಂದನ್ನು ರೂಪಿಸಲಾಗಿದೆ. ಅದರಂತೆ ಚಾಮರಾಜನಗರ ಸೇರಿದಂತೆ ರಾಜ್ಯದ 19 ಗಡಿ ಜಿಲ್ಲೆಗಳ 38 ಶಾಲೆಗಳಲ್ಲಿ 'ಭಾಷಾ ಪ್ರಯೋಗಾಲಯ' ಆರಂಭಿಸಲಾಗುವುದು. ಆ ಮೂಲಕ ಅಲ್ಲಿನ ಮಕ್ಕಳಿಗೆ ಅವರ ಮಾತೃಭಾಷೆ ಜೊತೆಗೆ ಹೆಚ್ಚು ಕನ್ನಡ ಕಲಿಕೆಗೆ ಉತ್ತೇಜನ ನೀಡಲಾಗುವುದು ಎಂದರು.

ಈಗಾಗಲೇ ಶಾಲೆಗಳ ಪಟ್ಟಿ ಸಿದ್ಧವಾಗಿದ್ದು, ಮಕ್ಕಳಿಗೆ ಮಾರ್ಗದರ್ಶನ ನೀಡಲು ಶಿಕ್ಷಕರನ್ನೂ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಯೋಗಾಲಯದಲ್ಲಿ ಆಡಿಯೋ ಮತ್ತು ವಿಡಿಯೋ ಸಹಿತ ಸ್ಮಾರ್ಟ್ ಕ್ಲಾಸ್ ಕಲ್ಪಿಸಲಾಗುವುದು. ಮುಖ್ಯವಾಗಿ ಆಯಾಯ ಭಾಗದ ಮಕ್ಕಳು ತಮ್ಮ ಮನೆಯಲ್ಲಿ ಬಳಸುವ ಭಾಷೆ ಹಾಗೂ ಶಾಲೆಯಲ್ಲಿ ಕಲಿಯುವ ಕನ್ನಡದ ನಡುವಿನ ಸಾಮ್ಯತೆಯನ್ನು ತಿಳಿದು, ಹೆಚ್ಚೆಚ್ಚು ಕಲಿಯಲು ಅನುಕೂಲವಾಗುವ ವಿಶೇಷ ಕಿಟ್ ಅನ್ನು ಪ್ರಾದೇಶಿಕ ಶಿಕ್ಷಣ ಸಂಸ್ಥೆ ಸಿದ್ಧಪಡಿಸುತ್ತಿದೆ. ಒಟ್ಟಾರೆ ಇನ್ನೊಂದು ತಿಂಗಳಲ್ಲಿ ಭಾಷಾ ಪ್ರಯೋಗಾಲಯ ಆರಂಭವಾಗಲಿದ್ದು, ಇಂತಹ ನವೀನ ಯೋಜನೆಗಳನ್ನು ಪ್ರಾಧಿಕಾರ ಪರಿಚಯಿಸಿ, ಅದರ ವಿಸ್ತರಣೆಗೆ ಸರ್ಕಾರವನ್ನು ಒತ್ತಾಯಿಸಲಿದೆ ಎಂದು ತಿಳಿಸಿದರು.

ವಿವಿಯಲ್ಲಿ ಕನ್ನಡ: ಮೈಸೂರು ವಿವಿಯ ಲಾಂಛನ (ಲೋಗೊ)ದಲ್ಲಿ ಕನ್ನಡ ಬಳಕೆ ಮಾಡಬೇಕು. ಪದವೀಧರ ವಿದ್ಯಾರ್ಥಿಗಳಿಗೆ ವಿತರಿಸುವ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳಲ್ಲಿ ವಿವರವನ್ನು ಮೊದಲು ಕನ್ನಡದಲ್ಲಿ ನಂತರ ಇಂಗ್ಲಿಷ್‌ನಲ್ಲಿ ನಮೂದಿಸಬೇಕು. ವೆಬ್‌ಸೈಟ್‌ನ ಪ್ರತಿಯೊಂದು ಹಂತದಲ್ಲೂ ಕನ್ನಡದಲ್ಲಿ ಮಾಹಿತಿ ದಾಖಲಿಸಬೇಕು. ಹೀಗೆ ಹಲವು ವಿಚಾರಗಳನ್ನು ವಿವಿಯ ಕುಲಪತಿಗಳ ಗಮನಕ್ಕೆ ತರಲಾಗಿದ್ದು, ಇನ್ನೊಂದು ತಿಂಗಳಲ್ಲಿ ಸರಿಪಡಿಸುವುದಾಗಿ ಭರವಸೆ ನೀಡಿದ್ದಾರೆಂದು ತಿಳಿಸಿದರು.

ಮಳೆಯಿಂದಾಗಿಯೇ ಜೀವಹಾನಿಯಾದರೆ 5 ಲಕ್ಷ ಪರಿಹಾರ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಕಳೆದೊಂದು ವಾರದಿಂದ ವ್ಯಾಪಕ ಮಳೆಯಾಗುತ್ತಿದ್ದು, ಮಳೆ ಸಂಬಂಧಿ ಅವಘಡಗಳಿಂದ ಪ್ರಾಣಹಾನಿಯಾದವರ ಕುಟುಂಬಸ್ಥರಿಗೆ ಸರ್ಕಾರದಿಂದ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದ್ದಾರೆ.



ಬೆಂಗಳೂರಲ್ಲಿ ಮಾತನಾಡಿದ ಅವರು, ಇಂದಿನಿಂದ ಪ್ರವಾಹಪೀಡಿತ ಜಿಲ್ಲೆಗಳಿಗೆ ಸಿಎಂ ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡುತ್ತೇವೆ. ಮಳೆ ಹಾನಿ, ಭೂಕಂಪ, ಭೂಕುಸಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇವೆ. ನೆರೆ ಸಂತ್ರಸ್ತರನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಜೀವಹಾನಿಯಾದ ಕುಟುಂಬಗಳಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದರು.

ಸಂಸತ್ ಮುಂಗಾರು ಅಧಿವೇಶನ

ಜುಲೈ 17ಕ್ಕೆ ಸರ್ವಪಕ್ಷ ಸಭೆ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಭಾನುವಾರ ಸರ್ವಪಕ್ಷ ಸಭೆ ಕರೆದಿದೆ. ಅಂದು ಬೆಳಗ್ಗೆ 11 ಗಂಟೆಗೆ ಸಭೆ ನಡೆಯಲಿದ್ದು, ಪ್ರಧಾನಿ ಮೋದಿ ಸಭೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದರು.

ಭಾನುವಾರ ಸಂಜೆ 4 ಗಂಟೆಗೆ ಸರ್ವಪಕ್ಷ ಸದನ ನಾಯಕರ ಸಭೆಯನ್ನು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಕರೆದಿದ್ದಾರೆ. ಅದೇ ದಿನ ಎನ್‌ಡಿಎ ಸದನ ನಾಯಕರ ಸಭೆ ನಡೆಯಲಿದ್ದು, ಪ್ರಧಾನಿ ಮೋದಿ ಸಭೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿದೆ. ಸಂಸತ್ತಿನ ಮುಂಗಾರು ಅಧಿವೇಶನ ಜು.19ರಿಂದ ಆರಂಭವಾಗಲಿದ್ದು, ಆ.13ರಂದು ಮುಕ್ತಾಯವಾಗಲಿದೆ. 19 ದಿನ ಕಾರ್ಯಕಲಾಪಗಳು ನಡೆಯಲಿವೆ. ಬೆಳಗ್ಗೆ 11 ಗಂಟೆಯಿಂದ ಸಂಜೆ 6ರವರೆಗೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕಲಾಪ ನಡೆಯಲಿದೆ. ಕೋವಿಡ್–19 ಸಾಂಕ್ರಾಮಿಕ ಹಿನ್ನೆಲೆಯಲ್ಲಿ ಆರೋಗ್ಯ ಸುರಕ್ಷಾ ಶಿಷ್ಟಾಚಾರದ ಪ್ರಕಾರ ಅಧಿವೇಶನ ನಡೆಯಲಿದೆ.

ಉದ್ಯಮಶೀಲತಾ ವಿಚಾರ ಸಂಕಿರಣ

ಮೈಸೂರು,ಜು.12–ರೋಟರಿ ಜಿಲ್ಲೆ 3181 ವಲಯ 7 ಮತ್ತು 8ರ ರೋಟರಿ ಕ್ಲಬ್‌ಗಳ ವತಿಯಿಂದ ಜು.17ರಂದು ಬೆಳಗ್ಗೆ 9.30ಕ್ಕೆ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ 'ಉದ್ಯಮಶೀಲತಾ ವಿಚಾರ ಸಂಕಿರಣ'ವನ್ನು ಆಯೋಜಿಸಲಾಗಿದೆ.

ಅಂದು ಸಂಜೆ 5 ಗಂಟೆಯವರೆಗೂ ಕಾರ್ಯಕ್ರಮ ನಡೆಯಲಿದ್ದು, ಯಶಸ್ವಿ ಉದ್ಯಮಿಗಳಿಂದ ವಿಶೇಷ ಉಪನ್ಯಾಸ ಇರಲಿದೆ. ಹೊಸ ಉದ್ಯಮ ಪ್ರಾರಂಭಿಸಲು ಆಸಕ್ತ ನವೋದ್ಯಮಿಗಳು ಭಾಗವಹಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ನಂ. 797563 6049 ಸಂಪರ್ಕಿಸಬಹುದು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಮಂಗಳವಾರ	122.44 ಅಡಿ
ಒಳಹರಿವು	60786 ಕ್ಯೂಸೆಕ್
ಹೊರಹರಿವು	54466 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಮಂಗಳವಾರ	2283.00 ಅಡಿ
ಒಳ ಹರಿವು	34200 ಕ್ಯೂಸೆಕ್
ಹೊರ ಹರಿವು	38000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಮಂಗಳವಾರ	2853.59 ಅಡಿ
ಒಳ ಹರಿವು	18251 ಕ್ಯೂಸೆಕ್
ಹೊರ ಹರಿವು	18625 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಮಂಗಳವಾರ	2920.50 ಅಡಿ
ಒಳ ಹರಿವು	22354 ಕ್ಯೂಸೆಕ್
ಹೊರ ಹರಿವು	6725 ಕ್ಯೂಸೆಕ್

ಪ್ರಧಾನಿ ಮೋದಿ ಆಗಮನದಿಂದ ಡಾಂಬರ್ ಭಾಗ್ಯ ಕಂಡಿದ್ದ ರಸ್ತೆ ಇದೀಗ ಗುಂಡಿಮಯ!



ಮೈಸೂರು,ಜು.12(ಜಿಎ)–ಡಾಂಬರೀಕರಣ ಮಾಡಿ ತಿಂಗಳು ಕಳೆದಿಲ್ಲ ಆಗಲೇ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿ ಡಾಂಬರ್ ಕಿತ್ತು ಬಂದಿದ್ದು, ಗುಂಡಿಗಳು ಬಿದ್ದಿವೆ. ಈ ಗುಂಡಿಗಳಲ್ಲಿ ನೀರು ತುಂಬಿಕೊಳ್ಳುತ್ತಿದೆ.

ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಪ್ರಧಾನಿ ಮೋದಿ ಅವರು ಮೈಸೂರಿಗೆ ಆಗಮಿಸಿದ ಸಂದರ್ಭದಲ್ಲಿ ಮೈಸೂರು ನಗರ ಶೃಂಗರಿಸಲು ಅನೇಕ ರಸ್ತೆಗಳಿಗೆ ನೂತನವಾಗಿ ಡಾಂಬರೀಕರಣ ಮಾಡಲಾಗಿತ್ತು. ಅದರಂತೆ ನಗರದ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗವಿರುವ ಬೆಂಗಳೂರು–ನೀಲಗಿರಿ ರಸ್ತೆಗೂ ಡಾಂಬರೀಕರಣ ಮಾಡಲಾಗಿತ್ತು. ಆದರೆ, ಡಾಂಬರೀಕರಣವಾಗಿ ತಿಂಗಳು ಕಳೆದಿಲ್ಲ. ಈಗ ಆ ರಸ್ತೆಯಲ್ಲಿ ಡಾಂಬರ್ ಕಿತ್ತು ಗುಂಡಿಗಳು ಬೀಳಲು ಆರಂಭವಾಗಿದೆ.

ಮೈಸೂರಿನ ಹೃದಯ ಭಾಗವಾದ ಈ ಬಸ್ ನಿಲ್ದಾಣಕ್ಕೆ ನಿತ್ಯವೂ ಸಾವಿರಾರು ಮಂದಿ ಪ್ರಯಾಣಿಕರು ಬರುತ್ತಾರೆ. ಅದರಂತೆ ವಿವಿಧ ರಾಜ್ಯಗಳ ಬಸ್‌ಗಳು ಬಂದು ಹೋಗುತ್ತವೆ. ಇಂತಹ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ರಸ್ತೆಯನ್ನು ಡಾಂಬರೀಕರಣ ಮಾಡಿದ್ದಾಗ ಅನೇಕ ಸಾರ್ವಜನಿಕರು ಮೋದಿ ಅವರ ಹೆಸರಿನಲ್ಲಾದರೂ ಈ ರಸ್ತೆ ಡಾಂಬರ್ ಕಾಣುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. ಆದರೆ, ಸಂತಸ ವ್ಯಕ್ತಪಡಿಸಿದ್ದ ಸಾರ್ವಜನಿಕರು ಈಗ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಡಾಂಬರೀಕರಣ ಮಾಡಿರುವ ರಸ್ತೆಯೂ ಒಂದು ತಿಂಗಳ ಮುನ್ನವೇ ಕಿತ್ತು ಗುಂಡಿಗಳು ಬೀಳುತ್ತಿದ್ದು, ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗದಲ್ಲಿಯೇ ನೀರು ತುಂಬಿಕೊಳ್ಳುತ್ತಿದೆ. ಆ ನೀರಿನ ಮೇಲೆ ಬಸ್ ಸಂಚರಿಸುತ್ತಿವೆ. ಮತ್ತೊಂದೆಡೆ ಬಸ್ ನಿಲ್ದಾಣದ ಮುಂಭಾಗದಲ್ಲಿನ ರಸ್ತೆಯಲ್ಲಿ ವಾಣಿಜ್ಯ ಕಟ್ಟಡಗಳಿದ್ದು, ಅದರ ಮುಂದೆಯು ನೀರು ತುಂಬಿಕೊಳ್ಳುತ್ತಿದೆ.

ಒಪ್ಪಂದದಂತೆ ವಿವೇಕ ಸ್ಮಾರಕದೊಂದಿಗೆ ಎನ್‌ಟಿಎಂ ಶಾಲೆಯೂ ನಿರ್ಮಾಣವಾಗಲಿ



ಮೈಸೂರು,ಜು.12(ಪಿಎಂ)– ಮೈಸೂರಿನ ಮಹಾರಾಣಿಯವರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (ಎನ್‌ಟಿಎಂ ಶಾಲೆ) ನೆಲಸಮಗೊಳಿಸಿ, ಸದರಿ ಜಾಗದಲ್ಲಿ ಎನ್‌ಟಿಎಂ ಶಾಲೆ, ವಿವೇಕ ಸ್ಮಾರಕ ಎರಡೂ ನಿರ್ಮಾಣ ಆಗಬೇಕೆಂದು ಒಪ್ಪಂದ ಆಗಿತ್ತು. ಅದರಂತೆ ಕೇವಲ ಸ್ಮಾರಕ ಮಾತ್ರವಲ್ಲದೆ, ಶಾಲೆಯೂ ನಿರ್ಮಾಣವಾಗಬೇಕೆಂದು ಎನ್‌ಟಿಎಂ ಶಾಲೆ ಉಳಿಸಿ ಹೋರಾಟ ಸಮಿತಿ ಮುಖಂಡರು ಇಂದಿಲ್ಲಿ ಒತ್ತಾಯಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಮೋಹನ್‌ಕುಮಾರ್‌ಗೌಡ, ಸುತ್ತೂರು ಮಠದಲ್ಲಿ ಸುತ್ತೂರು ಶ್ರೀಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಎರಡೂ ಕಡೆಯವರು ಭಾಗವಹಿಸಿ, ಶಾಲೆ, ಸ್ಮಾರಕ ಎರಡೂ ಆಗಲಿ ಎಂಬ ಚರ್ಚೆ ನಡೆದು, ಅಂತಿಮವಾಗಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ನಿವಾಸದಲ್ಲಿ ಅವರ ಮಧ್ಯಸ್ಥಿಕೆಯಲ್ಲಿ ನಡೆದ ಸಭೆಯಲ್ಲಿ ಎರಡೂ ಕಡೆಯವರು ಚರ್ಚಿಸಿದ ನಂತರ ಶಾಲೆ, ಸ್ಮಾರಕ ಎರಡೂ ಇರಲು ಒಪ್ಪಂದ ಆಗಿತ್ತು ಎಂದು ತಿಳಿಸಿದರು.

ನೆಲಸಮಗೊಳಿಸುವ ಸಂದರ್ಭದಲ್ಲೂ ನಮ್ಮನ್ನು ಕರೆದು ಚರ್ಚಿಸದ ಕಾರಣ ಅಂದು ಸ್ಥಳದಲ್ಲಿ ಹೋರಾಟ ಕೂಡ ನಡೆಸಿದೆವು. ಆದರೂ ಪೊಲೀಸರ ಭದ್ರತೆಯಲ್ಲಿ ರಾತ್ರಿ ವೇಳೆ ನೆಲಸಮ ಮಾಡಿದರು. ಮೊನ್ನೆ ಸ್ಮಾರಕ ನಿರ್ಮಾಣ ಕಾಮಗಾರಿ ಗುದ್ದಲಿ ಪೂಜೆಗೂ ಭಾರೀ ಪೊಲೀಸ್ ಭದ್ರತೆ ಪಡೆದಿದ್ದರು. ನಾವು ವಿವೇಕಾನಂದರ ವಿರೋಧಿಗಳಲ್ಲ. ಶಾಲೆ ಮತ್ತು ನಿರಂಜನ ಮಠವೂ ಉಳಿದು ಸ್ಮಾರಕವೂ ಆಗಲಿ ಎಂಬ ನಿಲುವು ನಮ್ಮದು ಎಂದರು. ಸಮಿತಿ ಮುಖಂಡರಾದ ಸ.ರ.ಸುದರ್ಶನ, ಪುರುಷೋತ್ತಮ್, ಉಗ್ರನರಸಿಂಹಗೌಡ, ಹೊಸಕೋಟೆ ಬಸವರಾಜು, ಬಾಲಕೃಷ್ಣ ಮತ್ತಿತರರು ಗೋಷ್ಠಿಯಲ್ಲಿದ್ದರು.

ಬ್ರೈನ್‌ಸ್ಟ್ರೋಕ್‌ಗೆ ಒಳಗಾದ 95 ವರ್ಷದ ವೃದ್ಧೆಗೆ ಅತ್ಯಾಧುನಿಕ ಶಸ್ತ್ರಚಿಕಿತ್ಸೆ ಮೂಲಕ ಮರುಜನ್ಮ

ಅಪೋಲೋ ಆಸ್ಪತ್ರೆ ತಜ್ಞ ವೈದ್ಯರ ಹೆಗ್ಗಳಿಕೆ

ಮೈಸೂರು,ಜು.12(ಎಸ್‌ಬಿಡಿ)–ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ ತಜ್ಞ ವೈದ್ಯರು, ಬ್ರೈನ್‌ಸ್ಟ್ರೋಕ್‌ಗೆ ಒಳಗಾದ 95 ವರ್ಷದ ವೃದ್ಧೆಗೆ ಮೆಕ್ಯಾನಿಕಲ್ ಥ್ರೋಂಬೆಕ್ಟಮಿ ವಿಧಾನ ಮೂಲಕ ಚಿಕಿತ್ಸೆ ನೀಡಿ, ಗುಣಪಡಿಸುವಲ್ಲಿ ಯಶಸ್ವಿಯಾಗಿದ್ದು, ಎರಡೇ ದಿನದಲ್ಲಿ ವೃದ್ಧೆ ಚೇತರಿಸಿಕೊಳ್ಳುವ ಮೂಲಕ ಮರುಜನ್ಮ ಪಡೆದಿದ್ದಾರೆ.

ಇಳಿವಯಸ್ಸಿನಲ್ಲೂ ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುತ್ತಿದ್ದ ಆರೋಗ್ಯವಂತ ವೃದ್ಧೆಗೆ ಇದ್ದಕ್ಕಿದ್ದಂತೆ ದೇಹದ ಬಲಭಾಗದಲ್ಲಿ ನಿಶ್ಯಕ್ತಿ ಉಂಟಾಗಿ ಮಾತನಾಡಲೂ ಕಷ್ಟಪಡುವಂತಾಗಿತ್ತು. ಪಾರ್ಶ್ವವಾಯು ಸಮಸ್ಯೆ ಇರಬಹುದೆಂದು ವೃದ್ಧೆಯ ಮಗ ತಕ್ಷಣ ಅವರನ್ನು ಅಪೋಲೋ ಬಿಜಿಎಸ್ ಆಸ್ಪತ್ರೆಗೆ ಕರೆತಂದು ದಾಖಲಿಸಿದ್ದರು. ಪರೀಕ್ಷಿಸಿದ ನ್ಯೂರಾಲಜಿಸ್ಟ್‌ಗಳು ತಕ್ಷಣವೇ ವೃದ್ಧೆಯನ್ನು ಎಮರ್ಜೆನ್ಸಿ 'ಸ್ಟ್ರೋಕ್ ಕೋಡ್' ಆರಂಭಿಸಿ, ಮೆದುಳಿನ ಸ್ಕ್ಯಾನಿಂಗ್ ಮಾಡಿದಾಗ ಮೆದುಳಿನ ಎಡಭಾಗಕ್ಕೆ ರಕ್ತ ಪೂರೈಸುವ ಮುಖ್ಯ ರಕ್ತನಾಳದಲ್ಲಿ ರಕ್ತ ಸಂಚಾರಕ್ಕೆ ಅಡ್ಡಿ ಉಂಟಾಗಿರುವುದು ಪತ್ತೆಯಾಯಿತು. ಈ ಬಗ್ಗೆ ರೋಗಿಯ ಕುಟುಂಬದವರೊಡನೆ ಸಮಾಲೋಚನೆ ನಡೆಸಿದ ವೈದ್ಯರು ಚಿಕಿತ್ಸೆ ಮುಂದುವರೆಸಿದರು.

ಆದರೆ ವೃದ್ಧೆಗೆ ರಕ್ತ ಹೆಪ್ಪುಗಟ್ಟಿದ್ದನ್ನು ತಿಳಿಗೊಳಿಸಲು ಇಂಟ್ರಾವೆನಸ್ ಇಂಜೆಕ್ಷನ್ ನೀಡಲೂ ಸಾಧ್ಯವಿರಲಿಲ್ಲ. ಆದ್ದರಿಂದ ಮೆಕ್ಯಾನಿಕಲ್ ಥ್ರೋಂಬೆಕ್ಟಮಿ ಮೂಲಕ ತೊಡೆ ಸಂದಿಯಲ್ಲಿನ ರಕ್ತನಾಳದಲ್ಲಿ ಒಂದು ಸಣ್ಣ ರಂಧ್ರ ಮಾಡಿ ಹೆಪ್ಪುಗಟ್ಟಿದ ರಕ್ತವನ್ನು ತೆಗೆಯಲಾಯಿತು. ಚಿಕಿತ್ಸೆ ಬಳಿಕ ಕೆಲವೇ ಗಂಟೆಗಳಲ್ಲಿ ರೋಗಿ ಚೇತರಿಸಿಕೊಂಡು 2 ದಿನದಲ್ಲಿ ಮೊದಲಿನ ರೀತಿ ಮಾತನಾಡುವುದರ ಜೊತೆಗೆ ನಡೆಯುವಂತಾದರು ಎಂದು ಆಸ್ಪತ್ರೆ ಉಪಾಧ್ಯಕ್ಷರೂ ಆದ ಘಟಕದ ಮುಖ್ಯಸ್ಥ ಎನ್.ಜಿ.ಭರತೀಶ ರೆಡ್ಡಿ ತಿಳಿಸಿದ್ದಾರೆ.

ಈ ಬಗ್ಗೆ ಆಸ್ಪತ್ರೆಯ ನ್ಯೂರೋ ಇಂಟರ್ವೆನ್ಷನಲ್ ರೇಡಿಯಾಲಜಿಸ್ಟ್ ಡಾ.ವಿನಯ್ ಹೆಗ್ಡೆ ಪ್ರತಿಕ್ರಿಯಿಸಿ, ತೊಂದರೆ ಕಾಣಿಸಿಕೊಂಡ ಕೂಡಲೇ ಚಿಕಿತ್ಸೆ ಲಭ್ಯವಾಗದಿದ್ದರೆ ಗಂಭೀರ ಸ್ಥಿತಿ ತಲುಪಿ, ಶಾಶ್ವತ ಅಂಗವೈಕಲ್ಯ ಕಾಣಿಸಿಕೊಳ್ಳಬಹುದು ಅಥವಾ ಪ್ರಾಣಾಪಾಯವಾಗುವ ಸಾಧ್ಯತೆ ಇರುತ್ತದೆ. ರಕ್ತನಾಳದ ಬ್ಲಾಕ್‌ನಿಂದ ಉಂಟಾಗುವ ಸ್ಟ್ರೋಕ್‌ಗೆ ಸೀಮಿತ ಸಮಯದಲ್ಲಿ ಚಿಕಿತ್ಸೆ ಲಭ್ಯವಾಗಬೇಕು ಎಂದು ಹೇಳಿದ್ದಾರೆ.

ಹಿರಿಯ ಕನ್ಸಲ್ಟೆಂಟ್ ನ್ಯೂರಾಲಜಿಸ್ಟ್ ಡಾ.ಆಮಿರ್ ಮೋಯಿನ್, ಐವಿ ಥ್ರೋಂಬೋಲಿಸಿಸ್ ಹಾಗೂ ಮೆಕಾನಿಕಲ್ ಥ್ರೋಂಬೆಕ್ಟಮಿ ಚಿಕಿತ್ಸಾ ವಿಧಾನದಿಂದ ವಯಸ್ಸಾದ ರೋಗಿಗಳಲ್ಲೂ ಉತ್ತಮ ಫಲಿತಾಂಶ ಕಾಣಬಹುದಾಗಿದೆ. ರೋಗಿಯ ಕುಟುಂಬದವರು ಪರಿಸ್ಥಿತಿ ಗಮನಿಸಿ ತಕ್ಷಣ ನಿರ್ಧಾರ ಕೈಗೊಂಡು ಅವರನ್ನು ಆಸ್ಪತ್ರೆಗೆ ಕರೆತಂದಿದ್ದರಿಂದ 95ರ ವೃದ್ಧೆಗೆ ಚಿಕಿತ್ಸೆ ಯಶಸ್ವಿಯಾಗಿದೆ ಎಂದರು.

ಆಧುನಿಕ ಚಿಕಿತ್ಸೆ ಮೂಲಕ ಕರುಳಿನ ಬ್ಲಾಕ್ ನಿವಾರಣೆ

ಮೈಸೂರು: ರಾಜ್ಯದಲ್ಲೇ ಮೊದಲಿಗೆ ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ, ಎಂಡೋಸ್ಕೋಪಿಕ್ ಗ್ಯಾಸ್ಟ್ರೋ ಜೆಜುನಾಸ್ಟಮಿ ಆಧುನಿಕ ಚಿಕಿತ್ಸಾ ವಿಧಾನದ ಮೂಲಕ ರೋಗಿಯೊಬ್ಬರ ಕರುಳಿನ ಬ್ಲಾಕ್ ನಿವಾರಣೆಗೊಳಿಸುವ ಮೂಲಕ ಗಮನ ಸೆಳೆದಿದೆ. ಈ ಮೊದಲು ಮೇಧೋಜೀರಕ ಗ್ರಂಥಿಯ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 49 ವರ್ಷದ ವ್ಯಕ್ತಿ, 5 ವರ್ಷಗಳ ಹಿಂದೆ ಈ ಸಂಬಂಧ ಶಸ್ತ್ರಚಿಕಿತ್ಸೆಗೂ ಒಳಪಟ್ಟಿದ್ದರು. ನಂತರದಲ್ಲಿ ಗಡ್ಡೆ ಮರುಕಳಿಸಿದ ಪರಿಣಾಮ ಕರುಳಿನಲ್ಲಿ ಪಿತ್ತರಸ(ಬೈಲ್) ಹೊರತೆಗೆಯುವ ಪ್ರಕ್ರಿಯೆಗೆ ಅಡ್ಡಿಯಾಯಿತು. ಸೋಂಕು ಉಂಟಾಗಿ ಯಕೃತ್ತಿನಲ್ಲಿ ಕೀವು ಸಂಗ್ರಹವಾಗಿದ್ದರಿಂದ ರೋಗಿಗೆ ಹೊಟ್ಟೆ ನೋವು, ಕರುಳಿನ ಹಿಗ್ಗುವಿಕೆ ಹಾಗೂ ವಾಂತಿಯಾಗತೊಡಗಿತು. ಇದೆಲ್ಲದರ ಪರಿಣಾಮ ಬಾಯಿಯಿಂದ ಆಹಾರ ಸ್ವೀಕರಿಸಲೂ ಸಾಧ್ಯವಾಗದ ಪರಿಸ್ಥಿತಿ ಉಂಟಾಯಿತು. ಈ ಹಂತದಲ್ಲಿ ಸಾಮಾನ್ಯವಾಗಿ ತೆರೆದ ಶಸ್ತ್ರಚಿಕಿತ್ಸೆ ನಡೆಸಿ, ಗಡ್ಡೆಯಿಂದಾದ ಸಮಸ್ಯೆ ನಿವಾರಿಸಲಾಗುತ್ತದೆ. ಆದರೆ ಈ ರೋಗಿಯ ಸ್ಥಿತಿ ಅವಲೋಕಿಸಿ, ಆಧುನಿಕ ಎಂಡೋಸ್ಕೋಪಿಕ್ ಗ್ಯಾಸ್ಟ್ರೋ ಜೆಜುನಾಸ್ಟಮಿ ಚಿಕಿತ್ಸೆ ಮೂಲಕ ನೋವು ನಿವಾರಣೆ ಮಾಡಿ, ಆಹಾರ ಸ್ವೀಕರಿಸಲು ಸಾಧ್ಯವಾಗುವಂತೆ ಚೇತರಿಸಿಕೊಂಡಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಈ ಆಧುನಿಕ ಚಿಕಿತ್ಸೆ ನೇತೃತ್ವವನ್ನು ಮುಖ್ಯ ಗ್ಯಾಸ್ಟ್ರೋ ಎಂಟರಾಲಜಿಸ್ಟ್ ಹಾಗೂ ಗ್ಯಾಸ್ಟ್ರೋ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ.ರಾಜ್‌ಕುಮಾರ್ ಪಿ. ವಾಧ್ವಾ ವಹಿಸಿದ್ದರು. ನಾವು ಅದರಷ್ಟಕ್ಕೆ ಹಿಗ್ಗಬಲ್ಲ ಸಾಮರ್ಥ್ಯ ಹೊಂದಿರುವ ಲೋಹದ ಸ್ಟೆಂಟ್ ಅನ್ನು ರೋಗಿಯ ಹೊಟ್ಟೆ ಮತ್ತು ಸಣ್ಣ ಕರುಳಿನ ಲೂಪ್ ಮಧ್ಯದಲ್ಲಿ ಅಳವಡಿಸಿದೆವು. ಇದು ಪಿತ್ತರಸ ಹೊರಹೋಗಲು ಹಾಗೂ ಕರುಳಿನ ಸ್ರಾವಗಳಿಗೆ ದಾರಿ ಮಾಡಿಕೊಟ್ಟಿತು. ಪರಿಣಾಮವಾಗಿ ರೋಗಿಯ ಸಮಸ್ಯೆ ನಿವಾರಣೆಯಾಗಿ ಒಂದೇ ದಿನದಲ್ಲಿ ಸಹಜವಾಗಿ ಆಹಾರ ಸೇವಿಸಲು ಆರಂಭಿಸಿದರಲ್ಲದೆ, ಆಸ್ಪತ್ರೆಯಿಂದಲೂ ಬಿಡುಗಡೆ ಮಾಡಲಾಯಿತು ಎಂದರು. ಆಸ್ಪತ್ರೆಯ ಉಪಾಧ್ಯಕ್ಷ ಭರತೀಶ ರೆಡ್ಡಿ ಮಾತನಾಡಿ, ಎಂಡೋಸ್ಕೋಪಿಕ್ ಅಲ್ಟ್ರಾಸೌಂಡ್ ನಿರ್ದೇಶಿತ ಗ್ಯಾಸ್ಟ್ರೋ ಜೆಜುನಾಸ್ಟಮಿ ಚಿಕಿತ್ಸೆ ನಡೆಸಿರುವುದು ರಾಜ್ಯದಲ್ಲೇ ಮೊದಲು ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಆತ : ಯಾಕೆ ಬೇಜಾರಾಗಿದೀಯಾ?

ಈತ : ಹೆಂಡತಿ, ಮಕ್ಕಳಿಗೆ ರಜೆ ಇತ್ತು. ತವರಿಗೆ ಹೋಗಿ ಬರ್ತೀನಿ ಅಂದ್ಲು. ಬೇಸರಗೊಂಡವನ ಹಾಗೆ ನಟಿಸಿದೆ. ಅವಳು ಹೋಗುವುದನ್ನೇ ಕ್ಯಾನ್ಸಲ್ ಮಾಡಿಬಿಡಬೇಕಾ!

ಮೈಸೂರು ಮಿತ್ರ

ಬುಧವಾರ, 13 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ತಿರಸ್ಕರಿಸಬಾರದ ಒಂದು ಸುಖವಿದೆ; ಅದೇ ಇನ್ನೊಬ್ಬರಿಗಾಗಿ ಬದುಕು ಸವೆಸುವುದು. –ಲಿಯೋಟಾಲ್‌ಸ್ಟಾಯ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ದಕ್ಕೀತು ಎಂದು ತಕ್ಕದಲ್ಲದ್ದು ಬೇಡ

ನಿಮ್ಮ ಪತ್ರಗಳು

ಮೈಸೂರಲ್ಲೊಂದು ಕೆಸರು ಗದ್ದೆ...!



ಮಾನ್ಯರೆ,

ಮೈಸೂರು ನಗರ ಪಾಲಿಕೆಯ 54ನೇ ವಾರ್ಡಿನಲ್ಲಿರುವ ಕನಕಗಿರಿ ಮತ್ತು ವಿದ್ಯಾರಣ್ಯಪುರಂ ರಸ್ತೆಗಳು ತೀವ್ರ ಹದಗೆಟ್ಟಿದ್ದು, ಓಡಾಡಲು ತುಂಬಾ ತೊಂದರೆಯಾಗಿದೆ. 2019 ಮತ್ತು 2020 ರಲ್ಲಿ ಜಸ್ಕೋದವರು ಯುಜಿಡಿ ಕಾಮಗಾರಿ ಮಾಡಿ ಹಾಗೆಯೇ ಬಿಟ್ಟು ಹೋಗಿದ್ದಾರೆ. ಈಗ ಮಳೆಗಾಲ ಆರಂಭವಾಗಿರುವುದರಿಂದ ಈ ರಸ್ತೆಗಳು ಕೆಸರು ಗದ್ದೆಯಂತಾಗಿದ್ದು, ಪಾದಚಾರಿಗಳು, ವಾಹನಗಳು ಓಡಾಡಲು ತುಂಬಾ ಕಷ್ಟದಾಯಕವಾಗಿದೆ. ಪಾದಚಾರಿಗಳು ಕೆಸರಿನಲ್ಲಿ ಬಿದ್ದು ಅನಾಹುತಗಳು ಸಂಭವಿಸಿವೆ. ಈ ಸಂಬಂಧ ಪಾಲಿಕೆ ಆಯುಕ್ತರಿಗೆ ಹಾಗೂ ಪಾಲಿಕೆ ಸದಸ್ಯರಿಗೆ ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆಯನ್ನು ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ರವಿಕುಮಾರ್, ಮೈಸೂರು.

ಅಪಘಾತಕ್ಕೆ ಆಹ್ವಾನ ನೀಡುತ್ತಿರುವ ಹೊಂಡ



ಮಾನ್ಯರೇ,

ಮೈಸೂರು – ಹುಣಸೂರು ಮುಖ್ಯ ರಸ್ತೆ, ಪಡುವಾರಹಳ್ಳಿ ಸಂಚಾರಿ ವೃತ್ತದ ಬಳಿಯ, ಪಾದಚಾರಿ ಮಾರ್ಗದಲ್ಲಿ ತೆರೆದ ಹೊಂಡದಂತಿರುವ ಮೃತ್ಯುಕೂಪವಿದೆ. ಅಲ್ಲಿ ದಿನನಿತ್ಯ ಓಡಾಡುವ ಮುಕ್ತ ವಿವಿ ಹಾಗೂ ಮೈಸೂರು ವಿವಿ ನೌಕರರು ಸೇರಿದಂತೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರನ್ನು ತನ್ನತ್ತ ಕೈ ಬೀಸಿ ಕರೆಯುತ್ತಿದೆ. ಈಗಾಗಲೇ ಹಲವಾರು ಮಂದಿ ಬಿದ್ದು ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದಾರೆ. ಹೀಗಾಗಿ, ಸಂಬಂಧಪಟ್ಟವರು ಇನ್ನಾದರೂ ಕೂಡಲೇ ಎಚ್ಚೆತ್ತು, ಯಾವುದೇ ಸಾವು ನೋವುಗಳು ಸಂಭವಿಸುವ ಮೊದಲು ಹೊಂಡವನ್ನು ವ್ಯವಸ್ಥಿತವಾಗಿ ದುರಸ್ತಿಗೊಳಿಸಬೇಕಾಗಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ರಸ್ತೆ ಕಾಮಗಾರಿ ಬೇಗ ಪೂರ್ಣಗೊಳಿಸಿ

ಮಾನ್ಯರೆ,

ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿ ಸುಮಾರು ನಾಲ್ಕು ವಾರಗಳಿಂದ ಕಾಮಗಾರಿ ಪ್ರಗತಿಯಲ್ಲಿದೆ. ಈ ರಸ್ತೆಯಲ್ಲಿ ಹಲವಾರು ವಿದ್ಯಾರ್ಥಿ ನಿಲಯಗಳು ಹಾಗೂ ಶಾಲಾ–ಕಾಲೇಜುಗಳು ಇದ್ದು, ಅದರಲ್ಲೂ ಈ ಆಷಾಢದ ಮಳೆಗಾಲದಲ್ಲಿ ವಿದ್ಯಾರ್ಥಿಗಳಿಗೆ ತುಂಬಾ ಸಮಸ್ಯೆಯಾಗುತ್ತಿದೆ. ನಮ್ಮ ಉದ್ದೇಶ ಕಾಮಗಾರಿಯನ್ನು ನಿಲ್ಲಿಸಿ ಅಂತಲ್ಲ. ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಮನವಿ.

–ಮಹಾಂತೇಶ್.ಬಿ, ಬಳ್ಳೂರುಹುಂಡಿ

ಹುದ್ದೆಗಳನ್ನು ಹರಾಜಿನಲ್ಲಿ ಮಾರಿಬಿಡಿ...

ಮಾನ್ಯರೆ,

ಪೊಲೀಸ್ ಇನ್ಸ್‌ಪೆಕ್ಟರ್ ನೇಮಕಾತಿ, ಮತ್ತಿತರ ಸರ್ಕಾರಿ ನೇಮಕಾತಿಗಳಲ್ಲಿನ ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದಾಗ, ನೈಜ ಪ್ರತಿಭೆಗೆ ಅವಕಾಶ ಇಲ್ಲವೇ ಎನ್ನುವಂತಾಗುತ್ತಿದೆ. ಸರ್ಕಾರದ ಉನ್ನತ ಹುದ್ದೆಯಲ್ಲಿರುವ ಎಡಿಜಿಪಿ ಮತ್ತಿತರ ಹಿರಿಯ ಅಧಿಕಾರಿಗಳೇ ಉತ್ತರ ಪತ್ರಿಕೆಯನ್ನು ಬದಲಿಸುವಂತಹ ಹೀನ ಕೃತ್ಯ ಮಾಡಿದರೆ, ನಾವು ಅಭ್ಯರ್ಥಿಗಳಿಗೆ ಇದುವರೆಗೂ ಹೇಳುತ್ತಿದ್ದ, ಎಲ್ಲವೂ ವಶೀಲಿಗಳಾಗುವುದಿಲ್ಲ, ಎಲ್ಲವೂ ಹಣಕ್ಕಾಗಿ ಆಗುವುದಿಲ್ಲ, ಕನಿಷ್ಠ ಪಕ್ಷ ಮೆರಿಟ್‌ನಲ್ಲಿ ಬರಲು ಪ್ರಯತ್ನಿಸಿ, ಎನ್ನುವ ಮಾತೂ ಹುಸಿಯೇ ಅಲ್ಲವೇ.

ಬಹುಶಃ ಇನ್ನು ಮುಂದೆ ಸರ್ಕಾರ ಇಂತಹ ನೇಮಕಾತಿ ನಡೆಯುವಾಗ, ಅರ್ಜಿ ಶುಲ್ಕದ ಜೊತೆಗೆ, ಆಯ್ಕೆಯಾದಲ್ಲಿ, ಇಂತಹ ಅಧಿಕಾರಿಗಳಿಗೆ ಇಂತಿಷ್ಟು, ಸಂಬಂಧಿಸಿದ ಜನಪ್ರತಿನಿಧಿಗಳಿಗಿಂತಿಷ್ಟು ಎಂದು ನಿಗದಿಪಡಿಸಿ ಪಾರದರ್ಶಕವಾಗಿ ನಡೆಸಿಬಿಡಲಿ. ಇಲ್ಲವೇ ಹುದ್ದೆಗಳನ್ನು ಹರಾಜು ಹಾಕಿ ದರ ನಿಗದಿಪಡಿಸಲಿ. ಆಗಲಾದರೂ ನೈಜ ಪ್ರತಿಭೆಗಳು ಇತರೆಡೆಗಳಲ್ಲಿ ಕೆಲಸ ಹುಡುಕಿಕೊಳ್ಳಲು ನೆರವಾಗಬಹುದಷ್ಟೆ.


–ವಿಜಯ್ ಹೆಮ್ಮಿಗೆ, ಮೈಸೂರು

ವಿಶ್ವಸಂಸ್ಥೆಯಲ್ಲಿ ಕನ್ನಡವನ್ನು ಸೇರ್ಪಡೆಗೊಳಿಸಿ

ಮಾನ್ಯರೆ,

ನಮ್ಮ ದೇಶದಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿ ವರ್ಷಗಳೇ ಕಳೆದಿವೆ. ನಮ್ಮ ರಾಜ್ಯದಿಂದ 28 ಲೋಕಸಭಾ ಸದಸ್ಯರು, 18 ರಾಜ್ಯಸಭಾ ಸದಸ್ಯರು ಆಯ್ಕೆಯಾಗಿದ್ದಾರೆ. ಇವರು ಕೂಡಲೇ ಕನ್ನಡ ಭಾಷೆಯನ್ನು ವಿಶ್ವಸಂಸ್ಥೆಯಲ್ಲಿ ಸೇರಿಸಲು ಕೇಂದ್ರ ಸರಕಾರಕ್ಕೆ ಒತ್ತಾಯಿಸಬೇಕು. ಇಲ್ಲಿ ಗಮನಾರ್ಹ ಸಂಗತಿ ಎಂದರೆ ವಿಶ್ವಸಂಸ್ಥೆಯ ಅನಧಿಕೃತ ಭಾಷೆಗಳಾದ ಪೋರ್ಚುಗೀಸ್, ಕಿಸ್ವಾಹಿಲಿ ಮತ್ತು ಪರ್ಷಿಯನ್ ಭಾಷೆಗಳನ್ನು ಕನ್ನಡ ಭಾಷೆಯೊಂದಿಗೆ ತುಲನೆ ಮಾಡಿದರೆ ವಿಶ್ವದಾದ್ಯಂತ ಕನ್ನಡ ಭಾಷೆ ಮಾತನಾಡುವ ಜನರೇ ಹೆಚ್ಚು. ಹೀಗಾಗಿ ವಿಶ್ವದೆಲ್ಲೆಡೆ ಇರುವ ಕನ್ನಡ ಭಾಷಿಕರಿಗೆ ಜಾಗತಿಕ ವಿಷಯಗಳ ಕುರಿತು ಕನ್ನಡ ಮೂಲಕ ಅರಿವು ಮೂಡಿಸಲು ಭಾರತ ಸರ್ಕಾರಕ್ಕೆ ದೆಹಲಿಯಲ್ಲಿರುವ ನಮ್ಮ ರಾಜಕಾರಣಿಗಳು ಒತ್ತಾಯಿಸಬೇಕು. ಪ್ರಪಂಚದಲ್ಲಿ ಕನ್ನಡ ಮಾತನಾಡುವ ಜನರಲ್ಲಿ ಜಾಗತಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ಜಾಗೃತಿಯನ್ನು ಹರಡುವ ಗುರಿಯನ್ನು ಇಟ್ಟುಕೊಂಡು ಭಾರತ ಸರಕಾರ ಕೂಡಲೇ ಶಾಸ್ತ್ರೀಯ ಭಾಷೆಯಾದ ಕನ್ನಡವನ್ನು ವಿಶ್ವಸಂಸ್ಥೆಯಲ್ಲಿ ಕನಿಷ್ಠ ಪಕ್ಷ ಅಧಿಕೃತವಲ್ಲದ ಭಾಷೆಯಾಗಿ ಸೇರ್ಪಡೆಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.


–ವಿಜಯಕುಮಾರ್ ಎಚ್.ಕೆ., ರಾಯಚೂರು



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಗುರುಪೂರ್ಣಿಮೆ



ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ॥

ಅಜ್ಞಾನವೆಂಬುದು ಕುರುಡುತನವನ್ನು ತರುವ ತಿಮಿರವೆಂಬ ರೋಗ. ಅದರಿಂದ ನಾನು ಕುರುಡನಾಗಿದ್ದೆನು. ಜ್ಞಾನವೆಂಬುದು ತಿಮಿರರೋಗವನ್ನು ತೊಲಗಿಸುವ ಅಂಜನವೆಂಬ ಔಷಧ. ಅದನ್ನು ಕಣ್ಣಿಗೆ ಹಚ್ಚುವ ಸಾಧನ ಶಲಾಕೆ. ಅದರಿಂದ ನನ್ನ ಕಣ್ಣಿಗೆ ಅಂಜನವನ್ನು ಹಚ್ಚಿ ನನ್ನ ಕಣ್ಣುಗಳಿಗೆ ಚಿಕಿತ್ಸೆಯನ್ನು ಮಾಡಿ ಅವು ತೆರೆದುಕೊಂಡು ಲೋಕವನ್ನು ನೋಡುವ ಹಾಗೆ ಮಾಡಿದವನು ನನಗೆ ಶ್ರೀಗುರು. ಆ ಶ್ರೀ ಗುರುವಿಗೆ ನನ್ನ ನಮನ.

ಗುರುಗಳಿಂದಲೇ ಸಕಲವನ್ನೂ ಪಡೆದ ನಾವು ಅವರನ್ನು ಮರೆಯುತ್ತೇವೆ. ಅಕ್ಷರವನ್ನು ಕಲಿಸಿದವರು, ಭಾಷೆಯನ್ನು ಕಲಿಸಿದವರು, ಹಲವಾರು ವಿಷಯಗಳನ್ನು ಕಲಿಸಿದವರು, ಜೀವನದಲ್ಲಿ ನಡೆದುಕೊಳ್ಳಬಹುದಾದ ರೀತಿ ನೀತಿಗಳನ್ನು ಕಲಿಸಿದವರು, ಹೀಗೆ ಹಲವರು ಗುರುಗಳು. ಜೇನು ನೊಣವು ನೂರಾರು ಹೂವುಗಳಿಂದ ಮಕರಂದವನ್ನು ಸಂಗ್ರಹಿಸಿದಂತೆ ಮನುಷ್ಯನೂ ಹಲವಾರು ಗುರುಗಳಿಂದ ಜ್ಞಾನವನ್ನು ಪಡೆದಿರುತ್ತಾನೆ. ಗ್ರಂಥಗಳಿಂದ ತತ್ತ್ವಗಳನ್ನು ಬೋಧಿಸಿದ ಮಹರ್ಷಿಗಳೂ, ಕವಿಗಳೂ, ವಿದ್ವಾಂಸರೂ ನಮಗೆ ಪರೋಕ್ಷವಾಗಿ ಗುರುಗಳೇ. ಅನೇಕ ಪ್ರಾಣಿಗಳನ್ನು, ಪಕ್ಷಿಗಳನ್ನೂ ನೋಡಿ ನಾವು ಪಾಠಗಳನ್ನು ಕಲಿತಿರುತ್ತೇವೆ. ಅಷ್ಟೇ ಏಕೆ, ಅಚೇತನವೆಂದು ನಾವು ಭಾವಿಸುವ ಮರ, ಗಿಡ, ಬಳ್ಳಿ, ಬೆಟ್ಟ ಇತ್ಯಾದಿಗಳೂ ನಮಗೆ ಬೋಧಿಸುತ್ತವೆ. ಉಪನಿಷತ್ತಿನಲ್ಲಿ ಸತ್ಯ ಕಾಮಜಾಬಾಲನಿಗೆ, ಹಂಸ, ಮದ್ಗು ಮೊದಲಾದ ಪ್ರಾಣಿಗಳೂ ಪಕ್ಷಿಗಳೂ ಬೋಧಿಸಿದವು ಎಂದು ಹೇಳಲಾಗಿದೆ. ಕಲಿಯುವ ಮನಸ್ಸಿದ್ದವನಿಗೆ ಎಲ್ಲವೂ ಗುರುಗಳೇ. ಆ ಗುರುಗಳನ್ನು ನೆನಪಿಸುವ ದಿನ ಗುರುಪೂರ್ಣಿಮೆ.

ಪೂರ್ಣಿಮೆ ಪೂರ್ಣತ್ವದ ಸಂಕೇತ. ಪೂರ್ಣತ್ವವನ್ನು ಪಡೆಯುವ ದಿನ ಪೂರ್ಣಿಮೆ. ಗೌತಮ ಬುದ್ಧನು ಪೂರ್ಣತ್ವವನ್ನು ಪಡೆದು ಲೋಕ ಗುರುವಾದದ್ದೂ ಪೂರ್ಣಿಮೆಯ ದಿನದಂದು. ಆಷಾಢ ಪೂರ್ಣಿಮೆಯನ್ನು ಗುರು ಪೂರ್ಣಿಮಾ ಎಂದು ಕರೆಯುತ್ತಾರೆ. ಇದನ್ನು ವ್ಯಾಸಪೂರ್ಣಿಮಾ ಎಂದೂ ಕರೆಯಬಹುದು. ವ್ಯಾಸ ಮಹರ್ಷಿ ನಮ್ಮ ಜ್ಞಾನವನ್ನು ತುಂಬಿಸಲು ಮಾಡಿದ ವಿದ್ಯಾಕಾರ್ಯ ಅಪಾರ, ಅನಂತ. ವ್ಯಾಸಪೂರ್ಣಿಮೆಯ ದಿನ ಸಂನ್ಯಾಸಿಗಳು ವ್ಯಾಸಪೂಜೆಯನ್ನು ಮಾಡಿ ಚಾತುರ್ಮಾಸ್ಯವ್ರತದ ಸಂಕಲ್ಪವನ್ನು ಮಾಡುತ್ತಾರೆ.

ಗುರು ಎಂದರೆ ಯಾರು?

ಎಲ್ಲ ಗುರುಗಳ ಗುರು ಸರ್ವಜ್ಞ ಭಗವಂತನೇ ನಿಜವಾದ ಗುರು. ಅವನ ಅಂಶ, ಎಷ್ಟೋ ಸೂಕ್ಷ್ಮವಾದ ಅಂಶವಾದರೂ ಸರಿ, ಯಾರಲ್ಲಿದೆಯೋ ಅವರೂ ಗುರುಗಳೇ. ಗುರು ತಾನು ಜ್ಞಾನಿಯಾಗಿರಬೇಕು. ತನ್ನ ಶಿಷ್ಯರನ್ನೂ ಜ್ಞಾನಿಗಳನ್ನಾಗಿ ಮಾಡಬೇಕು. ತಾನೇ ಅಜ್ಞಾನದಲ್ಲಿ ಮುಳುಗಿರುವವನು ಗುರುವಾದರೆ ಶಿಷ್ಯರನ್ನು ಮೇಲೆತ್ತುವುದು ಅಸಾಧ್ಯ. ಬದಲಾಗಿ ಅವರನ್ನು ಪಾತಾಳಕ್ಕೆ ಒಯ್ಯಬಹುದು. ಪ್ರಶ್ನೋತ್ತರ ರತ್ನಮಾಲಿಕೆಯಲ್ಲಿ ಈ ಬಗೆಗೆ ಹೀಗೆಂದಿದ್ದಾರೆ.

ಕೋ ಗುರುರಧಿಗತತತ್ತ್ವಃ
ಶಿಷ್ಯಹಿತಾಯೋದ್ಯತಃ ಸತತಮ್

ತಾನು ತತ್ತ್ವವನ್ನು ತಿಳಿದಿರಬೇಕು, ಶಿಷ್ಯರ ಹಿತಕ್ಕಾಗಿ ಸತತವಾಗಿ ದುಡಿಯಬೇಕು– ಅವನೇ ಗುರುವಾಗುವನು ಎಂದು ಇದರ ತಾತ್ಪರ್ಯ.

ವಚನಗಳಲ್ಲಿ ಗುರು

ಬಸವಣ್ಣನವರು ಗುರುವಿನ ಮಹತ್ವವನ್ನು ನಾನಾ ವಚನಗಳಲ್ಲಿ ಹಾಡಿ ಹೊಗಳಿದ್ದಾರೆ. ಮನುಷ್ಯನಿಗೆ ತನು, ಮನ, ಧನಗಳು ಅತಿಪ್ರಿಯ. ಅವನ್ನು ಕ್ರಮವಾಗಿ ಗುರು ಶುಶ್ರೂಷೆಗೆ, ಲಿಂಗದ ಧ್ಯಾನಕ್ಕೆ ಮತ್ತು ಜಂಗಮರ ದಾಸೋಹಕ್ಕೆ ಬಳಸಬೇಕೆನ್ನುವುದು ಬಸವಣ್ಣನವರ ಆಶಯ. ಆಗಲೇ ತನು–ಮನ–ಧನಗಳ ಸಾರ್ಥಕತೆ. ಅದನ್ನೊಂದು ವಚನವು ಸ್ಪಷ್ಟಪಡಿಸಿದೆ–

ಗುರುವಿಂಗೆ ತನುವ ಕೊಟ್ಟು
ಲಿಂಗಕ್ಕೆ ಮನವ ಕೊಟ್ಟು
ಜಂಗಮಕ್ಕೆ ಧನವ ಕೊಟ್ಟು
ಇಂತೀ ತ್ರಿವಿಧಕ್ಕೆ ತ್ರಿವಿಧವ ಕೊಟ್ಟು
ನಾನು ಶುದ್ಧನಾದೆನು ಕಾಣಾ
ಕೂಡಲ ಸಂಗಮದೇವ

ಅಲ್ಲಮ ಪ್ರಭುದೇವರು ನಾನಾ ಯುಗಗಳಲ್ಲಿ ಗುರು–ಶಿಷ್ಯರ ಸಂಬಂಧ ಹೇಗೆ ಬೇರೆ ಬೇರೆಯಾಗುವುದೆಂಬುದನ್ನು ಒಂದು ವಚನದಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ –

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ
ಬಡಿದು ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದನಯ್ಯಾ
ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ
ಬೈದು ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದನಯ್ಯಾ
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ
ಝಂಕಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದನಯ್ಯಾ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ
ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದನಯ್ಯಾ
ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ
ಕಲಿತವಕ್ಕೆ ನಾನು ಬೆರಗಾದೆನು.

ಚೆನ್ನಬಸವಣ್ಣನವರು ಗುರು ಶಿಷ್ಯ ಸಂಬಂಧದ ಉನ್ನತಿಯನರಿತವರು. ಅವರದು ಕವಿ ಹೃದಯ, ದಾರ್ಶನಿಕ ಬುದ್ಧಿ. ಅವರ ಮಾತಿನಲ್ಲಿ ಉಪಮೆಗಳು ಉತ್ತಮೋತ್ತಮವಾಗಿ ಮೂಡಿ ಬರುತ್ತವೆ. ಇದನ್ನು ವಚನದಲ್ಲಿ ನೋಡೋಣ–

ಗುರುಶಿಷ್ಯ ಸಂಬಂಧವನೇನೆಂದುಪಮಿಸುವೆ?
ಜ್ಯೋತಿಯಲೊದಗಿದ ಜ್ಯೋತಿಯಂತಿರಬೇಕು
ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು
ಸ್ಫಟಿಕದೊಳಗಿರಿಸಿದ ರತ್ನದಂತಿರಬೇಕು
ರೂಪಿನ ನೆಳಲಿನ ಅಂತರಂಗದಂತಿರಬೇಕು
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ದರ್ಪಣವ ದರ್ಪಣಕ್ಕೆ ತೋರಿದಂತಿರಬೇಕು.

ಅಕ್ಕ ಮಹಾದೇವಿ ಕಾಮನನ್ನು ಗೆದ್ದ ವೀರವನಿತೆ. ಅದಕ್ಕೆ ಗುರುವೇ ಕಾರಣನೆಂದು ಅಕ್ಕ ತನ್ನೊಂದು ವಚನದಲ್ಲಿ ಹೇಳಿದ್ದಾಳೆ –

ಗುರುವೆಂಬ ತೆತ್ತಿಗನು ಲಿಂಗವೆಂಬಲಗನ್ನು
ಮನನಿಷ್ಠೆಯೆಂಬ ಕೈಯಲ್ಲಿ ಕೊಡಲು
ಕಾದಿದೆ, ಗೆಲಿದೆ ಕಾಮನೆಂಬವನ.
ಕ್ರೋಧಾದಿಗಳು ಕೆಟ್ಟು ವಿಷಯಂಗಳೋಡಿದವು
ಅಲಗು ಎನ್ನೊಳು ನಟ್ಟು ಆನಳಿದ ಕಾರಣ
ಚೆನ್ನಮಲ್ಲಿಕಾರ್ಜುನಲಿಂಗವ ಕರದಲ್ಲಿ ಹಿಡಿದೆ.

ಹೀಗೆ ಎಲ್ಲ ಶರಣರ ವಚನಗಳಲ್ಲಿ ಗುರುವಿನ ಮಹಾತ್ಮ್ಯವನ್ನು ಎತ್ತಿ ತೋರಿಸಿರುವುದನ್ನು ಕಾಣಬಹುದು. ಗುರುವನ್ನು ಭಗವಂತನೆಂದು, ಭಗವಂತನನ್ನು ಗುರುವೆಂದು ಭಾರತೀಯ ಸಂಸ್ಕೃತಿಯು ಭಾವಿಸಿದೆ. ಭಗವಂತನನ್ನು ಹೊಗಳುವ ಶ್ಲೋಕವೊಂದು ಹೀಗಿದೆ–

ಗುರವೇ ಸರ್ವಲೋಕಾನಾಂ ಭಿಷಜೇ ಭವರೋಗಿಣಾಮ್।
ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇ ನಮಃ॥

ಭಗವಂತನು ಸರ್ವಲೋಕಗಳ ಗುರು, ಸಂಸಾರ ರೋಗಗಳನ್ನು ವಾಸಿ ಮಾಡುವ ವೈದ್ಯ, ಎಲ್ಲ ವಿದ್ಯೆಗಳ ನಿಧಿ ಆ ಭಗವಾನ್ ದಕ್ಷಿಣಾಮೂರ್ತಿಗೆ ನಮನ ಎಂಬುದು ಈ ಶ್ಲೋಕದ ತಾತ್ಪರ್ಯ. ಗುರುಪೂರ್ಣಿಮೆಯಂದು ಇದನ್ನು ಎಲ್ಲರೂ ಮನಸ್ಸಿನಲ್ಲಾದರೂ ಅನುಸಂಧಾನ ಮಾಡಿಕೊಳ್ಳಬೇಕು.

ಗುರುಪೂರ್ಣಿಮೆಯಲ್ಲಿ ವ್ಯಾಸಪೂಜೆ

ಜಗತ್ತಿಗೆ ಭಾರತವು ನೀಡಿದ ಬೃಹತ್ತಮ ಕಾಣಿಕೆ ಮಹಾಭಾರತ. ಇಂದು ಸುಮಾರು ಒಂದು ಲಕ್ಷ ಶ್ಲೋಕಗಳನ್ನು ಹೊಂದಿರುವ ಮಹಾಭಾರತದ ಕರ್ತೃ ವ್ಯಾಸಮಹರ್ಷಿ.

ನಮೋಽಸ್ತು ತೇ ವ್ಯಾಸ ವಿಶಾಲಬುದ್ಧೇ
ಫುಲ್ಲಾರವಿಂದಾಯತಪತ್ರನೇತ್ರ
ಯೇನ ತ್ವಯಾ ಭಾರತತೈಲಪೂರ್ಣಃ
ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ॥

ಎಂದು ವ್ಯಾಸರನ್ನು ವರ್ಣಿಸಿದ್ದಾರೆ. ಭಾರತ ದೇಶದ ಸಂಸ್ಕೃತಿಗೆ ವ್ಯಾಸರು ಕೊಟ್ಟಷ್ಟು ಕೊಡುಗೆ ಬೇರೆ ಯಾರದೂ ಇಲ್ಲ. ಅವರೇ ವೇದಗಳನ್ನು ಸುವ್ಯವಸ್ಥಿತ ಸ್ಥಿತಿಗೆ ತಂದರೆನ್ನಲಾಗಿದೆ. ಅವನ್ನು ನಾಲ್ವರು ಶಿಷ್ಯರಿಗೆ ಬೋಧಿಸಿದರು. ಆದ್ಯ ಗುರುವಾದರು ಎಂದು ಹೇಳಲಾಗಿದೆ. ವ್ಯಾಸರು ವಸಿಷ್ಠ ಋಷಿಗಳ ಮರಿಮಗ, ಶಕ್ತಿ ಎಂಬ ಋಷಿಯ ಮೊಮ್ಮಗ, ಪರಾಶರ ಋಷಿಗಳ ಮಗ, ಶುಕಮಹರ್ಷಿಯ ತಂದೆ. ಇದು ಈ ಕೆಳಗಿನ ಶ್ಲೋಕದಲ್ಲಿ ಸ್ಪಷ್ಟವಾಗಿದೆ.


ವ್ಯಾಸಂ ವಸಿಷ್ಠ ನಪ್ತಾರಂ ಶಕ್ತೇಃ ಪೌತ್ರಮಕಲ್ಮಷಮ್।
ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಮ್ ॥

ಭಗವದ್ಗೀತೆಯನ್ನು ಶ್ರೀಕೃಷ್ಣಾರ್ಜುನರ ಸಂವಾದದ ರೂಪದಲ್ಲಿ ಲೋಕಕ್ಕೆ ನೀಡಿದವರೂ ವ್ಯಾಸರೇ. ವೇದಾಂತ ಶಾಸ್ತ್ರದ ಮೂಲಸ್ತಂಭ ಎನಿಸಿದ ಬ್ರಹ್ಮ ಸೂತ್ರಗಳನ್ನು ರಚಿಸಿದವರೂ ವ್ಯಾಸರೇ. ಅವರನ್ನು ಪೂಜಿಸುವುದು ಗುರುಪೂರ್ಣಿಮೆಯ ಆಚರಣೆಗೆ ಉಚಿತವೇ ಆಗಿದೆ.

ಗುರುವಿನಿಂದಲೇ ಶಕ್ತಿ ಗುರುವಿನಿಂದಲೇ ಮುಕ್ತಿ
ಗುರುವಿನಿಂದಲೇ ಸರ್ವಶಾಸ್ತ್ರಯುಕ್ತಿ
ಪರಮಧರ್ಮವನಿಂದು ತೋರಿ ರಕ್ಷಿಸುವವನು
ಗುರುವಲ್ಲದಿರೆ ಯಾರು ನಾಗರಾಜ॥
ಗುರುಪೂರ್ಣಿಮೆಯ ದಿವಸ ಗುರುಗಳನು ನೆನೆಯೋಣ
ಪರತತ್ತ್ವದೆಡೆಗೆ ನಾವ್ ಸತತ ನಡೆಯೋಣ
ಕರಣೆಯಿಂ ಪರಮಗುರು ಶ್ರೀಕೃಷ್ಣನೇ ನಮಗೆ
ಗುರಿ ತೋರಿ ನಡೆಯಿಸಲಿ ನಾಗರಾಜ॥

ಚಾತುರ್ಮಾಸ್ಯ

13-07-2022 ರಿಂದ 10-09-2022 ರವರೆಗೆ ನಾನಾ ಕಡೆಗಳಲ್ಲಿ ಯತಿಗಳ ಚಾತುರ್ಮಾಸ್ಯ ಆಚರಣೆ ನಡೆಯಲಿದೆ. ತನ್ನಿಮಿತ್ತ ಈ ವಿಶೇಷ ಲೇಖನ



ಯತಿಗಳ ಚಾತುರ್ಮಾಸ್ಯ ಆಚರಣೆಯ ಸ್ಥಳದ ವಿವರ


ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ, ಯಡತೊರೆ	ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು ತತ್ಕರ ಕಮಲ ಸಂಜಾತರಾದ ಪರಮಪೂಜ್ಯ ಶ್ರೀ ಶ್ರೀ ಬ್ರಹ್ಮಾನಂದ ಭಾರತೀಸ್ವಾಮಿಗಳು	ಶ್ರೀ ಜಪ್ಯೇಶ್ವರ ಕ್ಷೇತ್ರ, ಜಪದ ಕಟ್ಟೆ
ಶ್ರೀ ದತ್ತಪೀಠ, ಮೈಸೂರು	ಪರಮಪೂಜ್ಯ ಶ್ರೀಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿರವರು	ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು
ಪರಕಾಲ ಮಠ, ಮೈಸೂರು	ಪರಮಪೂಜ್ಯ ಶ್ರೀಶ್ರೀ ಅಭಿನವವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾಸ್ವಾಮಿಗಳು	ಶ್ರೀಮಠ, ಮೈಸೂರು

ಧಾರ್ಮಿಕ ಆಚರಣೆಯಲ್ಲಿ ಸಾಮಾನ್ಯವಾಗಿ ಮಾಡಲೇಬೇಕಾದ ಕೆಲವು ವ್ರತಗಳಲ್ಲಿ ಶ್ರೀ ಕೃಷ್ಣಾಷ್ಟಮಿ, ಏಕಾದಶಿ, ಚಾತುರ್ಮಾಸ್ಯ ಪ್ರಮುಖವಾದ ವ್ರತಗಳು. ಬದುಕನ್ನು ಧಾರ್ಮಿಕ ತಳಹದಿಯ ಮೇಲೆ ನಡೆಸುವವರು ಈ ವ್ರತಗಳನ್ನು ಸರ್ವದಾ ಬಿಡತಕ್ಕದ್ದಲ್ಲ. ನಮ್ಮಲ್ಲಿನ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಅಭಿವ್ಯಕ್ತಗೊಳಿಸುವ ನಮ್ಮ ಸಾಧನೆಯ ಮಾರ್ಗದ ಉಪದ್ರವಗಳನ್ನು ವಿನಾಶ ಮಾಡುವ, ನಮ್ಮನ್ನು ಸಂಸಾರ ಸಾಗರದಿಂದ ಉದ್ಧರಿಸುವ ಗುರುಗಳ ಬಳಿ ಕರೆದುಕೊಂಡು ಹೋಗುವ ಶ್ರೇಷ್ಠ ಮಹಾವ್ರತವೇ ಚಾತುರ್ಮಾಸ್ಯ. ಸನಾತನ ಧರ್ಮಾನುಯಾಯಿಗಳಾದ ಪ್ರತಿಯೊಬ್ಬರಿಗೂ ಅತ್ಯಂತ ಪವಿತ್ರ ದಿನವೆಂದರೆ ಆಷಾಢ ಹುಣ್ಣಿಮೆ. ಸನಾತನ ಧರ್ಮವನ್ನು ಧರಿಸಿ ನಮ್ಮೆಲ್ಲರಿಗೂ ಶ್ರೇಯೋ ಮಾರ್ಗವನ್ನು ತೋರಿಸಿಕೊಟ್ಟ ಗುರು ಪರಂಪರೆಯಲ್ಲಿ ರತ್ನ ಸದೃಶರಾಗಿರುವ ದ್ವಾಪರ ಯುಗಾವತಾರಿ ಶ್ರೀ ಕೃಷ್ಣ ಪರಮಾತ್ಮ, ಶ್ರೀ ಬ್ರಹ್ಮಋಷಿ ಶ್ರೇಷ್ಠರಾದ ವಸಿಷ್ಠರ ಮರಿಮಗ, ಶಕ್ತಿ ಮಹರ್ಷಿಯ ಮೊಮ್ಮಗ ಮತ್ತು ಪರಾಶರರ ಪುತ್ರ ಮತ್ತು ಶುಕ ಮಹರ್ಷಿಯ ತಂದೆ ಶ್ರೀ ವೇದ ವ್ಯಾಸರನ್ನು, ಶ್ರೀ ಶಂಕರ ಭಗವತ್ಪಾದಾಚಾರ್ಯರು, ಶ್ರೀ ರಾಮಾನುಜಾಚಾರ್ಯರು ಹಾಗೂ ಶ್ರೀ ಮಧ್ವಾಚಾರ್ಯರನ್ನು ವಿಶೇಷವಾಗಿ ಪೂಜಿಸಿ ತದ ನಂತರ ಸದಾಶಿವನಿಂದ ಮೊದಲ್ಗೊಂಡು ಗುರು ಪರಂಪರೆಯಲ್ಲಿನ ಎಲ್ಲಾ ಗುರುವರ್ಯರನ್ನು ಸ್ತುತಿಸಿ ಅವರ ಕೃಪೆಗೆ ಪಾತ್ರರಾಗುವುದು ಗುರುಪೂರ್ಣಿಮೆಯ ವೈಶಿಷ್ಟವಾಗಿದೆ.

ವಿಶೇಷವಾಗಿ ಯತಿಗಳು, ಮಠಾಧಿಪತಿಗಳು ಹಾಗೂ ಕಾವಿಧಾರಿಗಳು ಈ ಚಾತುರ್ಮಾಸ್ಯ ವ್ರತವನ್ನು ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡುತ್ತಾರೆ. ಚಾತುರ್ಮಾಸ್ಯವು ಶುದ್ಧ ಆಷಾಢ ಏಕಾದಶಿಯಿಂದ ಕಾರ್ತಿಕ ಶುದ್ಧ ದ್ವಾದಶಿಯವರೆಗೆ ಅತ್ಯಂತ ದೀರ್ಘಕಾಲ ಆಚರಿಸಲಾಗುವುದು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶೈವ, ಬೌದ್ಧ, ಜೈನ ಮೊದಲಾದ ಎಲ್ಲಾ ಗುರುಪರಂಪರೆಯ ಸಂಪ್ರದಾಯದವರು ಚಾತುರ್ಮಾಸ್ಯವನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಾರೆ. ಚಾತುರ್ಮಾಸ್ಯದ ಅವಧಿಯಲ್ಲಿ ಶ್ರೀ ಮಹಾವಿಷ್ಣುವು ಯೋಗ ನಿದ್ರಾಸಕ್ತರಾಗಿರುತ್ತಾರೆ ಎಂಬುದು ನಂಬಿಕೆ. ಸುಮಾರು 48 ದಿವಸಗಳಿಂದ 4 ತಿಂಗಳ ಕಾಲ ಆಚರಿಸುವ ಈ ಚಾತುರ್ಮಾಸ್ಯ ದಿವಸಗಳಲ್ಲಿ ಹೆಚ್ಚು ಮಳೆಗಾಲವಾದ್ದರಿಂದ ನಿರಂತರ ಮಳೆಯಿಂದಾಗಿ ಭೂಮಿಯು ಮೆದುವಾಗಿರುತ್ತದೆ. ಅಲ್ಲದೇ ಕ್ರಿಮಿಕೀಟಗಳು ಹುಟ್ಟಿಕೊಂಡಿರುವುದರಿಂದ ಆಗ ಸಂಚರಿಸಿದರೆ ತಿಳಿದೊ, ತಿಳಿಯದೆಯೋ ಹಿಂಸೆ ಮಾಡಿದಂತಾಗುತ್ತದೆ. ಅಹಿಂಸಾ ಪರಿಪಾಲನೆಗಾಗಿ ಸನ್ಯಾಸಾ ಶ್ರಮಿಯು ಒಂದೆಡೆ ನೆಲೆಸಿ ಸ್ವಾತ್ಮಧ್ಯಾನ ಪಾರಾಯಣರಾಗುವರು. ವ್ರತಾಚರಣೆಯಲ್ಲಿ ಶಾಖಾ ವ್ರತ, ದಧಿವ್ರತ, ಕ್ಷೀರ ವ್ರತ, ದ್ವಿದಳ ವ್ರತ ನಿಯಮಗಳನ್ನು ಆಚರಿಸಲಾಗುವುದು. ಎಲ್ಲಾ ನಾಲ್ಕು ವ್ರತಗಳನ್ನು ಪ್ರಾರಂಭಿಸುವಾಗ ವ್ರತದ ಸಂಕಲ್ಪವನ್ನು ಸ್ವೀಕರಿಸಲಾಗುವುದು. ಶಾಖಾ ವ್ರತದಲ್ಲಿ ನಿಷಿದ್ಧವಾದ ಪದಾರ್ಥಗಳು ಯಾವುವು, ಯಾವುದನ್ನು ಸ್ವೀಕರಿಸಬಾರದು, ಯಾವುದನ್ನು ಸ್ವೀಕರಿಸಬೇಕು ಮತ್ತು ಅಡುಗೆ ಪದ್ಧತಿಯನ್ನು ವ್ರತಾಚರಣೆಯಲ್ಲಿ ವಿಶೇಷವಾಗಿ ಅಚರಿಸಲಾಗುವುದು. ಆಶ್ವಯುಜ ಶುದ್ಧ ಏಕಾದಶಿಯಂದು ಕ್ಷೀರ ವ್ರತದ ಸಮರ್ಪಣೆ ಮತ್ತು ದ್ವಿದಳ ವ್ರತದ ಸಂಕಲ್ಪ ಮಾಡಲಾಗುವುದು. ಭಾದ್ರಪದ ಶುದ್ಧ ಏಕಾದಶಿಯಂದು ಜಯಾಪತಿ ಸಂಕರ್ಷಣಗೆ ಮಾಡಬೇಕಾದ ದಧಿವ್ರತದ ಸಮರ್ಪಣೆ ಮತ್ತು ಕೃತಿಪತಿ ಪ್ರದ್ಯುಮ್ನನ ಪ್ರೀತಿಗಾಗಿ ಕ್ಷೀರ ವ್ರತದ ಸಂಕಲ್ಪ ಮಾಡಲಾಗುವುದು. ಹಾಗೂ ದ್ವಿದಳ ವ್ರತದಲ್ಲಿಯೂ ನಿಷಿದ್ಧವಾದ ಪದಾರ್ಥಗಳು ಯಾವುವು, ಉಪಯೋಗಿಸಬೇಕಾದ ಪದಾರ್ಥಗಳು ಯಾವುವು, ಯಾವ ರೀತಿ ಅಡುಗೆ ಸೂಕ್ತ ಎಂಬುದು ಆಹಾರ ಪದ್ಧತಿಯಲ್ಲಿ ಪ್ರಮುಖ ಅಂಶ. ಪರಿಸರ ಪ್ರಜ್ಞೆಯ ಅಂಶವೊಂದನ್ನು ಉಳಿಸಿ ಬೆಳೆಸಲು ಈ ಆಚರಣೆಯು ಇಂದಿಗೂ ಉಳಿದಿರುವುದು. ಈ ಪರ್ವಕಾಲದಲ್ಲಿ ನದಿಯನ್ನು ದಾಟಬಾರದು ಎಂಬ ವಿಶೇಷ ನಿಯಮವಿದೆ. ಹಿಂದೆ ಬಹುತೇಕ ನದಿಯೇ ಗ್ರಾಮದ ಗಡಿಯಾದ್ದರಿಂದ ವ್ರತ ದೀಕ್ಷೆಯಲ್ಲಿರುವ ಯತಿಗಳು ಹೆಚ್ಚು ದೂರ ಹೋಗಬಾರದೆಂದು ಧರ್ಮ ಶಾಸ್ತ್ರದ ಅನುಶಾಸನ. ಚಾತುರ್ಮಾಸ್ಯ ನಿರತ ಯತಿಗಳ ಸೇವೆ ಸಲ್ಲಿಸುವ ಅವಕಾಶ ಸಿಗುವುದರಿಂದ ಭಕ್ತ ಜನರಿಗೂ ಇದು ಶ್ರವಣ ಮತ್ತು ಮನನ ಕಾಲ. ಯತಿಗಳು ಆಚರಿಸುವ ಚಾತುರ್ಮಾಸ್ಯ ವ್ರತಾಚರಣೆಯ ಆವಧಿಯಲ್ಲಿ ಆಸ್ತಿಕರು ಯತಿಗಳ ದರ್ಶನ ಪಡೆದು ವ್ರತಾಚರಣೆಗೆ ಶಕ್ತ್ಯಾನುಸಾರ ಅನುವು ಮಾಡಿಕೊಡಬೇಕಾದ್ದು ಧರ್ಮ ಶ್ರದ್ಧೆಯೂ ಆಗಿದೆ. ಯತಿಗಳ ಸೇವೆಯಿಂದ ಗೃಹಸ್ಥರಿಗೆ ಸಕಲ ಶ್ರೇಯಸ್ಸು ಲಭಿಸುತ್ತದೆ ಎನ್ನುವುದು ಶಾಸ್ತ್ರವಾಕ್ಯ.

ಚಾತುರ್ಮಾಸ್ಯ ವ್ರತದ ಆಚರಣೆಗೂ ಶುದ್ಧ ಪ್ರಾಚೀನ ಹಿನ್ನೆಲೆ ಉಂಟು. ಅಂಧಾಚರಣೆ, ಸ್ವಾರ್ಥದ ಹಿನ್ನೆಲೆಯಲ್ಲಿ ಹೊಸದಾಗಿ ಸೃಷ್ಟಿಸಿಕೊಂಡ ಆಚರಣೆಯಲ್ಲ. ವೈಜ್ಞಾನಿಕ ಹಿನ್ನೆಲೆಯಿಂದ ಕೂಡಿದ ಪ್ರಾಚೀನ ಋಷಿ ಮುನಿಗಳು ಆಚರಿಸಿ ಫಲಗಳನ್ನು ಅನುಭವಿಸಿಕೊಂಡು ಸಂಪ್ರದಾಯ ಹಾಕಿಕೊಟ್ಟ ಧಾರ್ಮಿಕ ಆಚರಣೆಗಳಿವು. ಅಂತೆಯೇ ಎಲ್ಲಾ ಕಾಲಕ್ಕೂ ಅನುಕರಣೀಯವಾದವೂ ಸಹ. ಈ ನಾಲ್ಕು ತಿಂಗಳ ಕಾಲದಲ್ಲಿ ಶರೀರದ ಉಷ್ಣವು ಒಂದೊಂದು ತಿಂಗಳಿನಲ್ಲೂ ರವಿಯು ಸಂಚಾರ ಮಾಡುವ ನಕ್ಷತ್ರಗಳ ಪ್ರಭಾವದಿಂದ ಆರೋಗ್ಯಕ್ಕೆ ಧಕ್ಕೆ ಬಾರದೇ ಇರಲೆಂದು ಋತುವಿಗೆ ಅನುಸಾರವಾಗಿ ಮತ್ತು ಮಾಸಕ್ಕನುಗುಣವಾಗಿ ಆಹಾರ ನಿಯಮವನ್ನು ಮಾಡಿದ್ದಾರೆ. ವ್ರತ ಮುಗಿದ ದಿನ ಅಂದರೆ ಕಾರ್ತಿಕ ಶುದ್ಧ ದ್ವಾದಶಿಯಂದು ನೆಲ್ಲಿಕಾಯಿಯನ್ನು ಆಹಾರವಾಗಿ ಉಪಯೋಗಿಸುವುದು ನಿಯಮ. ಕಾರಣ ಶೀತ ಗುಣವುಳ್ಳ ನೆಲ್ಲಿಕಾಯಿ ಶರೀರದ ಉಷ್ಣತೆಯನ್ನು ಶಮನ ಮಾಡುತ್ತದೆ. ಚಾತುರ್ಮಾಸ್ಯ ಆಚರಿಸುವ ಸಂದರ್ಭದಲ್ಲಿ ದಾನ, ವ್ರತ, ಜಪ ಮತ್ತು ಹೋಮಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುವುದು. ಈ ಸಮಯದಲ್ಲಿ ಮಾಡುವ ಯಾವುದೇ ದಾನ ಧರ್ಮಗಳಿಂದ ವಿಶೇಷ ಫಲಗಳುಂಟಾಗುವುದು. ಹರಿದಿನ, ಮರುದಿನಗಳು ಸಾಕ್ಷಾತ್ ಶ್ರೀ ಹರಿಯೇ ಅಭಿಮಾನಿಯಾಗಿದ್ದರಿಂದ ದ್ವಾದಶಿ ದಿನ ಕೊಡುವ ದಾನ ಶ್ರೇಯಸ್ಕರ ಎನ್ನಲಾಗಿದೆ. ದಾನ ರೂಪವಾಗಿ ಅರಿಶಿಣ–ಕುಂಕುಮ, ಬೆಳೆದಾನ, ತಾಂಬೂಲ ದಾನ, ಸಂತಾನ ಗೋಪಾಲಕೃಷ್ಣ ದಾನ, ಉಯ್ಯಾಲೆ ಕೃಷ್ಣ ದಾನ, ದೀಪ ದಾನ, ಘೃತ ಗೋದಾನಗಳು ಹಾಗೂ ಗಂಗೆ ಪೂಜೆ, ಗೋಪೂಜೆ, ತುಳಸಿ ಪೂಜೆ ಮಾಡುವುದು ಶ್ರೇಷ್ಠಕರ. ಪೂಜೆ ಮಾಡುವಾಗ ರೇಷ್ಮೆ ಅಥವಾ ಹತ್ತಿಯಿಂದ ತಯಾರಾದ ವಸ್ತ್ರ ಧರಿಸುವುದು ಉತ್ತಮ. ವ್ರತಾಚರಣೆಯ ಅವಧಿಯಲ್ಲಿ ಮನೆ ಮುಂದೆ ದಿನಕ್ಕೊಂದಂತೆ ಹಾಗೂ ಶ್ರೀ ತುಳಸಮ್ಮನ ಮುಂದೆ ವಿಶೇಷವಾದ ರಂಗವಲ್ಲಿಗಳನ್ನು ವಿದ್ಯಾ ಪ್ರಾಪ್ತಿಗಾಗಿ, ಸುಖ ಸಂಸಾರಕ್ಕಾಗಿ, ರೋಗ ನಿವಾರಣೆಗಾಗಿ, ಮನಃಶಾಂತಿಗಾಗಿ ಮುಂತಾದ ಪ್ರಾಕಾರಗಳ ನಿತ್ಯ ರಂಗೋಲಿಯನ್ನು ಹಾಕಿದರೆ ಭಗವಂತನಿಗೆ ತನ್ನ ಪರಿವಾರ ದೇವತೆಗಳು ಮತ್ತು ರಮಾದೇವಿಯವರನ್ನು ಪ್ರಾರ್ಥಿಸುವ ಭಕ್ತರ ಮೇಲೆ ವಿಶೇಷ ಕಾರುಣ್ಯ ಉಂಟಾಗುತ್ತದೆ.

ಚಾತುರ್ಮಾಸ್ಯ ವ್ರತವನ್ನು ನಮ್ಮ ದೈಹಿಕ, ಆರ್ಥಿಕ ಶಕ್ತಿಗೆ ಅನುಗುಣವಾಗಿ ನಿಯಮಗಳನ್ನು, ದಾನಗಳನ್ನು ಅನುಷ್ಠಾನ ಮಾಡಬೇಕು. ಆಚಾರ್ಯರ ಮುಖೇನ ಸಂಕಲ್ಪ ಮಾಡಿ ಪ್ರಾರಂಭಿಸುವುದು ಉತ್ತಮ. ವ್ರತಾಚರಣೆಯಲ್ಲಿ ಆಸಕ್ತಿ ಹಾಗೂ ಭಕ್ತಿ ಇರಬೇಕು. ಆರೋಗ್ಯ ಸಮಸ್ಯೆ ಇರುವವರು, ಕೆಲಸದಲ್ಲಿ ಅಪಾರ ದೈಹಿಕ ಶ್ರಮ ಮಾಡುವವರು, ಹತ್ತಾರು ದಿವಸಗಳು ಮನೆಯಿಂದ ಹೊರಗೆ ಇರಬೇಕಾದವರು ಸಹ ವ್ರತವನ್ನು ಆಚರಿಸಲು ಪ್ರತ್ಯೇಕ ನಿಯಮ ಪಾಲಿಸಬೇಕು. ಯತಿಗಳು ಆಚರಿಸುವ ವ್ರತಾಚರಣೆಯು ಪೂರ್ವ ನಿಗದಿತ ಸ್ಥಳದಲ್ಲಿ ಜರುಗಲಿದ್ದು ಪ್ರತಿನಿತ್ಯವೂ ಯತಿಗಳಿಂದ ಸಂಸ್ಥಾನ ಪೂಜೆ, ಭಿಕ್ಷೆ, ಪಾದ ಪೂಜೆ, ತೊಟ್ಟಿಲು ಪೂಜೆ, ಪಾಠ ಪ್ರವಚನ, ವಿದ್ವಾಂಸರಿಂದ ವೇದಾಂತ ಉಪನ್ಯಾಸ ಸಿರಿಕಂಠ ಗಾಯಕರಿಂದ ಸಂಗೀತ, ದಾಸವಾಣಿ, ಖ್ಯಾತ ಕಲಾವಿದರಿಂದ ಭರತನಾಟ್ಯ, ಯಕ್ಷಗಾನ, ವಿವಿಧ ಗೋಷ್ಠಿಗಳು, ಸಂವಾದ, ಸಾಮೂಹಿಕ ಗಣಯಾಗ, ಮಹಾಯಜ್ಞಗಳನ್ನು ಆಚರಿಸಲಾಗುವುದು. ಎಲ್ಲವೂ ಅವಿಸ್ಮರಣೀಯವಾದದ್ದು. ಉಡುಪಿಯ ಶ್ರೀಅಧೋಕ್ಷಜ ಮಠದ ಹಿರಿಯ ಯತಿಗಳಾದ ಶ್ರೇಷ್ಠ ಸಂತ ಕೀರ್ತಿಶೇಷರಾದ ಶ್ರೀವಿಶ್ವೇಶತೀರ್ಥ ಶ್ರೀಪಾದಂಗಳವರು ಐದು ಪರ್ಯಾಯ ಮಹೋತ್ಸವವನ್ನು, ರಾಷ್ಟ್ರದಲ್ಲೇ ಇದುವರೆಗಿನ ಅತೀ ಹೆಚ್ಚಿನ 81 ಚಾತುರ್ಮಾಸ್ಯವನ್ನು ಹಾಗೂ ಕೊನೇ ಚಾತುರ್ಮಾಸ್ಯವನ್ನು ಮೈಸೂರಿನ ಶ್ರೀ ಕೃಷ್ಣ ಧಾಮದಲ್ಲಿ ಆಚರಿಸಿ ಶ್ರೀ ಕೃಷ್ಣನ ಕೃಪಾನುಗ್ರಹಕ್ಕೆ ಪಾತ್ರರಾಗಿ ನಮ್ಮೆಲ್ಲ ಆಸ್ತಿಕರನ್ನು ಆಶೀರ್ವದಿಸಿದರು ಎಂಬುದು ಪುಣ್ಯವೇ ಹೌದು.



ನಂ. ಶ್ರೀಕಂಠ ಕುಮಾರ್
ಮೊ: 9481067333

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ತಾಲೂಕಿನ ಮಳೆ ಹಾನಿ ಪ್ರದೇಶಗಳಿಗೆ ಸಚಿವ ಸೋಮಶೇಖರ್ ಭೇಟಿ

ಸಂತ್ರಸ್ತರಿಗೆ ಸಾಂತ್ವನ, ಹಾನಿಗೀಡಾದ ಮನೆಗಳಿಗೆ ತಕ್ಷಣ ಪರಿಹಾರ ಬಿಡುಗಡೆಗೆ ಜಿಲ್ಲಾಡಳಿತಕ್ಕೆ ಸೂಚನೆ



ಮೈಸೂರು, ಜು.12(ಆರ್‌ಕೆಬಿ)–ಜಿಲ್ಲೆಯ ಪಿರಿಯಾಪಟ್ಟಣ ಮತ್ತು ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಮಳೆ ಹಾನಿ ಪ್ರದೇಶಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಂಗಳವಾರ ಭೇಟಿ ನೀಡಿ, ಪರಿಶೀಲಿಸಿದರು.

ಪಿರಿಯಾಪಟ್ಟಣದ ವಿವಿಧೆಡೆ ಉರುಳಿ ಬಿದ್ದಿರುವ ಮನೆಗಳಿಗೆ ತೆರಳಿದ ಸಚಿವರು, ತಾಲೂಕಿನಲ್ಲಿ ಅತಿವೃಷ್ಟಿಯಿಂದ ಆಗಿರುವ ಹಾನಿ ಪ್ರಮಾಣ, ಕೈಗೊಂಡಿರುವ ಕ್ರಮಗಳ ಬಗ್ಗೆ ಜಿಲ್ಲಾಡಳಿತದಿಂದ ಮಾಹಿತಿ ಪಡೆದುಕೊಂಡರು. ಹಾನಿಗೀಡಾದ ಮನೆಗಳಿಗೆ ತಕ್ಷಣ ಪರಿಹಾರದ ಹಣ ಬಿಡುಗಡೆ ಮಾಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿದರು.

ಮಳೆಯಿಂದ ಹಾನಿಗೊಳಗಾದ ಮನೆಯ ಮಾಲೀಕರು ಸಚಿವರ ಬಳಿ ಅಳಲು ತೋಡಿಕೊಂಡರು. ಅವರಿಗೆ ಸಾಂತ್ವನ ಹೇಳಿದ ಸಚಿವರು ಜಿಲ್ಲಾಡಳಿತದಿಂದ ಎಲ್ಲಾ ರೀತಿಯ ಅಗತ್ಯ ನೆರವು ಒದಗಿಸುವುದಾಗಿ ಭರವಸೆ ನೀಡಿದರು.

ಹೆಚ್.ಡಿ.ಕೋಟೆಗೆ ಭೇಟಿ: ಹೆಚ್.ಡಿ.ಕೋಟೆ ತಾಲೂಕಿಗೆ ತೆರಳಿದ ಸಚಿವರು, ಬೀಚನಹಳ್ಳಿಯ ಕಬಿನಿ ಅಣೆಕಟ್ಟೆಯ ಬಲದಂಡೆ ಪ್ರದೇಶದ ಕೆಳಭಾಗದಲ್ಲಿ ಮುಳುಗಡೆಯಾಗಿರುವ ಸೇತುವೆಯನ್ನು ವೀಕ್ಷಿಸಿದರು. ಈ ವೇಳೆ ಸ್ಥಳೀಯರು ವಸತಿ ಸೌಲಭ್ಯ ಕಲ್ಪಿಸುವಂತೆ ಸಚಿವರಿಗೆ ಮನವಿ ಪತ್ರ ನೀಡಿದರು. ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು, ಎಲ್ಲವೂ ಅಂತಿಮ ಹಂತದಲ್ಲಿದ್ದು ನಿವೇಶನ ಮಂಜೂರಾಗಲಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುವುದರಿಂದ ಶೀಘ್ರದಲ್ಲೇ ಸಮಸ್ಯೆ ಬಗೆಹರಿಯಲಿದೆ ಎಂದರು. ಮಳೆಯಿಂದ ಮನೆ ಹಾನಿಯಾದರೆ ಜಿಲ್ಲಾಡಳಿತ ತ್ವರಿತವಾಗಿ ಪರಿಹಾರ ಕಲ್ಪಿಸಲಿದೆ. ಪೂರ್ತಿ ಮನೆ ಕಳೆದುಕೊಂಡವರಿಗೆ 5 ಲಕ್ಷ, ಕಡಿಮೆ ಹಾನಿಯಾಗಿದ್ದರೆ ಹಾನಿ ಪ್ರಮಾಣದ ಮೇಲೆ ಪರಿಹಾರ ನೀಡಲಾಗುತ್ತದೆ ಎಂದರು. ಡಿಸಿ ಡಾ.ಬಗಾದಿ ಗೌತಮ್, ಜಿಪಂ ಸಿಇಓ ಪೂರ್ಣಿಮಾ ಇತರೆ ಅಧಿಕಾರಿಗಳಿದ್ದರು.

ಪರಪ್ಪನ ಅಗ್ರಹಾರ ಜೈಲಿಗೆ ಬರುತ್ತಿದೆ ಫುಟ್‌ಬಾಲ್‌ನಲ್ಲಿ ಮಾದಕ ವಸ್ತು!

ಕಾಲಿಗೆ ಕಟ್ಟಿದ್ದ ಬ್ಯಾಂಡೇಜ್ ಬಿಚ್ಚಿದರೆ ಅಲ್ಲಿತ್ತು ಮೊಬೈಲ್!!

ವಿದೇಶಗಳಲ್ಲಿ ಕೇಳಿ, ನೋಡಿ ತಿಳಿಯುತ್ತಿದ್ದ ಅಕ್ರಮಗಳು ಈಗ ಬೆಂಗಳೂರು ಜೈಲಲ್ಲೇ ನಡೆಯುತ್ತಿದೆ



ಬೆಂಗಳೂರು, ಜು.12(ಕೆಎಂಶಿ)– ಕುಖ್ಯಾತಿಯಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲು ವಿಶ್ವ ಪ್ರಸಿದ್ಧಿಯಾಗುವುದರತ್ತ ದಾಪು ಹೆಜ್ಜೆ ಇಡುತ್ತಿದೆ. ಇಲ್ಲಿ ಕೈದಿಗಳಿಗೆ ಮಾದಕ ವಸ್ತು, ಶಸ್ತ್ರಾಸ್ತ್ರಗಳು, ಮೊಬೈಲ್ ಇನ್ನಿತರೆ ಪದಾರ್ಥಗಳು ಸುಲಭವಾಗಿ ತಲುಪುತ್ತಿವೆ ಎಂಬ ದೂರುಗಳು ಮೊದಲಿನಿಂದಲೂ ಕೇಳಿಬರುತ್ತಿವೆ.



ಇಂತಹ ದೂರುಗಳು ಬಂದಾಗ ಸಂಬಂಧಪಟ್ಟ ಇಲಾಖೆ ಸಚಿವ ಹಾಗೂ ಉನ್ನತ ಅಧಿಕಾರಿಗಳು ಜೈಲಿಗೆ ಭೇಟಿ ನೀಡಿ, ಪರಿಶೀಲನೆ ನಡೆಸುವ ಶಾಸ್ತ್ರ ನಡೆಯುತ್ತಲೇ ಇದೆ. ಆದರೆ ಯಾರೊಬ್ಬರೂ ಇದಕ್ಕೆ ಅಂತ್ಯ ಹಾಡುವ ದಿಟ್ಟ ನಿರ್ಧಾರವನ್ನು ಕೈಗೊಂಡಿದ್ದು, ಜೈಲಿನ ಇತಿಹಾಸದಲ್ಲೇ ಇಲ್ಲ. ಸಂತ್ರಸ್ತರೊಬ್ಬರ ದೂರಿನ ಮೇರೆಗೆ ಮಂಗಳವಾರ ಖುದ್ದು ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿದ ಗೃಹ ಸಚಿವ ಆರಗ ಜ್ಞಾನೇಂದ್ರ ಪರಿಶೀಲನೆ ಪ್ರದಕ್ಷಿಣೆ ಹಾಕಿದರು. ಇತ್ತೀಚೆಗೆ ಜೈಲಿನಲ್ಲಿ ನಡೆದ ಕೆಲವು ಅಕ್ರಮಗಳ ಬಗ್ಗೆ ಮಾಹಿತಿ ಪಡೆದರು. ಈ ವೇಳೆ ಜೈಲಿನ ಅಧಿಕಾರಿ ಫುಟ್ಬಾಲ್ ಮೂಲಕ ಜೈಲಿನೊಳಗೆ ಮಾದಕ ವಸ್ತುಗಳು ನುಸುಳುತ್ತಿರುವ ಬಗ್ಗೆ ತನಿಖೆ ನಡೆಸುತ್ತಿದ್ದೇವೆ.

ಇತ್ತೀಚೆಗೆ ಕೈದಿಯೊಬ್ಬ ಕಾಲಿಗೆ ಬ್ಯಾಂಡೇಜ್ ಸುತ್ತಿದ್ದನ್ನು ಕಂಡು, ಅನುಮಾನದಿಂದ ಅದನ್ನು ಬಿಚ್ಚಿಸಿ ನೋಡಿದಾಗ ಅಲ್ಲಿ ಮೊಬೈಲ್ ಅಡಗಿದ್ದು ಬೆಳಕಿಗೆ ಬಂದಿತ್ತು. ಅದರ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದು ವರದಿ ಒಪ್ಪಿಸಿದರು. ಇದನ್ನು ಶಾಂತಚಿತ್ತರಾಗಿ ಆಲಿಸಿದಂತಹ ಗೃಹಸಚಿವ ಜ್ಞಾನೇಂದ್ರರವರಿಗೆ ಜ್ಞಾನೋದಯವಾದಂತೆ, ಕಾರಾಗೃಹಗಳಲ್ಲಿ ನಡೆಯುವ ಯಾವುದೇ ಅಕ್ರಮ ಚಟುವಟಿಕೆಗಳನ್ನು ಸಹಿಸುವುದಿಲ್ಲ ಹಾಗೂ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಇತ್ತೀಚೆಗೆ, ಶಿವಮೊಗ್ಗದ ಹಿಂದೂ ಕಾರ್ಯಕರ್ತ ಹರ್ಷ ಹತ್ಯೆಯ ಆರೋಪಿಗಳು, ಜೈಲಿನಲ್ಲಿ ಮೊಬೈಲ್ ಫೋನ್ ಬಳಕೆ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಬಗ್ಗೆ ಗಂಭೀರವಾದ ತನಿಖೆ ನಡೆಯುತ್ತಿದ್ದು, ಇದುವರೆಗೆ ಒಬ್ಬನನ್ನು ಬಂಧಿಸಲಾಗಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆದ ಅಕ್ರಮ ಚಟುವಟಿಕೆಗಳ ಬಗ್ಗೆ, ಮುರುಗನ್ ಸಮಿತಿ ನೀಡಿದ ಶಿಫಾರಸುಗಳನ್ನು ಅನುಷ್ಠಾನಗೊಳಿಸಿ ಹಲವಾರು ಅಧಿಕಾರಿಗಳನ್ನು ಜೈಲಿನಿಂದ ವರ್ಗಾವಣೆ ಮಾಡಲಾಗಿದೆ. ಕೆಲವು ಅಧಿಕಾರಿಗಳ ಸೇವೆಯನ್ನು ಅಮಾನತಿನಲ್ಲಿಡಲು ಸಹ ಶಿಫಾರಸು ಮಾಡಲಾಗಿದೆ. ಕೇಂದ್ರ ಕಾರಾಗೃಹಗಳಲ್ಲಿ, ಅತ್ಯಾಧುನಿಕ ತಂತ್ರಜ್ಞಾನದ ಮೊಬೈಲ್ ಜಾಮರ್‌ಗಳನ್ನು ಅಳವಡಿಸಲು ನಿರ್ಧರಿಸಿದ್ದು, ಮೊಬೈಲ್ ಕರೆಗಳನ್ನು ನಿಷ್ಕ್ರಿಯಗೊಳಿಸುವಂತೆ ಕ್ರಮ ಕೈಗೊಳ್ಳಲಾಗುವುದು ಎಂದರು. ಇತ್ತೀಚೆಗೆ, ಫುಟ್‌ಬಾಲ್‌ನಲ್ಲಿ ಮಾದಕ ವಸ್ತುಗಳನ್ನು ತುಂಬಿಸಿ, ಜೈಲಿನೊಳಗೆ ಎಸೆದ ಘಟನೆ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು, ಸಚಿವರಿಗೆ ಮಾಹಿತಿ ನೀಡಿದರು. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಭೇಟಿಗೆ ಬರುವ ಕುಟುಂಬ ಸದಸ್ಯರ ಹಾಗೂ ಇತರರಿಂದ ಅಕ್ರಮ ವಾಗಿ ಹಣ ವಸೂಲಿ ಆಗುತ್ತಿದೆ ಎಂಬ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು ಎಂದರು.

> ಕಾರಾಗೃಹದ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಜತೆ ಸಮಾಲೋಚನೆ ನಡೆಸಿ, ಜೈಲಿನ ಒಳಗೆ ಕೈದಿಗಳು ಎದುರಿಸುತ್ತಿರುವ ಸಮಸ್ಯೆಗಳು, ರಕ್ಷಣಾ ವ್ಯವಸ್ಥೆ, ವೈದ್ಯಕೀಯ ಸೌಲಭ್ಯಗಳ ಕುರಿತು ಮಾಹಿತಿ ಪಡೆದು, ಸೂಕ್ತ ನಿರ್ದೇಶನ ನೀಡಿದ್ದೇನೆ. ಜೈಲಿನ ಒಳಗಡೆ ಅಕ್ರಮವಾಗಿ, ಮಾದಕ ವಸ್ತುಗಳ ಪೂರೈಕೆ, ಕಾನೂನುಬಾಹಿರವಾಗಿ ಕೈದಿಗಳಿಗೆ ವಿಶೇಷ ಸವಲತ್ತುಗಳನ್ನು ನೀಡುವುದು ಹಾಗೂ ಮೊಬೈಲ್ ಬಳಕೆಯಂಥ ಅಕ್ರಮ ಚಟುವಟಿಕೆಗಳಿಗೆ ಅಂಕುಶ ಹಾಕಬೇಕು ಎಂದು ಸೂಚಿಸಿದ್ದೇನೆ. **–ಆರಗ ಜ್ಞಾನೇಂದ್ರ**

ಟೈಲರ್‌ಗಳು ತಮ್ಮ ಹಕ್ಕು ದಕ್ಕಿಸಿಕೊಳ್ಳಲು ಸಂಘಟಿತರಾಗಿ ಹೋರಾಡಿ

ವಿಧಾನಪರಿಷತ್ ಸದಸ್ಯ: ಸಿ.ಎನ್.ಮಂಜೇಗೌಡ ಕರೆ



ಮೈಸೂರು,ಜು.12–ಟೈಲರ್‌ಗಳು ಸಂಘಟಿತರಾಗಿ ಹೋರಾಟ ಮಾಡುವ ಮುಖಾಂತರ ತಮ್ಮ ಹಕ್ಕುಗಳನ್ನು ಪಡೆಯಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು.

ಬೋಗಾದಿಯ ಬ್ಯಾಂಕ್ ಕಾಲೋನಿಯಲ್ಲಿ ಸ್ನೇಹಜೀವಿ ಟೈಲರ್‌ಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್ ವತಿಯಿಂದ ನಡೆದ ಬೋಗಾದಿ ವಲಯ ಸಮಿತಿಯ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ 10 ಲಕ್ಷ ಟೈಲರ್‌ಗಳು ಇದ್ದಾರೆ. ಆದರೆ ಈ ಸಮಾರಂಭಕ್ಕೆ 200 ಜನರೂ ಬಂದಿಲ್ಲ. ನೀವು ಸಂಘಟಿತರಾಗಿ ಹೋರಾಟ ಮಾಡದಿದ್ದರೆ ನಿಮಗೆ ನ್ಯಾಯಯುತವಾದ ಯಾವುದೇ ಸೌಲಭ್ಯವು ಸಿಗುವುದಿಲ್ಲ. ನಿಮ್ಮ ಮಕ್ಕಳ ಭವಿಷ್ಯಕ್ಕಾಗಿ ಸಂಘಟನೆಯನ್ನು ಬಲಪಡಿಸಿ. ಈ ಸರ್ಕಾರದಲ್ಲಿ ಎಲ್ಲವನ್ನು ಹೋರಾಟ ಮಾಡಿಯೇ ಪಡೆದುಕೊಳ್ಳಬೇಕಾಗಿದ್ದು, ಒಂದು ಲಕ್ಷ ಜನ ಸಂಘಟಿತರಾಗಿ ವಿಧಾನ ಸೌಧ ಮುತ್ತಿಗೆ ಹಾಕಿದರೆ ಆಗ ಸರ್ಕಾರ ನಿಮ್ಮನ್ನು ಗುರುತಿಸುತ್ತದೆ. ಆಂಧ್ರ, ತಮಿಳುನಾಡು, ಕೇರಳಗಳಲ್ಲಿನ ಸರ್ಕಾರಗಳು ಟೈಲರ್‌ಗಳಿಗೆ ಅನೇಕ ಸವಲತ್ತುಗಳನ್ನು ನೀಡಿವೆ. ಮುಂದಿನ ತಿಂಗಳು ಅಧಿವೇಶನ ನಡೆಯುತ್ತದೆ. ಅಷ್ಟರೊಳಗೆ ನಿಮ್ಮ ಬೇಡಿಕೆಗಳನ್ನು ನನಗೆ ಪಟ್ಟಿಮಾಡಿ ಕೊಟ್ಟರೆ ವಿಧಾನಪರಿಷತ್‌ನಲ್ಲಿ ಸರ್ಕಾರದ ಗಮನ ಸೆಳೆದು ನಿಮಗೆ ದೊರಕಬಹುದಾದ ಮೂಲಭೂತ ಸೌಲಭ್ಯಗಳನ್ನು ಕೊಡಿಸಲು ಪ್ರಯತ್ನಿಸುತ್ತೇನೆ. ಮುಂದಿನ ದಿನಗಳಲ್ಲಿ ನಿಮ್ಮ ಹೋರಾಟಕ್ಕೆ ನಾನು ಕೈಜೋಡಿಸುತ್ತೇನೆ ಎಂದರು.

ಸಮಾರಂಭದಲ್ಲಿ ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ನಾಜಿಯಾ ಸುಲ್ತಾನ, ರಾಜ್ಯಾಧ್ಯಕ್ಷ ನಾರಾಯಣ್ ಬಿ.ಎ, ಪ್ರಧಾನ ಕಾರ್ಯದರ್ಶಿ ಪ್ರಜ್ವಲ್‌ಕುಮಾರ್, ಶ್ರೀರಾಂಪುರ ಗ್ರಾ.ಪಂ. ಮಾಜಿ ಅಧ್ಯಕ್ಷ ರಮೇಶ್, ಸಿದ್ದೇಗೌಡ, ರವಿಕುಮಾರ್, ಚನ್ನ ನಾಯಕ, ಜನಾರ್ಧನ್, ತಾರಾ, ಬಸವರಾಜು, ಆರ್.ಮರಿಸ್ವಾಮಿ, ನಾಗರಾಜ್ ಆರ್.ಎನ್, ಚಂದ್ರು ಎಂ, ಎಲ್. ಕಮಲ, ಶಂಕರ್ ಎಸ್, ಸೋಮಶೇಖರ ಎಸ್, ದೇವರಾಜ್, ಕೆಂಪೇಗೌಡ ಹಾಜರಿದ್ದರು.

ಇಂದಿನ ರೇಸ್ ಶುಕ್ರವಾರಕ್ಕೆ ನಿಗದಿ



ಮೈಸೂರು,ಜು.12–ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ರೇಸಿಂಗ್‌ಗೆ ರೇಸ್ ಟ್ರ್ಯಾಕ್ ಸೂಕ್ತವಾಗಿಲ್ಲದ ಕಾರಣ ನಾಳೆ (ಬುಧವಾರ) ನಡೆಯಬೇಕಿದ್ದ ಮೈಸೂರು ಬೇಸಿಗೆ ರೇಸ್‌ಗಳ 9ನೇ ದಿನದ ರೇಸ್ ಮುಂದೂಡಲಾಗಿದ್ದು, ಅದನ್ನು ಜು.15ರ ಶುಕ್ರವಾರಕ್ಕೆ ನಿಗದಿಪಡಿಸಲಾಗಿದೆ ಎಂದು ಎಂಆರ್‌ಸಿ ಪ್ರಕಟಣೆ ತಿಳಿಸಿದೆ.



ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಕೆ.ಹೆಚ್.ರಾಮಯ್ಯನವರ 143ನೇ ಜಯಂತಿಯನ್ನು ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಅವರ ಸಮಾಧಿ ಸ್ಥಳದಲ್ಲಿ ಆಚರಿಸಲಾಯಿತು. ಟ್ರಸ್ಟಿನ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಬಿಜೆಪಿ ಚಾಮರಾಜ ಕ್ಷೇತ್ರ ಉಪಾಧ್ಯಕ್ಷ ಕುಮಾರ್‌ಗೌಡ, ಬೆಟ್ಟೇಗೌಡ, ರಾಜಕುಮಾರ್, ಯುವ ಮುಖಂಡರಾದ ಕಾರ್ತಿಕ್‌ಗೌಡ, ಅನಂತನಾರಾಯಣ್, ಚಂದನ್, ಕೃಷ್ಣ ಇದ್ದರು.

ಕೊಡಗು ಜಿಲ್ಲೆಯಲ್ಲಿ ಇನ್ನೂ 5 ದಿನ ಭಾರೀ ಮಳೆ ಮುನ್ಸೂಚನೆ

ಮೈಸೂರು, ಮಂಡ್ಯ, ಚಾ.ನಗರದಲ್ಲಿ ತುಂತುರು ಮಳೆ ಸಾಧ್ಯತೆ

ಮೈಸೂರು, ಜು.12(ಆರ್‌ಕೆಬಿ)– ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಕೊಡಗು ಜಿಲ್ಲೆಯಲ್ಲಿ ಮುಂದಿನ ಐದು ದಿನ ಭಾರೀ ಮಳೆಯಾಗಲಿದೆ.



ಕೊಡಗಿನಲ್ಲಿ ಮುಂದಿನ 5 ದಿನಗಳಲ್ಲಿ ಒಟ್ಟಾರೆ 217 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಜು.13ರಂದು 64 ಮಿ.ಮೀ., 14ರಂದು 56 ಮಿ.ಮೀ., 15ರಂದು 33 ಮಿ.ಮೀ. ಹಾಗೂ 16 ಮತ್ತು 17ರಂದು ತಲಾ 32 ಮಿ.ಮೀ. ಮಳೆಯಾಗಲಿದೆ. ಈ ಅವಧಿಯಲ್ಲಿ ಉಷ್ಣಾಂಶದಲ್ಲೂ ಇಳಿಕೆಯಾಗಲಿದ್ದು, ಗರಿಷ್ಠ 20ರಿಂದ 23, ಕನಿಷ್ಠ 18–19 ಡಿಗ್ರಿ ಸೆಲ್ಸಿಯಸ್ ಇರಲಿದೆ. ಮೈಸೂರು, ಚಾಮರಾಜನಗರ ಮಂಡ್ಯ ಜಿಲ್ಲೆಗಳಲ್ಲಿ ತುಂತರು ಮಳೆಯಾಗಲಿದೆ. ಜು.13ರಿಂದ 17ರವರೆಗಿನ 5 ದಿನಗಳ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಒಟ್ಟಾರೆ 38 ಮಿ.ಮೀ., ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 23 ಮಿ.ಮೀ. ಹಾಗೂ ಮಂಡ್ಯ ಜಿಲ್ಲೆಯಲ್ಲಿ 22 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಮೈಸೂರು ಜಿಲ್ಲೆಯಲ್ಲಿ ಗರಿಷ್ಠ 27–28, ಕನಿಷ್ಠ 20–21 ಡಿಗ್ರಿ ಸೆಲ್ಸಿಯಸ್, ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ 26ರಿಂದ 28, ಕನಿಷ್ಠ 22–23 ಡಿಗ್ರಿ ಸೆಲ್ಸಿಯಸ್, ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ 26–28, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ. ಧೀರ್ಘಾವಧಿ ಹವಾಮಾನ ಮನ್ಸೂಚನೆ ಪ್ರಕಾರ ಜು.15ರಿಂದ 21ರವರೆಗೆ ಸರಾಸರಿಗಿಂತ ಕಡಿಮೆ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಗುರುಪೂರ್ಣಿಮೆ: ಇಂದು ಗೋ ಪೂಜೆ

ಮೈಸೂರು, ಜು.12(ಎಸ್‌ಪಿಎನ್)– ಗುರು ಪೂರ್ಣಿಮಾ ಮತ್ತು ವೆಂಕಟಾಚಲ ಅವಧೂತ ಮಹಾರಾಜರ ಸ್ಮರಣಾರ್ಥ ಜು.13ರಂದು ಬೆಳಗ್ಗೆ 11 ಗಂಟೆಗೆ ಗೋ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ಅಗ್ರಹಾರದ ಬಸವೇಶ್ವರ ರಸ್ತೆ 10ನೇ ಕ್ರಾಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಅವಧೂತ ದತ್ತಸಾಯಿ ಪೀಠಿಕಾ ಜನಸೇವಾ ಟ್ರಸ್ಟ್ ಸಂಚಾಲಕ ಶ್ರೀಕಾಂತ್ ಕಶ್ಯಪ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ವೇಳೆ ಮೇಲುಕೋಟೆಯ ಶ್ರೀ ಇಳೈಆಳ್ವಾರ್ ಸ್ವಾಮೀಜಿ, ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಡಿ.ಟಿ.ಪ್ರಕಾಶ್, ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಜೋಗಿ ಮಂಜು, ರಿಷಿ ವಿಶ್ವಕರ್ಮ, ಸಮುದಾಯದ ಮುಖಂಡರಾದ ರಿಷಿ ವಿಶ್ವಕರ್ಮ ಉಪಸ್ಥಿತರಿರುವರು.

ಮಳೆ ಅವಾಂತರದಿಂದ ಸಾರ್ವಜನಿಕರ ರಕ್ಷಣೆಗೆ ರಾತ್ರಿ ಪಾಳಿ ಟಾಸ್ಕ್‌ಫೋರ್ಸ್ ರಚನೆ

ಮೈಸೂರು, ಜು.12(ಆರ್‌ಕೆ)–ನಿರಂತರ ಮಳೆ ಸುರಿಯುತ್ತಿರುವುದರಿಂದ ಉಂಟಾಗುವ ಅವಾಂತರ ತಪ್ಪಿಸಲು ಮೈಸೂರು ಮಹಾನಗರ ಪಾಲಿಕೆಯು 'ರಾತ್ರಿ ಪಾಳಿ ಟಾಸ್ಕ್‌ಫೋರ್ಸ್' ರಚಿಸಿದೆ. ನಾಳೆ (ಜು.13)ಯಿಂದ ಆಗಸ್ಟ್ 17ರವರೆಗೆ ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸಲು ಅಧಿಕಾರಿಗಳನ್ನು ನಿಯೋಜಿಸಿ ಪಾಲಿಕೆ ಕಮೀಷ್ನರ್ ಜಿ.ಲಕ್ಷ್ಮೀಕಾಂತರೆಡ್ಡಿ ಅಧಿಕೃತ ಜ್ಞಾಪನ ಹೊರಡಿಸಿದ್ದಾರೆ. ನಿಯೋಜಿತ ತಂಡಗಳ ಅಧಿಕಾರಿಗಳು ಆಯಾಯ ದಿನ ರಾತ್ರಿ 9ರಿಂದ ಬೆಳಗ್ಗೆ 6ರವರೆಗೆ ಪಾಲಿಕೆಯ ಕಂಟ್ರೋಲ್ ರೂಂನಲ್ಲಿ ಹಾಜರಿದ್ದು, ದೂರುಗಳು ಬಂದ ತಕ್ಷಣ ಅಭಯ ತಂಡದೊಂದಿಗೆ ಸ್ಥಳಕ್ಕೆ ತೆರಳಿ ಕಾರ್ಯನಿರ್ವಹಿಸಬೇಕೆಂದು ತಿಳಿಸಿದ್ದಾರೆ. ಮನೆಗಳಿಗೆ ನೀರು ನುಗ್ಗಿದಲ್ಲಿ ನೆಸ್‌ಪೋಲ್ ಯಂತ್ರದಿಂದ ನೀರನ್ನು ಹೊರ ತೆಗೆಯಬೇಕು. ಮನೆಗಳು ಕುಸಿದು ಬಿದ್ದಲ್ಲಿ ಜೆಸಿಬಿ, ಗ್ಯಾಂಗ್‌ಮನ್‌ಗಳೊಂದಿಗೆ ತೆರವುಗೊಳಿಸಬೇಕು. ಬ್ಲಾಕ್ ಆದ ಮ್ಯಾನ್‌ಹೋಲ್‌ಗಳ ದುರಸ್ತಿ, ಮರಗಳು ಮುರಿದು ಬಿದ್ದಲ್ಲಿ ತೆರವುಗೊಳಿಸುವುದು, ವಿದ್ಯುತ್ ಕಂಬಗಳು ನೆಲಕ್ಕುರುಳಿದಲ್ಲಿ, ವಿದ್ಯುತ್ ಸಂಪರ್ಕ ಕಡಿತಗೊಂಡಲ್ಲಿ ಸರಿಪಡಿಸಬೇಕೆಂದು ಅವರು ತಿಳಿಸಿದ್ದಾರೆ.

ಇಂದಿನಿಂದ ಆ.17ರವರೆಗೆ ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಹಾಗೂ ಅವರ ಮೊಬೈಲ್ ನಂಬರ್‌ಗಳು ಇಂತಿವೆ

13-07-2022ರಿಂದ	1.ಸುಶ್ರೂತ್,	ಅಭಿವೃದ್ಧಿ ಅಧಿಕಾರಿ, ವ.ಕ.-01	9448666380
16-07-2022ರವರೆಗೆ	2.ಎ.ಆರ್.ಕಿರಣ್	ಕಿರಿಯ ಇಂಜಿನಿಯರ್, ವ.ಕ.01	9945550791
	3.ಧನುಷ್ ಎಂ.ಎಲ್.	ಕಿರಿಯ ಇಂಜಿನಿಯರ್(ಯುಜಿಡಿ)	8123383036
	4. ವಿನಯ್	ಕಿರಿಯ ಇಂಜಿನಿಯರ್ (ಎಲೆಕ್ಟ್ರಿಕಲ್)	9449404947
17-07-2022 ರಿಂದ	1. ಸೋಮಶೇಖರ್	ಅಭಿವೃದ್ಧಿ ಅಧಿಕಾರಿ, ವ.ಕ.-02	9686237138
20-07-2022ರವರೆಗೆ	2. ದೀಪಕ್	ಸಹಾಯಕ ಇಂಜಿನಿಯರ್, ವ.ಕ.02	9886688905
	3. ಪ್ರಸನ್ನಕುಮಾರ್	ಸಹಾಯಕ ಇಂಜಿನಿಯರ್, (ಯುಜಿಡಿ)	9164075405
	4. ಕವನ್	ಸಹಾಯಕ ಇಂಜಿನಿಯರ್ (ಎಲೆಕ್ಟ್ರಿಕಲ್)	7019977184
21-07-2022 ರಿಂದ	1. ಟಿ.ಎಸ್.ಸತ್ಯಮೂರ್ತಿ	ಅಭಿವೃದ್ಧಿ ಅಧಿಕಾರಿ, ವ.ಕ.-03	9731398207
24-07-2022ರವರೆಗೆ	2. ರಜತ್ ಕುಮಾರ್	ಕಿರಿಯ ಇಂಜಿನಿಯರ್, ವ.ಕ.03	8660782452
	3. ಜಿ.ಡಿ.ಶಂಕರ್	ಕಿರಿಯ ಇಂಜಿನಿಯರ್(ಯುಜಿಡಿ)	9972997346
	4. ವಿನೋದ್	ಸಹಾಯಕ ಇಂಜಿನಿಯರ್, (ಯುಜಿಡಿ)	8197751456
25-07-2022 ರಿಂದ	1. ವೈ.ಟಿ.ಯೋಗಾನಂದ	ಅಭಿವೃದ್ಧಿ ಅಧಿಕಾರಿ, ವ.ಕ.-04	9980809996
28-07-2022ರವರೆಗೆ	2. ರಾಮಣ್ಣ	ಕಿರಿಯ ಇಂಜಿನಿಯರ್, ವ.ಕ.04	9964931374
	3. ಕೆಂಪೇಗೌಡ	ಕಿರಿಯ ಇಂಜಿನಿಯರ್(ಯುಜಿಡಿ)	9448293623
	4. ಪ್ರದೀಪ್	ಸಹಾಯಕ ಇಂಜಿನಿಯರ್, (ಯುಜಿಡಿ)	9353072766
29-07-2022 ರಿಂದ	1. ಮನುಗೌಡ	ಅಭಿವೃದ್ಧಿ ಅಧಿಕಾರಿ, ವ.ಕ.-05	9611879547
01-08-2022ರವರೆಗೆ	2. ಅಭಿಲಾಷ್	ಕಿರಿಯ ಇಂಜಿನಿಯರ್, ವ.ಕ.05	8095179720
	3. ಟಿ.ಜಿ.ನಾಗರಾಜೇಗೌಡ	ಕಿರಿಯ ಇಂಜಿನಿಯರ್(ಯುಜಿಡಿ)	9916631092
	4. ಗೋವಿಂದನಾಯ್ಕ	ಕಿರಿಯ ಇಂಜಿನಿಯರ್(ಎಲೆಕ್ಟ್ರಿಕಲ್)	9845027363
02-08-2022 ರಿಂದ	1. ಮಂಜುನಾಥ್	ಅಭಿವೃದ್ಧಿ ಅಧಿಕಾರಿ, ವ.ಕ.-06	8660150889
05-08-2022ರವರೆಗೆ	2. ಕೃಷ್ಣಮೂರ್ತಿ	ಕಿರಿಯ ಇಂಜಿನಿಯರ್, ವ.ಕ.06	9986686637
	3. ಎಂ.ವಿ.ಸಾಗರ್	ಸಹಾಯಕ ಇಂಜಿನಿಯರ್(ನೀರು ಸರಬರಾಜು)	8548888947
	4. ಶಂಕರ್	ಕಿರಿಯ ಇಂಜಿನಿಯರ್(ಯುಜಿಡಿ)	9972997346
06-08-2022 ರಿಂದ	1. ಆರ್.ಜೆ.ರಾಜೀವ್‌ನಾಥ್	ಅಭಿವೃದ್ಧಿ ಅಧಿಕಾರಿ, ವ.ಕ.-07	9731926176
09-08-2022ರವರೆಗೆ	2. ರಾಕೇಶ್	ಕಿರಿಯ ಇಂಜಿನಿಯರ್, ವ.ಕ.07	7349670084
	3. ಗಿರೀಶ್ ಬಿ.ಎಲ್.	ಸಹಾಯಕ ಇಂಜಿನಿಯರ್(ಯುಜಿಡಿ)	7406890709
	4. ವಿಶ್ವಾಸ್	ಸಹಾಯಕ ಇಂಜಿನಿಯರ್(ಎಲೆಕ್ಟ್ರಿಕಲ್)	8317472886
10-08-2022 ರಿಂದ	1. ಶಿವಕುಮಾರ್	ಅಭಿವೃದ್ಧಿ ಅಧಿಕಾರಿ, ವ.ಕ.-08	9900684767
13-08-2022ರವರೆಗೆ	2. ನದೀಮ್ ಅಹಮದ್	ಕಿರಿಯ ಇಂಜಿನಿಯರ್, ವ.ಕ.08	9916140868
	3. ಎಸ್.ಎಲ್.ರವಿಕುಮಾರ್	ಕಿರಿಯ ಇಂಜಿನಿಯರ್(ಯುಜಿಡಿ)	9986673757
	4. ಮುದ್ದುಮಲ್ಲೇಗೌಡ	ಕಿರಿಯ ಇಂಜಿನಿಯರ್(ನೀರು ಸರಬರಾಜು)	9900598089
14-08-2022 ರಿಂದ 17-08-2022ರವರೆಗೆ	1. ಮಹಮ್ಮದ್ ಮುಸ್ತಾಫ	ಸಹಾಯಕ ಕಾರ್ಯಪಾಲಕ ಅಭಿಯಂತರರು (ನೀರು ಸರಬರಾಜು)	9535525049
	2. ಭೈರಪ್ಪ	ಕಿರಿಯ ಇಂಜಿನಿಯರ್, ವ.ಕ.09	9972962956

ಹಡಪದ ಅಪ್ಪಣ್ಣ ಜಯಂತಿ ಆಚರಿಸಲು ಪೂರ್ವಭಾವಿ ಸಭೆ



ಮೈಸೂರು, ಜು.12– ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಆಚರಿಸುವ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ. ಮಂಜುನಾಥ್ ಸ್ವಾಮಿ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಜುಲೈ 26ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ಆಚರಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಸುದರ್ಶನ್ ಸೇರಿದಂತೆ ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್. ನಾಗೇಶ್, ಸದಸ್ಯರಾದ ಹರೀಶ್ ರೆಡ್ಡಿ, ನಾಗೇಂದ್ರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಆ.13, ರಾಷ್ಟ್ರೀಯ ಲೋಕ್ ಅದಾಲತ್

ಮೈಸೂರು, ಜು.12– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಆಗಸ್ಟ್ 13ರಂದು ರಾಜ್ಯಾದ್ಯಂತ ರಾಷ್ಟ್ರೀಯ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮತ್ತು ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಇಚ್ಛಿಸಿದಲ್ಲಿ ಮುಂಚಿತವಾಗಿ ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ತಾಲೂಕು ಕಾನೂನು ಸೇವೆಗಳ ಸಮಿತಿಗಳು ಮತ್ತು ಖಾಯಂ ಜನತಾ ನ್ಯಾಯಾಲಯವನ್ನು ಸಂಪರ್ಕಿಸಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ತಿಳಿಸಿದ್ದಾರೆ.

ಸೋಮವಾರ ಮೈಸೂರಲ್ಲಿ 11.53 ಮಿ.ಮೀ. ಮಳೆ

ಮೈಸೂರು, ಜು.12(ಎಸ್‌ಪಿಎನ್)– ಮೈಸೂರು ತಾಲೂಕಿನಲ್ಲಿ ಸೋಮವಾರ 11.53 ಮಿ.ಮೀ ಮಳೆಯಾಗಿದ್ದು, ತಿ.ನರಸೀಪುರ 5.11, ಹುಣಸೂರು 10.9, ಕೆ.ಆರ್.ನಗರ 15.6, ಹೆಚ್.ಡಿ.ಕೋಟೆ 11.4, ಪಿರಿಯಾಪಟ್ಟಣ 25, ಸರಗೂರು 22.6 ಮಿ.ಮೀ ಮಳೆಯಾಗಿದ್ದು, ನಂಜನಗೂಡು ತಾಲೂಕಿನ ವರದಿ ಲಭ್ಯವಾಗಿಲ್ಲ ಎಂದು ಮೈಸೂರು ಕಂಟ್ರೋಲ್ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.



ಮೈಸೂರು ನಗರಪಾಲಿಕೆ ವಾರ್ಡ್ ನಂ. 47ರ ನ್ಯೂ ಕಾಂತರಾಜ ಅರಸ್ ರಸ್ತೆಯ ವಿಜಯ ಬ್ಯಾಂಕ್ ವೃತ್ತದಿಂದ ಅಪೋಲೋ ಆಸ್ಪತ್ರೆ ವೃತ್ತದವರೆಗೆ ಹಾಗೂ ವಾರ್ಡ್ ನಂ.57ರ ಪಂಚಮಂತ್ರ ರಸ್ತೆ (ನ್ಯೂ ಕಾಂತರಾಜ ಅರಸ್ ರಸ್ತೆಯಿಂದ ಉದಯರವಿ) ರಸ್ತೆಯ 25 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಮಂಗಳವಾರ ಶಾಸಕ ಎಸ್.ಎ.ರಾಮದಾಸ್ ಚಾಲನೆ ನೀಡಿದರು. ಚಿತ್ರದಲ್ಲಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಮುಡಾ ಸದಸ್ಯೆ ಲಕ್ಷ್ಮಿದೇವಿ ಇನ್ನಿತರರನ್ನು ಕಾಣಬಹುದು.



ರಾಜ್ಯ ಒಕ್ಕಲಿಗರ ಸಂಘದ ಸಂಸ್ಥಾಪಕ ಕೆ.ಹೆಚ್.ರಾಮಯ್ಯನವರ ಜಯಂತಿಯನ್ನು ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಅವರ ಸಮಾಧಿ ಸ್ಥಳದಲ್ಲಿ ಮೈಸೂರಿನ ವಿವಿಧ ಒಕ್ಕಲಿಗರ ಸಂಘದ ಸದಸ್ಯರು, ಜನಪ್ರತಿನಿಧಿಗಳು ಸರಳವಾಗಿ ಆಚರಿಸಿದರು.



ಹುಟ್ಟುಹಬ್ಬ ಆಚರಿಸಿಕೊಂಡ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಗಂಗಾಧರ್ ಅವರಿಗೆ ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ನಿಕಟಪೂರ್ವ ಉಪಾಧ್ಯಕ್ಷ ವಿಕ್ರಾಂತ ಪಿ.ದೇವೇಗೌಡ, ಮುಖಂಡರಾದ ಶ್ರೀನಿವಾಸ್, ಶಂಬಣ್ಣ, ರಾಮಣ್ಣ, ಕುಮಾರ್‌ಗೌಡ, ದೇವು, ಕಾಳ ಬೋರಪ್ಪ, ಸೊಸೈಟಿ ರಾಜು, ನಾಗೇಂದ್ರ, ರಾಜಕುಮಾರ್, ರಾಕೇಶ್‌ಗೌಡ ಪ್ರದೀಪ್ ಶುಭಾಶಯ ಕೋರಿದರು.

ಜು.15ರಂದು ದಾವಣಗೆರೆಯಲ್ಲಿ ಸಾರಿಗೆ ನಿಗಮಗಳ ನೌಕರರ ಸಾರಿಗೆ ಸಮ್ಮೇಳನ



ಮೈಸೂರು, ಜು.12(ಆರ್‌ಕೆಬಿ)– ಸಾರಿಗೆ ಇಲಾಖೆ ಹಾಗೂ ಸಂಸ್ಥೆಯ ಸಿಬ್ಬಂದಿ ಎದುರಿಸುತ್ತಿರುವ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಜು.15 ರಂದು ದಾವಣಗೆರೆಯಲ್ಲಿ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳ ನೌಕರರ ಅಖಿಲ ಕರ್ನಾಟಕ ಸಾರಿಗೆ ಮಹಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ ತಿಳಿಸಿದೆ. ಮೈಸೂರು ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನೌಕರರ ಕೂಟದ ಮಂಡ್ಯ ವಿಭಾಗದ ತಾಳಶಾಸನ ಮೋಹನ್, ಅಂದು ಬೆಳಗ್ಗೆ 10.30ಕ್ಕೆ ಅಲ್ಲಿನ ಪಿ.ಬಿ. ರಸ್ತೆಯ ತ್ರಿಶೂಲ್ ಕಲಾ ಭವನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮೇಳನ ಉದ್ಘಾಟಿಸುವರು. ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಕೂಟದ ಅಧ್ಯಕ್ಷ ಆರ್.ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಪಿ.ತಿಪ್ಪೇಸ್ವಾಮಿ, ಶಾಸಕರಾದ ಎಸ್.ಎ.ರವೀಂದ್ರನಾಥ್, ಇನ್ನಿತರರು ಭಾಗವಹಿಸು ವರು ಎಂದರು. ಈ ಸಮ್ಮೇಳನದಿಂದ ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಅಂದು ರಜೆ ಇರುವವರು ಹಾಗೂ ಪ್ರತಿ ಡಿಪೋನಿಂದ ಐವರನ್ನು ಮಾತ್ರ ಸಮ್ಮೇಳನಕ್ಕೆ ಕಳುಹಿಸುವಂತೆ ಕೋರಲಾಗಿದೆ ಎಂದು ಹೇಳಿದರು. ಗೋಷ್ಠಿಯಲ್ಲಿ ಮೈಸೂರು ವಿಭಾಗದ ಸಿ.ಡಿ.ವಿಶ್ವನಾಥ್, ಚಾಮರಾಜನಗರ ವಿಭಾಗದ ರಾಜೇಶ್ ಉಪಸ್ಥಿತರಿದ್ದರು

ಕೆಎಟಿ ಆದೇಶವನ್ನು ಅನುಷ್ಠಾನಗೊಳಿಸುವಲ್ಲಿ ಮೀನಾಮೇಷ ಆರೋಪ

ಸಹಕಾರ ಸಂಘಗಳ ಉಪನಿಬಂಧಕರು, ಅಧಿಕಾರಿಗಳ ವಿರುದ್ಧ ಪ್ರತಿಭಟನೆ



ಕೆಎಟಿ ಆದೇಶಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಂಬಂಧಿಸಿದ ಅಧಿಕಾರಿಗೆ ಕಾರ್ಯೋನ್ಮುಖರಾಗುವಂತೆ ಆದೇಶ ನೀಡಲಾಗಿದೆ. ಕಾರ್ಯದರ್ಶಿ ಜಗನ್ನಾಥ್ ಅವರಿಂದ ಅಧಿಕಾರವನ್ನು ಪ್ರಭಾರ ಜಿ.ಎಂ.ಮನು ಅವರಿಗೆ ವಹಿಸಿಕೊಡುವಂತೆ ಸಹಾಯಕ ನಿಬಂಧಕರಿಗೆ ಆದೇಶ ನೀಡಲಾಗಿದೆ.

– **ವಿಕ್ರಂರಾಜೇ ಅರಸ್,**
ಸಹಕಾರ ಸಂಘಗಳ ಉಪನಿಬಂಧಕರು.

ಮಂಡ್ಯ, ಜು.12(ಮೋಹನ್‌ರಾಜ್)– ಕರ್ನಾಟಕ ಆಡಳಿತಾತ್ಮಕ ಪ್ರಾಧಿಕಾರ (ಕೆಎಟಿ) ಆದೇಶವನ್ನು ಅನುಷ್ಠಾನಗೊಳಿಸುವಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಆರೋಪಿಸಿ, ನಗರದಲ್ಲಿ ಮಂಗಳವಾರ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡರ ನೇತೃತ್ವದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಗೆಂಡೆಹೊಸಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಮದಿಂದ ಆಗಮಿಸಿದ ಹಾಲು ಉತ್ಪಾದಕರ ಸಹಕಾರ ಸಂಘದ ಪದಾಧಿಕಾರಿಗಳು, ಸದಸ್ಯರು ನಗರದ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ಬಳಿ ಸಮಾವೇಶಗೊಂಡ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಗೆಂಡೆಹೊಸಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 2010ರಲ್ಲಿ ಕಾರ್ಯದರ್ಶಿಯಾಗಿದ್ದ ಜಗನ್ನಾಥ್ 4 ಲಕ್ಷ ಕ್ಕೂ ಹೆಚ್ಚು ಭ್ರಷ್ಟಾಚಾರ ನಡೆಸಿದ್ದರು. ಈ ಸಂಬಂಧ ಆತನ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಆರೋಪ ಸಾಭೀತಾಗಿ ಕರ್ತವ್ಯದಿಂದ ವಜಾ ಮಾಡಿದ್ದೂ ಅಲ್ಲದೆ, ಭ್ರಷ್ಟಾಚಾರ ನಡೆಸಿದ್ದ ಹಣವನ್ನು ಆತನಿಂದಲೇ ವಸೂಲಿ ಮಾಡುವಂತೆ ಸಹಕಾರ ಇಲಾಖೆ ಆದೇಶ ನೀಡಿತ್ತು ಎಂದು ಹೇಳಿದರು. ನಂತರದ ದಿನಗಳಲ್ಲಿ ಸಹಾಯಕ ನಿರ್ದೇಶರಾಗಿದ್ದ ಮಂಜುನಾಥ್ ಅವರು ಕಾರ್ಯದರ್ಶಿ ಜಗನ್ನಾಥ್ ಪರವಾಗಿ ಆದೇಶ ನೀಡಿ 2010ರಿಂದ ಇಲ್ಲಿಯವರೆಗೆ ಜಗನ್ನಾಥನಿಗೆ ವೇತನ ಪಾವತಿ ಮಾಡಬೇಕು. ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆದೇಶ ನೀಡಿದ್ದರು. ಇವರ ಆದೇಶವನ್ನು ಪ್ರಶ್ನಿಸಿ ನಾವು ಕರ್ನಾಟಕ ಆಡಳಿತಾತ್ಮಕ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಪ್ರಾಧಿಕಾರ ವಿಚಾರಣೆ ನಡೆಸಿ ನಮ್ಮ ಪರವಾಗಿ ಆದೇಶ ನೀಡಿ ಆತನ ವಿರುದ್ಧ ಹಿಂದೆ ನೀಡಿದ್ದ ಆದೇಶವನ್ನೇ ಎತ್ತಿ ಹಿಡಿದಿದೆ. ತಕ್ಷಣ ಜಗನ್ನಾಥನ ವಿರುದ್ಧ ಕ್ರಮ ಕೈಗೊಳ್ಳಬೇಕು. ಕರ್ತವ್ಯದಿಂದ ಬಿಡುಗಡೆಗೊಳಿಸಬೇಕು ಎಂದು ಆದೇಶ ನೀಡಿದ್ದರೂ ಸಹಕಾರ ಸಂಘಗಳ ಉಪನಿಪಂಧಕರು ಮತ್ತು ಅಧಿಕಾರಿಗಳು ಕೆಎಟಿ ಆದೇಶವನ್ನು ಅನುಷ್ಠಾನಗೊಳಿಸುವಲ್ಲಿ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಆರೋಪಿಸಿದರು.

ತಕ್ಷಣ ಜಗನ್ನಾಥನನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಜಿ.ಎಂ.ಮನು ಅವರಿಗೆ ಪ್ರಭಾರ ಅಧಿಕಾರ ವಹಿಸಿಕೊಡಬೇಕು ಎಂದು ಆಗ್ರಹಿಸಿ ಸಹಕಾರ ಸಂಘಗಳ ಉಪನಿಬಂಧಕ ವಿಕ್ರಂರಾಜೇ ಅರಸ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮನ್‌ಮುಲ್ ನಿರ್ದೇಶಕ ಬೋರೇಗೌಡ, ತಾಪಂ ಮಾಜಿ ಸದಸ್ಯ ಸಂತೋಷ್, ಹಾಲು ಉತ್ಪಾದಕರ ಸಹಕಾರ ಸಂಘದ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು.

ಕೊಡಿಯಾಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಲೋಕಾರ್ಪಣೆ





ಶ್ರೀರಂಗಪಟ್ಟಣ, ಜು.12(ವಿನಯ್ ಕಾರೇಕುರ)– ತಾಲೂಕಿನ ಕೊಡಿಯಾಲ ಗ್ರಾಮದಲ್ಲಿ 170 ಲಕ್ಷ ರೂ. ವೆಚ್ಚದಡಿ ನಿರ್ಮಾಣವಾಗಿರುವ 10 ಹಾಸಿಗೆ ಸಾಮರ್ಥ್ಯದ ಸುಸಜ್ಜಿತ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಕೊಡಿಯಾಲ ಗ್ರಾಮವು ಬಡವರು, ನೇಕಾರರು ಹಾಗೂ ರೈತಾಪಿ ವರ್ಗ ನೆಲೆಸಿರುವ ಗ್ರಾಮವಾಗಿದ್ದು, ಹೆಚ್ಚಿನ ಜನಸಂದಣಿಯನ್ನು ಹೊಂದಿದ್ದು, ಗ್ರಾಮದಲ್ಲಿ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಿಸಲಾಗಿದ್ದು, ಶಸ್ತ್ರಚಿಕಿತ್ಸಾ ಕೊಠಡಿ, ಹೆರಿಗೆ ಕೊಠಡಿ, ಔಷಧ ಶೇಖರಣಾ ಕೊಠಡಿ, ಪ್ರಯೋಗಾಲಯ, ಪ್ರತ್ಯೇಕ ಪುರುಷ ಮತ್ತು ಮಹಿಳಾ ವಾರ್ಡ್ ಹಾಗೂ ವೈದ್ಯಾಧಿಕಾರಿಗಳ ಕೊಠಡಿ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಡಾ.ಟಿ.ಎನ್.ಧನಂಜಯ್ ಮಾತನಾಡಿ, ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವು 24X7 ಮಾದರಿಯಲ್ಲಿ ಕಾರ್ಯನಿರ್ವಹಿಸಲಿದೆ. ಮುಂದಿನ 15 ದಿನಗಳಲ್ಲಿ ಆಸ್ಪತ್ರೆಗೆ ಆಗತ್ಯವಿರುವ ಸಲಕರಣೆಗಳನ್ನು ಪೂರೈಕೆ ಮಾಡಲಾಗುವುದು ಎಂದರು.


ವೇದಿಕೆಯಲ್ಲಿ ತಾಲೂಕು ಆರೋಗ್ಯಾಧಿಕಾರಿ ವೆಂಕಟೇಶ್, ವೈದ್ಯಾಧಿಕಾರಿ ಡಾ. ಹೇಮಲತಾ, ಜಿಪಂ ಮಾಜಿ ಸದಸ್ಯ ಮರಿಗೌಡ, ತಾಪಂ ಮಾಜಿ ಸದಸ್ಯರಾದ ದೇವೇಗೌಡ, ಭಾಸ್ಕರ್, ಮುಖಂಡರಾದ ರೈಸಮಿಲ್ ದೇವೇಗೌಡ, ನಟರಾಜು, ಹೇಮಂತ್, ಕಿಶೋರ್ ಇತರರು ಇದ್ದರು.

ದ್ರೌಪದಿ ಆಯ್ಕೆ ಪ್ರಜಾಪ್ರಭುತ್ವಕ್ಕೆ ಶೋಭೆ: ವೇದಿಕೆ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಬುಡಕಟ್ಟು ಜನಾಂಗದ ಪ್ರತಿನಿಧಿಯಾಗಿರುವ ದ್ರೌಪದಿ ಮುರ್ಮು ಅವರು ದೇಶದ ರಾಷ್ಟ್ರಪತಿಯಾಗಿ ಆಯ್ಕೆಯಾದರೆ, ಅದು ಪ್ರಜಾಪ್ರಭುತ್ವದ ಉನ್ನತಿಗೆ ಶೋಭೆ ತರಲಿದೆ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ತಿಳಿಸಿದರು.

ಕನ್ನಡ ಭಾಷೆಗೆ ಒಂದು ಪಕ್ಷ ಬೇಕು: ನೆರೆಯ ಆಂಧ್ರಪ್ರದೇಶ, ತಮಿಳುನಾಡು ಹಾಗೂ ತೆಲಂಗಾಣ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಅಲ್ಲಿನ ಜನತೆ ಬೆಂಬಲಿಸುತ್ತಾರೆ. ಅದೇ ರೀತಿ ಕನ್ನಡ ನಾಡಿನ ಸಾರ್ವಭೌಮತೆ ಎತ್ತಿ ಹಿಡಿಯಲು ಕನ್ನಡ ನೆಲದ ಪ್ರಾದೇಶಿಕ ಪಕ್ಷದ ಅವಶ್ಯಕತೆ ಇದ್ದು, ಜಾತ್ಯಾತೀತ ನೆಲೆಗಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜೆಡಿಎಸ್ ಬೆಂಬಲಕ್ಕೆ ಜನತೆ ನಿಲ್ಲಲಿದ್ದಾರೆ ಎಂಬ ವಿಶ್ವಾಸ ನಮ್ಮದಾಗಿದೆ ಎಂದರು.

ಕಾವೇರಿ ನದಿಗೆ ಹಾರಿದ ಯುವಕ

ಶ್ರೀರಂಗಪಟ್ಟಣ, ಜು.12(ವಿನಯ್‌ಕಾರೇಕುರ)– ಸ್ನೇಹಿತರೊಂದಿಗೆ ಕೆಆರ್‌ಎಸ್‌ಗೆ ಬಂದಿದ್ದ ಯುವಕನೊಬ್ಬ ಏಕಾಏಕಿ ಕಾವೇರಿ ನದಿಗೆ ಹಾರಿದ್ದು, ನಾಪತ್ತೆಯಾಗಿರುವ ಘಟನೆ ತಾಲೂಕಿನ ಕೆಆರ್‌ಎಸ್ ಜಲಾಶಯದ ಚೆಕ್ ಪೋಸ್ಟ್ ಬಳಿ ಮಂಗಳವಾರ ನಡೆದಿದೆ.



ಮೈಸೂರಿನ ಪಡುವಾರಹಳ್ಳಿ ನಿವಾಸಿ ವೈರುಮುಡಿಗೌಡ ಅವರ ಪುತ್ರ ಸೃಜನ್(20) ನದಿಗೆ ಹಾರಿದವನಾಗಿದ್ದು, ಈತ ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ದ್ವಿತೀಯ ಬಿ.ಕಾಂ. ವ್ಯಾಸಂಗ ಮಾಡುತ್ತಿದ್ದಾನೆ.

ವಿವರ: ಸೃಜನ್ ಮಂಗಳವಾರ ಬೆಳಗ್ಗೆ ತನ್ನ ಆರು ಜನ ಸ್ನೇಹಿತರೊಂದಿಗೆ ಮೂರು ಬೈಕ್‌ನಲ್ಲಿ ಕೆಆರ್‌ಎಸ್ ಜಲಾಶಯಕ್ಕೆ ತೆರಳಿದ್ದಾನೆ. ದಾರಿ ಮಧ್ಯೆ ಚೆಕ್‌ಪೋಸ್ಟ್ ಸಮೀಪವಿದ್ದ ಫಿಶ್‌ಬೂತ್‌ಗೆ ಸ್ನೇಹಿತರೆಲ್ಲಾ ತೆರಳಿ ಫೋಟೋ ತೆಗೆದುಕೊಂಡು ಖುಷಿಯಿಂದಲೇ ಜಲಾಶಯಕ್ಕೆ ತೆರಳುತ್ತಿದ್ದರು. ಈ ವೇಳೆ ಸೃಜನ್ ಸ್ನೇಹಿತರಿಗೆ ನೀವು ಮುಂದೆ ಹೋಗಿ ನಾನು ಬರುತ್ತೇನೆ ಎಂದು ಹೇಳಿ, ಏಕಾಏಕಿ ನದಿಗೆ ಹಾರಿದ್ದಾನೆ ಎಂದು ಪೊಲೀಸರಿಗೆ ಸೃಜನ್ ತಂದೆ ದೂರು ನೀಡಿದ್ದಾರೆ. ಜಲಾಶಯದಿಂದ 70 ಸಾವಿರ ಕ್ಯೂಸೆಕ್‌ಗೂ ಹೆಚ್ಚು ನೀರು ಬಿಡಲಾಗುತ್ತಿರುವುದರಿಂದ ಸೃಜನ್ ನದಿಗೆ ಹಾರಿದ ಕೂಡಲೇ ಕಣ್ಮರೆಯಾಗಿದ್ದಾನೆ. ಈತನ ಪತ್ತೆಗಾಗಿ ಶೋಧ ನಡೆಸಲಾಗುತ್ತಿದೆ. ಇದಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷಿ ಇಲಾಖೆ ಸೌಲಭ್ಯ ಸದ್ಬಳಕೆಗೆ ಶಾಸಕರ ಸಲಹೆ



ನಾಗಮಂಗಲ, ಜು.12(ಮಹೇಶ್)– ಕೃಷಿ ಇಲಾಖೆಯಿಂದ ಹಲವು ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಿದ್ದು, ರೈತರು ಇವುಗಳ ಸದ್ಬಳಕೆ ಮಾಡಿಕೊಂಡು ಅಭಿವೃದ್ಧಿ ಹೊಂದಬೇಕು ಎಂದು ಶಾಸಕ ಸುರೇಶ್‌ಗೌಡ ಸಲಹೆ ನೀಡಿದರು.

ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಮಂಗಳವಾರ ಕೃಷಿ ಇಲಾಖೆಯ ಹಲವು ಯೋಜನೆ ಮಾಹಿತಿಯುಳ್ಳ ವಾಹನಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ತಾಲೂಕಿನಾದ್ಯಂತ ಉತ್ತಮ ಮಳೆಯಾಗಿದ್ದು, ಇನ್ನೂ ಮೂರು ತಿಂಗಳ ಮಳೆ ಮುಂದುವರೆಯುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಹಾಗಾಗಿ, ರೈತರು ಕೃಷಿ ಇಲಾಖೆಯ ಸಲಹೆಯಂತೆ ಮಣ್ಣು ಪರೀಕ್ಷೆ ನಡೆಸಿ ಆಯಾ ಕಾಲಕ್ಕೆ ಅನುಗುಣವಾಗಿ ಬೆಳೆ ಬೆಳೆಯಬೇಕು. ಈ ಬಗ್ಗೆ ಕೃಷಿ ಅಧಿಕಾರಿಗಳಿಂದ ಮಾಹಿತಿ ಪಡೆಯಬೇಕು. ಇದರ ಜೊತೆಗೆ, ಬೆಳೆ ವಿಮೆಯ ಕುರಿತು ಸಲಹೆ ಪಡೆಯಬೇಕು ಎಂದು ತಿಳಿಸಿದರು.

ಜಿಲ್ಲಾ ಕೃಷಿ ನಿರ್ದೇಶಕ ಅಶೋಕ್ ಮಾತನಾಡಿ, ಕೃಷಿಯನ್ನು ಉತ್ತೇಜಿಸುವ ಹಾಗೂ ಲಾಭದಾಯಕವಾಗಿ ಕೃಷಿ ಅಭಿಯಾನದಡಿ ಸಂಚರಿಸುವ ರಥವು ಪ್ರತಿ ಹೋಬಳಿವಾರು ಹಾಗೂ ಪಂಚಾಯಿತಿಗಳಲ್ಲಿ ಸಂಚರಿಸಿ ಕೃಷಿ ಇಲಾಖೆ ವತಿಯಿಂದ ರೈತರಿಗೆ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಲಿದೆ ಎಂದರು.

ನಂತರ ರೈತರಿಗೆ ಇಲಾಖೆಯಿಂದ ಕೃಷಿ ಪರಿಕರ ಹಾಗೂ ಬಿತ್ತನೆ ರಾಗಿಯನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ಕೃಷಿ ಅಧಿಕಾರಿ ಜಯರಾಮ್, ತೋಟಗಾರಿಕೆ ಇಲಾಖೆ ಶಾಂತಮ್ಮ, ಕುಮಾರ್, ಮಂಜುನಾಥ್ ಹಾಜರಿದ್ದರು.

ಆಲಂಬಾಡಿ ಕಾವಲು ಗ್ರಾಪಂ ಅಧ್ಯಕ್ಷರಾಗಿ ಸುಮಾ ಆಯ್ಕೆ



ಕೆ.ಆರ್.ಪೇಟೆ, ಜು.12(ಶ್ರೀನಿವಾಸ್)– ತಾಲೂಕಿನ ಆಲಂಬಾಡಿ ಕಾವಲು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸುಮಾ ಪ್ರಶಾಂತ್ ಅವರು ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ವೇದಾಂಬ ಬೋರಲಿಂಗೇಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸುಮಾ ಪ್ರಶಾಂತ್ ಹಾಗೂ ಕಾಂಗ್ರೆಸ್–ಬಿಜೆಪಿ ಮೈತ್ರಿ ಬೆಂಬಲಿತ ಅಭ್ಯರ್ಥಿ ಇಶ್ರತ್ ಉನ್ನೀಸಾ ಅವರು ನಾಮಪತ್ರ ಸಲ್ಲಿಸಿದ್ದರು.

ನುತರ ನಡೆದ ಮತದಾನದಲ್ಲಿ ಸುಮಾ ಪ್ರಶಾಂತ್ 11 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರು. ಇಶ್ರತ್ ಉನ್ನಿಸಾ 7 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ತಾಪಂ ಇಓ ಸತೀಶ್, ಸಹ ಚುನಾವಣಾಧಿಕಾರಿಯಾಗಿ ತಾಪಂ ವ್ಯವಸ್ಥಾಪಕ ಅನಿಲ್‌ಬಾಬು, ಪಿಡಿಓ ವಾಣಿ ಕಾರ್ಯನಿರ್ವಹಿಸಿದರು. ನೂತನ ಅಧ್ಯಕ್ಷೆ ಸುಮಾಪ್ರಶಾಂತ್ ಅವರನ್ನು ಜೆಡಿಎಸ್ ಮುಖಂಡರಾದ ಎ.ಆರ್.ರಘು, ಎಂ.ಮೋಹನ್, ತಾಪಂ ಮಾಜಿ ಸದಸ್ಯ ಎ.ಎಂ.ಸಂಜೀವಪ್ಪ, ಟಿಎಪಿಸಿಎಂಎಸ್ ನಿರ್ದೇಶಕ ಶಶಿಧರ್ ಸಂಗಾಪುರ, ತನ್ವೀರ್‌ಪಾಷಾ, ಉಪಾಧ್ಯಕ್ಷ ಮುಜಾಹಿದ್‌ಖಾನ್, ಸದಸ್ಯರಾದ ಎ.ಟಿ.ಕರೀಗೌಡ, ಎ.ರಾಜು, ವೇದಾಂಬ, ಚಂದ್ರಕಲಾ ಬಸವರಾಜು, ಭಾಗಮ್ಮ ಸ್ವಾಮೀಗೌಡ, ರೂಪಾಕುಮಾರ್, ನಾಗೇಶ್, ಸಾಕಮ್ಮ ಮತ್ತಿತರರು ಅಭಿನಂದಿಸಿದರು.

ಕೊಡಗು ಮಳೆ ಹಾನಿ ಪ್ರದೇಶಕ್ಕೆ ಸಿಎಂ ಬೊಮ್ಮಾಯಿ ಭೇಟಿ



ಕೊಯನಾಡು ಕಾಳಜಿ ಕೇಂದ್ರದಲ್ಲಿ ಪರಿಹಾರದ ಚೆಕ್ ವಿತರಣೆ.

ಒಂದನೇ ಪುಟದಿಂದ

ಇದೇ ವೇಳೆ ಸಂತ್ರಸ್ತ ಗೋಪಾಲ ಕುಟುಂಬದವರಿಗೆ 95 ಸಾವಿರ ರೂ.ಗಳ ಪರಿಹಾರದ ಚೆಕ್ ವಿತರಿಸಿದರು.

ಅಧಿಕಾರಿಗಳ ಸಭೆ ನಡೆಸಿದ ಬಳಿಕ ಮದೆನಾಡು ಸಮೀಪದ ಕರ್ತೋಜಿಯಲ್ಲಿ ಹೆದ್ದಾರಿ ಹಾನಿ ಪ್ರದೇಶಕ್ಕೆ ತೆರಳಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹೆದ್ದಾರಿ ಉಬ್ಬಿಗೆ ಕಾರಣದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಕೊಯನಾಡು ಗಣಪತಿ ದೇವಾಲಯದಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೂ ಭೇಟಿ ನೀಡಿದ ಸಿಎಂ, ಸಂತ್ರಸ್ತರಿಗೆ ಸಾಂತ್ವಾನ ಹೇಳಿದರು. ಬಳಿಕ ಮನೆಹಾನಿಗೆ ಒಳಗಾದ ಕುಟುಂಬಕ್ಕೆ ಮುಖ್ಯಮಂತ್ರಿಗಳು ಪರಿಹಾರದ ಚೆಕ್ ವಿತರಿಸಿದರು.

ಮಡಿಕೇರಿಯ ಜಿಲ್ಲಾಡಳಿತ ಭವನದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಮುಖ್ಯಮಂತ್ರಿಗಳು ಮಳೆಯಿಂದ ಆಗಿರುವ ಹಾನಿಯ ಕುರಿತು ಮಾಹಿತಿ ಪಡೆದರು. ಎನ್.ಡಿ.ಆರ್.ಎಫ್ ರಕ್ಷಣಾ ತಂಡದ ಉಸ್ತುವಾರಿ ಜವಾಬ್ದಾರಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಹಿಸಬೇಕು. ಚೆಸ್ಕಾಂ ಸಂಬಂಧಿತ ಸಮಸ್ಯೆಗಳ ನಿವಾರಣೆಗೆ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಜವಾಬ್ದಾರಿ ಹೊರಬೇಕು ಎಂದು ಸ್ಪಷ್ಟ ಸೂಚನೆ ನೀಡಿದರು.

ರಸ್ತೆಗಳ ದುರಸ್ತಿ: ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿ.ಎಂ. ಬಸವರಾಜ ಬೊಮ್ಮಾಯಿ, ಕೇವಲ ಒಂದೆರಡು ವಾರಗಳ ಅಂತರದಲ್ಲಿ ಭಾರೀ ಮಳೆಯಾಗಿರುವುದು ಸಾಕಷ್ಟು ಆಸ್ತಿ ಪಾಸ್ತಿಗಳ ಹಾನಿಗೆ ಕಾರಣವಾಗಿದ್ದು, ಜನ ಜೀವನ ಅಸ್ತವ್ಯಸ್ತವಾಗಿದೆ. ಭಾರೀ ಮಳೆಯಿಂದ ಸಾಕಷ್ಟು ಮನೆಗಳಿಗೆ, ಜಿಲ್ಲೆಯ ಪ್ರಮುಖ ರಸ್ತೆಗಳಿಗೆ ಹಾನಿಯಾಗಿದೆ. ಕೆಲವೆಡೆ ನದಿಗಳಲ್ಲಿ ಸೇತುವೆಗಳಿಗೆ ಮರಗಳು ಸಿಲುಕಿಕೊಂಡು ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಮತ್ತೆ ಹಲವಷ್ಟು ಕಡೆಗಳಲ್ಲಿ ಗಾಳಿ ಮಳೆಗೆ ವಿದ್ಯುತ್ ಕಂಬಗಳು ಸಾಕಷ್ಟು ಪ್ರಮಾಣದಲ್ಲಿ ಹಾನಿಗೊಳಗಾಗಿದೆ. ಇವೆಲ್ಲವುಗಳ ದುರಸ್ತಿಗೆ ಆದೇಶ ಮಾಡಲಾಗಿದೆ ಎಂದು ಹೇಳಿದರು.

ಮನೆ ಕುಸಿತಕ್ಕೆ 5 ಲಕ್ಷ: ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.114ರಷ್ಟು ಹೆಚ್ಚಿನ ಮಳೆಯಾಗಿರುವುದರಿಂದ ಸಾಕಷ್ಟು ಹಾನಿ ಸಂಭವಿಸಿದೆ. ಲಭ್ಯ ಮಾಹಿತಿಯಂತೆ ಜಿಲ್ಲೆಯಲ್ಲಿ 2 ಮನೆಗಳು ಸಂಪೂರ್ಣ ಕುಸಿದಿದ್ದರೆ, 15 ಮನೆಗಳಿಗೆ ತೀವ್ರ ಹಾನಿ ಸಂಭವಿಸಿದೆ. 63 ಮನೆಗಳು ಭಾಗಶಃ ಹಾನಿಗೊಳಗಾಗಿವೆ. ಜನರ ಸಂಕಷ್ಟಗಳ ನಿವಾರಣೆಗಾಗಿ ಪೂರ್ಣ ಮನೆ ಕುಸಿದಿರುವ ಪ್ರಕರಣಗಳಲ್ಲಿ 5 ಲಕ್ಷ ರೂ. ಪರಿಹಾರ, ತೀವ್ರ ಹಾನಿಗೆ 3 ಲಕ್ಷ ರೂ. ಮತ್ತು ಭಾಗಶಃ ಹಾನಿಗೊಳಗಾದ ಮನೆಗಳಿಗೆ 50 ಸಾವಿರ ಪರಿಹಾರವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೆಂದು ತಿಳಿಸಿದರು.

ಶೀಘ್ರವೇ ಮನೆಗಳ ವಿತರಣೆ: 4 ವರ್ಷಗಳ ಹಿಂದೆ 2018 ಮತ್ತು 19ನೇ ಸಾಲಿನ ಮಹಾಮಳೆ ಮತ್ತು ಪ್ರಾಕೃತಿಕ ವಿಕೋಪಗಳಿಂದ ಮನೆಗಳನ್ನು ಕಳೆದುಕೊಂಡವರಿಗೆ ಇಲ್ಲಿಯವರೆಗೆ 830 ಮನೆಗಳನ್ನು ನೀಡಲಾಗಿದೆ. ಇನ್ಫೋಸಿಸ್ ಸಂಸ್ಥೆಯು ಸಂತ್ರಸ್ತರಿಗೆ ಮನೆಗಳನ್ನು ನಿರ್ಮಿಸುತ್ತಿದ್ದು, ಮುಂದಿನ ಒಂದೂವರೆ ತಿಂಗಳ ಒಳಗಾಗಿ ಒಟ್ಟು 195 ಮನೆಗಳನ್ನು ಸಂತ್ರಸ್ತರಿಗೆ ಒದಗಿಸಲು ಸೂಚನೆಗಳನ್ನು ನೀಡಲಾಗಿದೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

ಮುಖ್ಯಮಂತ್ರಿಗಳಿಗೆ ಬಿಡುವು ನೀಡಿದ ಮಳೆ: ಭಾರೀ ಮಳೆಯಿಂದ ತತ್ತರಿಸಿದ ಕೊಡಗು ಜಿಲ್ಲೆಯ ಸ್ಥಿತಿಗತಿ ಪರಿಶೀಲನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಂಗಳವಾರ ಮಡಿಕೇರಿಗೆ ಆಗಮಿಸಿದ್ದರು. ಈ ವೇಳೆ ಮಳೆ ಬಿಡುವು ನೀಡಿತು. ಆಗೊಮ್ಮೆ ಈಗೊಮ್ಮೆ ತುಂತುರು ಮಳೆ ಹನಿ ಅಷ್ಟೇ. ಇಂದು ಅಚ್ಚರಿ ಎಂದರೆ ಜಿಲ್ಲೆಯಲ್ಲಿ ಮಳೆಯೇ ಸುರಿದಿಲ್ಲವೇನೋ ಎಂಬಂತೆ ಭಾಸವಾಯಿತು.

ಕೊಡಗು ಜಿಲ್ಲೆಗೆ ವಿಶೇಷ ಅನುದಾನ

ಒಂದನೇ ಪುಟದಿಂದ

ಸುರಿದ ಧಾರಾಕಾರ ಮಳೆಯಿಂದ ಕೊಡಗು ಜಿಲ್ಲೆಯ ರಸ್ತೆ, ಸೇತುವೆ, ವಿದ್ಯುತ್ ಕಂಬಗಳು, ವಾಸದ ಮನೆಗಳು ಹೀಗೆ ಸಾಕಷ್ಟು ಹಾನಿಯಾಗಿದ್ದು, ಈ ಸಂಬಂಧ ಹಣ ಬಿಡುಗಡೆ ಮಾಡಲಾಗುವುದು ಎಂದರು.

ವಿದ್ಯುತ್ ಕಂಬ, ಪರಿವರ್ತಕ ಹಾನಿ ಸಂಬಂಧಿಸಿದಂತೆ 24 ಗಂಟೆಯೊಳಗೆ ಸರಿಪಡಿಸುವ ಕಾರ್ಯ ಆಗಬೇಕು ಎಂದು ಮುಖ್ಯಮಂತ್ರಿ ಅವರು ನಿರ್ದೇಶನ ನೀಡಿದರು. ಕೊಡಗು ಜಿಲ್ಲೆಯಲ್ಲಿ ಸ್ವಲ್ಪ ಮಳೆಯಾದರೂ ಸಹ ಹೆಚ್ಚಿನ ಸಮಸ್ಯೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಮನೆ ನಿರ್ಮಾಣ ಕಾರ್ಯವನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ಅಧಿಕಾರಿಗಳು ಇಚ್ಛಾಶಕ್ತಿಯಿಂದ ಕಾರ್ಯ ನಿರ್ವಹಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು. ಕೊಡಗು ಜಿಲ್ಲೆಗೆ ಪ್ರತ್ಯೇಕ ಮರಳು ನೀತಿ ಜಾರಿಗೊಳಿಸುವ ನಿಟ್ಟಿನಲ್ಲಿ ಸಮಗ್ರ ಅಧ್ಯಯನ ಮಾಡಿ ವರದಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟ ನಿರ್ದೇಶನ ನೀಡಿದರು.

ಯಾರು ಯಾವ ಕೆಲಸ ಮಾಡಬೇಕು ಎಂಬುದನ್ನು ನಿರ್ವಹಿಸುವುದು ಅತೀಮುಖ್ಯ. ಅನಾಹುತ ಆದ ನಂತರ ಕ್ರಮವಹಿಸುವುದಲ್ಲ. ಅನಾಹುತ ಸಂಭವಿಸುವುದಕ್ಕೂ ಮೊದಲು ಕ್ರಮವಹಿಸುವುದು ಅತೀ ಮುಖ್ಯ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ಮಾಡಿದರು.

ಕಂದಾಯ ಸಚಿವರಾದ ಆರ್.ಅಶೋಕ್ ಮಾತನಾಡಿ, ಮನೆಗಳ ಹಾನಿ ಸಂಬಂಧ ಪರಿಹಾರ ನೀಡಿದರಷ್ಟೇ ಸಾಲದು. ಮನೆ ನಿರ್ಮಾಣ ಮಾಡುತ್ತಿದ್ದಾರೆಯೇ ಎಂಬ ಬಗ್ಗೆ ಖಾತರಿ ಪಡಿಸಿಕೊಳ್ಳುವಂತೆ ಸೂಚಿಸಿದರು. ಮನೆಗಳ ನಿರ್ಮಾಣ ಸಂಬಂಧ ಹೆಚ್ಚಿನ ಗಮನಹರಿಸಬೇಕು. ಎಲ್ಲೆಲ್ಲಿ ಸಮಸ್ಯೆಗಳಿವೆ. ಅಲ್ಲಿ ತಕ್ಷಣವೇ ಸ್ಪಂದಿಸುವಂತಾಗಬೇಕು. ಸಮರೋಪಾದಿಯಲ್ಲಿ ಕೆಲಸ ಆಗಬೇಕು. ಸರ್ಕಾರಕ್ಕೆ ಒಳ್ಳೆಯ ಹೆಸರು ತರುವಂತಾಗಬೇಕು ಎಂದು ಅವರು ಹೇಳಿದರು.

ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಶಾಸಕರಾದ ಕೆ.ಜಿ.ಬೋಪಯ್ಯ ಮಾತನಾಡಿ, 2019 ಮತ್ತು 2020 ರಲ್ಲಿ ಪ್ರಾಕೃತಿಕ ವಿಕೋಪದಿಂದ ಕೊಡಗು ಜಿಲ್ಲೆ ತತ್ತರಿಸಿತ್ತು. ಆ ಸಂದರ್ಭದಲ್ಲಿ 500 ಕೋಟಿ ರೂ. ವಿಶೇಷ ಪ್ಯಾಕೇಜ್‌ನ್ನು ಪ್ರಕಟಿಸಲಾಗಿತ್ತು. ಸದ್ಯ 400 ಕೋಟಿ ಬಿಡುಗಡೆ ಮಾಡಬೇಕು ಎಂದು ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಸದ್ಯ ಈಗ ಎಲ್ಲೆಲ್ಲಿ ಹಾನಿಯಾಗಿದೆಯೋ ಅದಕ್ಕೆ ಹಣ ಬಿಡುಗಡೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಮನೆ ಹಾನಿಗೆ ಸಂಬಂಧಿಸಿದಂತೆ ಪ್ರಥಮ ಹಂತದಲ್ಲಿ ಪರಿಹಾರ ವಿತರಿಸಲಾಗಿದೆ. ಈಗಾಗಲೇ ಸಂಪೂರ್ಣ ಹಾನಿಯಾಗಿರುವ ಮನೆಗಳನ್ನು ಪುನರ್ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕ್ರಮವಹಿಸಬೇಕು. ಕಾಲ ಮಿತಿಯಲ್ಲಿ ಪರಿಹಾರದ ಹಣ ತಲುಪಬೇಕು ಎಂದರು. 2018ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪದಿಂದ ಸಂತ್ರಸ್ತರಾದವರಿಗೆ ಹಸ್ತಾಂತರಿಸಲಾಗಿರುವ ಮನೆಗಳ ಬಡಾವಣೆಯಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಲಾಗಿದೆಯೇ ಎಂಬುದರ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಶಾಸಕರಾದ ಎಂ.ಪಿ. ಅಪ್ಪಚ್ಚುರಂಜನ್ ಅವರು ಮಾತನಾಡಿ ಈಗಾಗಲೇ ಹಸ್ತಾಂತರಿಸಲಾಗಿರುವ ಮನೆಗಳ ಬಡಾವಣೆಯಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರು ಸಮಸ್ಯೆ ಇದೆ ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ಶಾಸಕರಾದ ಕೆ.ಜಿ.ಬೋಪಯ್ಯ ಅವರು ಮಾತನಾಡಿ ಕಳೆದ 15 ದಿನಗಳಿಂದ ಸುರಿದ ಧಾರಾಕಾರ ಮಳೆಗೆ ರಸ್ತೆ, ಸೇತುವೆಗಳು ಹಾನಿಯಾಗಿದ್ದು, ಇದನ್ನು ಸರಿಪಡಿಸಬೇಕು ಎಂದರು. ಕಳೆದ ವರ್ಷದ ಮಳೆ ಸಂದರ್ಭದಲ್ಲಿ ಮರದ ದಿಮ್ಮಿಗಳು ಭೂಮಿಯೊಳಗೆ ಹೂತುಹೋದವು, ಕೆಲವು ಮರದ ದಿಮ್ಮಿಗಳು ಸೇತುವೆಗೆ ಬಡಿದು ಹಾನಿಯಾಯಿತು. ಈ ಮರಗಳನ್ನು ತೆಗೆಯಲು ಅರಣ್ಯ ಇಲಾಖೆ ಅಧಿಕಾರಿಗಳು ಬಿಡಲಿಲ್ಲ. ಇದರಿಂದ ಸಂಕಷ್ಟ ಅನುಭವಿಸುವಂತಾಯಿತು ಎಂದು ದೂರಿದರು.



ಈ ಸಂದರ್ಭದಲ್ಲಿ ಮಾತನಾಡಿದ ಕಂದಾಯ ಸಚಿವರಾದ ಆರ್.ಅಶೋಕ್ ಅವರು ಮಳೆಗೆ ಕೊಚ್ಚಿ ಹೋದ ಮರಗಳನ್ನು ಸಂಬಂಧಪಟ್ಟವರಿಗೆ ನೀಡಿ, ಇಲ್ಲದಿದ್ದಲ್ಲಿ ಅರಣ್ಯ ಇಲಾಖೆಯ ದಾಸ್ತಾನು ಮಾಡಿ ಸಂಬಂಧಪಟ್ಟವರು ಕ್ಲೈಮು ಮಾಡುತ್ತಾರೆ. ಎಲ್ಲೆಲ್ಲಿ ಮರ ಬಿದ್ದಿದೆ ಅವುಗಳನ್ನು ಕೂಡಲೇ ತೆರವುಗೊಳಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಇಂಧನ ಸಚಿವ ವಿ.ಸುನೀಲ್ ಕುಮಾರ್ ಮಾತನಾಡಿ, ಯಾವ ಯಾವ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆಯೋ ಅಂತಹ ಗ್ರಾಮಗಳಿಗೆ ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮವಹಿಸುವಂತೆ ಸೆಸ್ಕ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಕೊಡಗು ಜಿಲ್ಲೆಯಲ್ಲಿ ಮುಂಗಾರು ಸಂಬಂಧ ಕೈಗೊಳ್ಳಲಾಗಿರುವ ಮುನ್ನೆಚ್ಚರಿಕಾ ಕ್ರಮಗಳು, ಕಳೆದ ವಾರ ಸುರಿದ ಧಾರಾಕಾರ ಮಳೆಗೆ ರಸ್ತೆ, ಸೇತುವೆ, ಮನೆ, ವಿದ್ಯುತ್ ಕಂಬಗಳು ಮತ್ತು ಪರಿವರ್ತಕಗಳ ಹಾನಿ ಹಾಗೂ ಪರಿಹಾರ ಕೇಂದ್ರಗಳ ಸ್ಥಾಪನೆ ಮತ್ತಿತರ ಬಗ್ಗೆ ಮಾಹಿತಿ ನೀಡಿದರು. ಕೊಡಗು ಜಿಲ್ಲೆಗೆ ಹೆಚ್ಚುವರಿಯಾಗಿ ಸೀಮೆಎಣ್ಣೆ ಒದಗಿಸುವಂತೆ ಮುಖ್ಯಮಂತ್ರಿ ಅವರಲ್ಲಿ ಜಿಲ್ಲಾಧಿಕಾರಿ ಅವರು ಮನವಿ ಮಾಡಿದರು. ಈ ಬಗ್ಗೆ ಕೇಂದ್ರ ಸರ್ಕಾರದ ಜತೆ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಬಿ.ಸಿ.ನಾಗೇಶ್, ಲೋಕೋಪಯೋಗಿ ಸಚಿವರಾದ ಸಿ.ಸಿ.ಪಾಟೀಲ, ಸಂಸದರಾದ ಪ್ರತಾಪ್ ಸಿಂಹ, ಶಾಸಕರಾದ ಸುಜಾ ಕುಶಾಲಪ್ಪ, ಕರ್ನಾಟಕ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷರಾದ ರವಿ ಕುಶಾಲಪ್ಪ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅನ್ಬು ಕುಮಾರ್, ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ ಜಗದೀಶ, ಜಿ.ಪಂ.ಸಿಇಒ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಮೇಶ್ ಹೊಳ್ಳ, ವಿವಿಧ ಇಲಾಖೆಯ ಕಾರ್ಯದರ್ಶಿಗಳು, ಅಧಿಕಾರಿಗಳು ಇತರರು ಇದ್ದರು.

ಭೂಕಂಪನ ಅಧ್ಯಯನ

ಅಧ್ಯಯನ ವರದಿ ನೀಡಿದ ಬಳಿಕ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರಕಾರ ಕ್ರಮ ಕೈಗೊಳ್ಳಲಿದೆ ಎಂದು ಅವರು ಹೇಳಿದರು.

ಡಿ.ಸಿ. ಖಾತೆಯಲ್ಲಿ ಹಣವಿದೆ: ಮುಂಗಾರಿನ ಅವಧಿಯಲ್ಲಿನ ವಿಕೋಪಗಳನ್ನು ಎದುರಿಸಿ, ಸಂತ್ರಸ್ತರಿಗೆ ನೆರವಾಗಲು ಜಿಲ್ಲಾಧಿಕಾರಿಗಳ ಬಳಿ ಅಗತ್ಯ ಹಣವಿದೆ. ಎಲ್ಲಾ ತಹಶೀಲ್ದಾರರ ಬಳಿ ತುರ್ತು ಸಂದರ್ಭಗಳಲ್ಲಿ ಬಳಸಲು 25 ಲಕ್ಷ ರೂ. ಹಣವಿದ್ದು, ಗ್ರಾಪಂಗಳಿಗೆ ತಲಾ 50 ಸಾವಿರ ರೂ.ಗಳನ್ನು ಒದಗಿಸಲಾಗಿದೆಯೆಂದು ಮಾಹಿತಿ ಒದಗಿಸಿದರು. ಮಳೆಯಿಂದ ಸಂಕಷ್ಟಕ್ಕೆ ಒಳಗಾಗಿ ಕಾಳಜಿ ಕೇಂದ್ರಗಳಲ್ಲಿ ನೆಲೆಸಿರುವಂತಹ ಕುಟುಂಬಗಳಿಗೆ ಮತ್ತು ಮುಂಜಾಗ್ರತಾ ಕ್ರಮವಾಗಿ ಬಂಧುಗಳ ಮನೆಗಳಿಗೆ ತೆರಳಿರುವ ಕುಟುಂಬಗಳಿಗೆ ಅಗತ್ಯ ಪಡಿತರ ವಿತರಣೆಗೂ ಸೂಚನೆ ನೀಡಲಾಗಿದೆ. ಕಾಳಜಿ ಕೇಂದ್ರಗಳಿಂದ ಮರಳಿ ಮನೆಗೆ ತೆರಳುವವರಿಗೂ ಅಗತ್ಯ ಪಡಿತರ ನೀಡಬೇಕೆಂದು ಸೂಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಹೂಳೆತ್ತಲು 40 ಕೋಟಿ: ಜಿಲ್ಲೆಯ ಕಾವೇರಿ ಮತ್ತು ಹಾರಂಗಿ ನದಿ ಪಾತ್ರದಲ್ಲಿ ಮರಳು ಮತ್ತು ಹೂಳು ತುಂಬಿದೆ. ಇದರಿಂದ ನೀರಿನ ಹರಿವಿಗೆ ತೊಡಕಾಗುತ್ತಿದ್ದು, ನೀರು ನದಿ ಪಾತ್ರದಿಂದ ಉಕ್ಕೇರುತ್ತಿದೆ. ಕೆಲವು ಕಡೆಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಬೇಕಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ನದಿಯಲ್ಲಿ ಹೂಳೆತ್ತಲು ಕಾವೇರಿ ನಿರಾವರಿ ನಿಗಮಕ್ಕೆ ಸೂಚಿಸಲಾಗಿದೆ. ಹೂಳೆತ್ತುವ ಕಾಮಗಾರಿಗೆ 40 ಕೋಟಿ ರೂ.ಗಳನ್ನು ಮಂಜೂರು ಮಾಡಿ, ಕಾಮಗಾರಿಗೆ ಕ್ರಮ ಕೈಗೊಳ್ಳಲಾಗಿದೆಯೆಂದು ಮಾಹಿತಿ ನೀಡಿದರು.

ನದಿಗಳಲ್ಲಿ ಬಿದ್ದಿರುವ ಮರದ ದಿಮ್ಮಿಗಳನ್ನು ಅರಣ್ಯ ಇಲಾಖೆ ತೆಗೆಯದಿರುವ ಬಗ್ಗೆ ದೂರುಗಳು ಕೇಳಿ ಬಂದಿವೆ. ನೀರಿನಲ್ಲಿ ಕೊಚ್ಚಿ ಬಂದ ಮರದ ದಿಮ್ಮಿಗಳಿಂದ ಸೇತುವೆಗಳಿಗೆ ಹಾನಿಯಾಗಿವೆ. ಹಾಗಾಗಿ ತಕ್ಷಣವೇ ಮರಗಳನ್ನು ತೆರವು ಮಾಡುವಂತೆ ಅರಣ್ಯ ಇಲಾಖೆಗೆ ಸೂಚಿಸಿರುವುದಾಗಿ ಸಿ.ಎಂ. ಹೇಳಿದರು. ಈ ಸಂದರ್ಭ ಕಂದಾಯ ಸಚಿವ ಆರ್. ಅಶೋಕ್, ಇಂಧನ ಸಚಿವ ಸುನೀಲ್ ಕುಮಾರ್, ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ್, ಶಾಸಕ ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ, ಪಶ್ಚಿಮ ಘಟ್ಟ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ ಉಪಸ್ಥಿತರಿದ್ದರು.

ಪ್ರವಾಹ ಪೀಡಿತ ಪ್ರದೇಶಕ್ಕೆ ಮಂತ್ರಿಗಳಿಂದ ನೆಪ ಮಾತ್ರದ ಭೇಟಿ



ಬೆಂಗಳೂರು: ಪ್ರವಾಹ ಪೀಡಿತ ಪ್ರದೇಶಗಳಿಗೆ ಮಂತ್ರಿಗಳು, ಶಾಸಕರು ಹಾಗೂ ನಾಯಕರು ನೆಪ ಮಾತ್ರಕ್ಕೆ ಭೇಟಿ ನೀಡುತ್ತಿದ್ದಾರೆಯೇ ಹೊರತು ಸಂಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡುವ ಉದ್ದೇಶದಿಂದಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪ ಮಾಡಿದ್ದಾರೆ.

ಸದಾಶಿವನಗರದ ತಮ್ಮ ನಿವಾಸದ ಬಳಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಡಿಕೆ ಶಿವಕುಮಾರ್, ಪ್ರವಾಹ ಪೀಡಿತ ಪ್ರದೇಶಗಳಿಗೆ ಹೋಗುವಂತೆ ಮುಖ್ಯಮಂತ್ರಿಗಳ ಬಳಿ ಮನವಿ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಯಾವುದೇ ಮಂತ್ರಿಗಳು ತಮ್ಮ ಜವಾಬ್ದಾರಿಗೆ ಅನುಗುಣವಾಗಿ ಕೆಲಸ ಮಾಡುತ್ತಿಲ್ಲ ಎಂದರು. ಕೊಡಗಿನ ಪರಿಸ್ಥಿತಿ ಶೋಚನೀಯವಾಗಿದೆ. ಯಾರೊಬ್ಬರಿಗೂ ಸರ್ಕಾರ ನೆರವು ನೀಡಿಲ್ಲ.ಅಧಿಕಾರಿಗಳು ಕೂಡಾ ಕೆಲಸ ಮಾಡಿಲ್ಲ. ನೆಪ ಮಾತ್ರಕ್ಕೆ ಬೆರಳೆಣಿಕೆ ಮನೆಗಳಿಗೆ ಭೇಟಿ ನೀಡುತ್ತಿದ್ದಾರೆ. ಜನರಿಗೆ ಸಹಾಯ ಮಾಡುವ ಯಾವುದೇ ಕೆಲಸವನ್ನು ಈ ಸರ್ಕಾರ ಮಾಡುತ್ತಿಲ್ಲ ಎಂದು ಅವರು ಹರಿಹಾಯ್ದರು.


ಇನ್ನು ಚಾಮರಾಜಪೇಟೆ ಈದ್ಗಾ ಮೈದಾನ ವಿವಾದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಈ ಹಿಂದಿನಿಂದ ಚಾಮರಾಜಪೇಟೆ ಮೈದಾನವನ್ನು ಯಾವ ರೀತಿ ಇತಿಹಾಸವಿದೆಯೋ ಅದೇ ರೀತಿ ಮುಂದುವರೆಸಬೇಕು. ಹೊಸದಾಗಿ ಬದಲಾವಣೆ ಮಾಡಿ ಜನರಲ್ಲಿ ಅನಗತ್ಯ ಗೊಂದಲ ಮೂಡಿಸುವ ಕೆಲಸ ಮಾಡಬಾರದು ಎಂದರು.

ಮಳೆ ನಿಲ್ಲಲು ಶೃಂಗೇರಿ ಜಗದ್ಗುರುಗಳ ಮೊರೆ ಹೋದ ಬಿಜೆಪಿ, ಕಾಂಗ್ರೆಸ್

ಚಿಕ್ಕಮಗಳೂರು: ರಾಜ್ಯದೆಲ್ಲೆಡೆ ಸುರಿಯುತ್ತಿರುವ ಅತಿವೃಷ್ಟಿಯ ಹಿನ್ನೆಲೆ ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಡಿ.ಎನ್ ಜೀವರಾಜ್ ಹಾಗೂ ಶಾಸಕ ಟಿ.ಡಿ ರಾಜೇಗೌಡ ಅವರು ಶೃಂಗೇರಿ ಜಗದ್ಗುರುಗಳ ಮೊರೆ ಹೋಗಿದ್ದಾರೆ.

ಶೃಂಗೇರಿ ಜಗದ್ಗುರು ಭಾರತೀ ತೀರ್ಥ ಸ್ವಾಮೀಜಿ ಬಳಿಗೆ ಕಾಂಗ್ರೆಸ್, ಬಿಜೆಪಿ ಪಕ್ಷದಿಂದ ಒಟ್ಟಾಗಿ ತೆರಳಿದ್ದು, ಶಾರದಾಂಬೆಗೆ ಪೂಜೆ ಸಲ್ಲಿಸಿ ಮಳೆ ನಿಲ್ಲುವಂತೆ ಪ್ರಾರ್ಥನೆ ನಡೆಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನಲ್ಲಿ ವಾಡಿಕೆಗಿಂತ ದುಪ್ಪಟ್ಟು ಮಳೆ ಸುರಿದ ಪರಿಣಾಮ ಇದೀಗ ಪ್ರವಾಹದ ಭೀತಿ ಎದುರಾಗಿದೆ. ಈ ಹಿನ್ನೆಲೆ ರಾಜಕಾರಣಿಗಳು ಕೊನೆಯದಾಗಿ ಮಳೆ ನಿಯಮಿತವಾಗಿ ಬೀಳುವಂತೆ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ.



ಮಡಿಕೇರಿ, ಜು.12– ಮಳೆಹಾನಿ ಹಾಗೂ ಪ್ರಕೃತಿ ವಿಕೋಪದಿಂದ ಸಂಭವಿಸಬಹುದಾದ ಅನಾಹುತಗಳ ಸಂದರ್ಭದಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿಗಳು ಕೂಡಲೇ ಘಟನೆ ನಡೆದ ಸ್ಥಳಗಳಿಗೆ ತೆರಳಿ ರಕ್ಷಣಾ ಕಾರ್ಯ ಕೈಗೊಳ್ಳುವಂತೆ ಹಾಗೂ ಇದರ ಮೇಲ್ವಿಚಾರಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ನಿರ್ವಹಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದರು.

ಮಳೆ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಅಧಿಕಾರಿಗಳ

ಕೊಡಗಲ್ಲಿ ನೆರೆ ಹಾನಿ ಪರಿಶೀಲಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಎಸ್ಪಿ ನೇತೃತ್ವದಲ್ಲಿ ಎನ್‌ಡಿಆರ್‌ಎಫ್ ಕಾರ್ಯ ನಿರ್ವಹಣೆ

ಸಭೆ ನಡೆಸಿ ಮಾತನಾಡುತ್ತಿದ್ದ ಅವರು, ಈಗಾಗಲೇ ಭೂಮಿ ಕಂಪಿಸಿರುವ ಪ್ರದೇಶಗಳಲ್ಲಿ ಗುರುತಿಸಿರುವ ಕೇಂದ್ರ ಬಿಂದುಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕು. ಹಾಗೂ ಕೇಂದ್ರ ಸರ್ಕಾರ ಪ್ರಾಕೃತಿಕ ವಿಕೋಪ ನಿರ್ವಹಣೆ ಸಂಬಂಧ ಬಿಡುಗಡೆ ಮಾಡಿರುವ 40 ಕೋಟಿ ರೂ. ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡುವಂತೆ ಪ್ರಾಕೃತಿಕ ವಿಕೋಪ ನಿರ್ವಹಣೆಯ ಆಯುಕ್ತರಾದ ಮನೋಜ್ ಅವರಿಗೆ ನಿರ್ದೇಶನ ನೀಡಿದರು.

ಗ್ರಾಪಂ ವ್ಯಾಪ್ತಿಗಳಲ್ಲಿ ವಿದ್ಯುತ್ ಸಮಸ್ಯೆಗಳು ಉಂಟಾದಲ್ಲಿ ಕೂಡಲೇ ಗ್ರಾಪಂ ಅಭಿವೃದ್ಧಿ ಅಧಿಕಾರಿ ಅವರು ಸೆಸ್ಕ್ ಕಚೇರಿಗೆ ಮಾಹಿತಿ ನೀಡಬೇಕು. ಹಾಗೂ 24 ಗಂಟೆಯೊಳಗೆ ವಿದ್ಯುತ್ ಸಂಪರ್ಕ ದೊರೆಯುವಂತಾಗಬೇಕು ಎಂದು ಮುಖ್ಯಮಂತ್ರಿಗಳು ಹೇಳಿದರು.

ಮಳೆ ಹಾನಿಯಿಂದ ನಿರಾಶ್ರಿತರಾದ ಕುಟುಂಬಗಳಿಗೆ ಹಾಗೂ ಬಡವರಿಗೆ ಹೆಚ್ಚಿನ ಆಹಾರ ಧಾನ್ಯಗಳನ್ನು ವಿತರಿಸಲು ಕ್ರಮವಹಿಸಬೇಕು. ಹಾಗೂ ಕಾಳಜಿ ಕೇಂದ್ರದಲ್ಲಿರುವ ಕುಟುಂಬಗಳಿಗೆ ಗುಣಮಟ್ಟದ ಆಹಾರ ಒದಗಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗು ಜಿಲ್ಲೆಯ ರಸ್ತೆ ಹಾನಿಗೆ ಹೆಚ್ಚಿನ ವ್ಯತ್ಯಾಸವಿದ್ದು, ಮಳೆ ಕಡಿಮೆಯಾದ ಕೂಡಲೇ ರಸ್ತೆ ದುರಸ್ತಿಯಾಗಬೇಕು. ರಸ್ತೆ ದುರಸ್ತಿ ಮಾಡಿಸಲು ಕ್ರಮವಹಿಸುವಂತೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಅವರಿಗೆ ನಿರ್ದೇಶನ ನೀಡಿದರು. ರಾಜ್ಯ ಹೆದ್ದಾರಿಗಳು ಮತ್ತು ಗ್ರಾಮೀಣ ಪ್ರದೇಶದ ರಸ್ತೆಗಳನ್ನು ದುರಸ್ತಿ ಪಡಿಸುವ ಸಂಬಂಧ ಸಂಪೂರ್ಣ ವರದಿ ಸಲ್ಲಿಸಿದ ಬಳಿಕ ಲೋಕೋಪಯೋಗಿ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಅಧಿಕಾರಿಗಳು ಇಂತಹ ಸಂದರ್ಭದಲ್ಲಿ 24x7 ಗಂಟೆ ಕೆಲಸ ನಿರ್ವಹಿಸಬೇಕು. ಕಾಳಜಿ ಕೇಂದ್ರಕ್ಕೆ ಬಂದು ನಂತರದಲ್ಲಿ ತಮ್ಮ ಮನೆಗಳಿಗೆ ಹಿಂತಿರುಗುವಾಗ ಅವರಿಗೆ ಆಹಾರ ಕಿಟ್ ಒದಗಿಸಲು ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಭೆಯಲ್ಲಿದ್ದ ಕಂದಾಯ ಸಚಿವ ಆರ್. ಅಶೋಕ್ ಸೂಚನೆ ನೀಡಿದರು. ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಶಾಸಕರಾದ ಕೆ.ಜಿ.ಬೋಪಯ್ಯ ಅವರು ಮಾತನಾಡಿ, ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಸೆಸ್ಕ್ ಸಿಬ್ಬಂದಿಗಳು ಕೂಡಲೇ ಸರಿಪಡಿಸುವಂತಾಗಬೇಕು ಎಂದರು.

ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್ ಅವರು ಮಾತನಾಡಿ, ಸೆಸ್ಕ್ ಇಲಾಖೆ ಸಿಬ್ಬಂದಿಗಳು ವಿದ್ಯುತ್ ಕಂಬಗಳನ್ನು ಲೋಡಿಂಗ್ ಹಾಗೂ ಅನ್ ಲೋಡಿಂಗ್ ಮಾಡಲು ಗ್ರಾಮದ ಜನರನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಜೂನ್ ಮಾಹೆಯಲ್ಲಿ ಶೇ.57 ರಷ್ಟು ಕಡಿಮೆ ಮಳೆಯಾಗಿತ್ತು, ಜುಲೈ ಮಾಹೆಯಲ್ಲಿ ವಾಡಿಕೆಯಂತೆ 319 ಮಿ.ಮೀ.ರಷ್ಟು ಮಳೆಯಾಗಬೇಕಿತ್ತು, ಆದರೆ 637 ಮಿ.ಮೀ ರಷ್ಟು ಹೆಚ್ಚು ಮಳೆಯಾಗಿದೆ. ಮಳೆಹಾನಿ ಮುನ್ನೆಚ್ಚರಿಕಾ ಕ್ರಮವಾಗಿ ಗ್ರಾ.ಪಂ. ಹಾಗೂ ತಾಲೂಕು ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ರಚನೆ ಮಾಡಿದ್ದು, ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾಹಿತಿ ನೀಡಿದರು.

ಪ್ರತೀ ಗ್ರಾಮ ಪಂಚಾಯಿತಿಗಳಿಗೆ 50 ಸಾವಿರ ಮತ್ತು ತಾಲೂಕುಗಳಿಗೆ 25 ಲಕ್ಷ ರೂ. ಪ್ರಾಕೃತಿಕ ವಿಕೋಪ ಎದುರಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಹಾಗೂ 24x7 ಸಹಾಯವಾಣಿ ತೆರೆಯಲಾಗಿದ್ದು, ವಿಪತ್ತು ನಿರ್ವಹಣಾ ಕೇಂದ್ರದಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಸಂಬಂಧಿಕರ ಮನೆಯಲ್ಲಿರುವ ಸಂತ್ರಸ್ತರಿಗೂ ಪಡಿತರ ವಿತರಿಸಿ

ಮಡಿಕೇರಿ, ಜು.12– ಜಿಲ್ಲೆಯಲ್ಲಿ ಅಪಾಯದಲ್ಲಿದ್ದ ಕೆಲವು ಮನೆಗಳನ್ನು ಸ್ಥಳಾಂತರಿಸಲಾಗಿದ್ದು, ಕೆಲವರು ಪರಿಹಾರ ಕೇಂದ್ರದಲ್ಲಿದ್ದಾರೆ. ಇನ್ನು ಕೆಲವರು ಸಂಬಂಧಿಕರ ಮನೆಗಳಲ್ಲಿದ್ದಾರೆ. ಸಂಬಂಧಿಕರ ಮನೆಗಳಲ್ಲಿರುವವರಿಗೂ ಕೂಡ ಅಕ್ಕಿ, ಎಣ್ಣೆ, ಬೇಳೆ ವಿತರಣೆಯಾಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

ಪರಿಹಾರ ಕೇಂದ್ರದಿಂದ ಮನೆಗೆ ತೆರಳುವ ಸಂದರ್ಭದಲ್ಲಿಯೂ ಅವರಿಗೆ ಪಡಿತರ ವಿತರಿಸುವಂತೆ ಸೂಚಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಟಾಸ್ಕ್ ಫೋರ್ಸ್ ಮಾಡಬೇಕು. ಕೂಡಲೇ ಅಧಿಕಾರಿಗಳು ಎಚ್ಚೆತ್ತು ಕೆಲಸ ಮಾಡಬೇಕು. ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದಂತೆ ಕಂಟ್ರೋಲ್ ರೂಂನ್ನು ಸ್ಥಾಪಿಸಲು ಆದೇಶಿಸಲಾಗಿದೆ. ಜಲ್ಲಾಧಿಕಾರಿ ಅವರ ಪಿಡಿ ಖಾತೆಯಲ್ಲಿ ಹೆಚ್ಚಿನ ಹಣ ಲಭ್ಯವಿದ್ದು, ಅಗತ್ಯ ಬಿದ್ದರೆ ಇನ್ನಷ್ಟು ಅನುದಾನ ಒದಗಿಸಲಾಗುವುದು ಎಂದರು. ಹೂಳು, ಮಣ್ಣು ತೆಗೆಯುವುದು ಹಾಗೂ ತಡೆಗೋಡೆ ನಿರ್ಮಾಣ ಕಾರ್ಯವನ್ನು ಇದು ಒಳಗೊಂಡಿದೆ. ಕಾವೇರಿ ನದಿಯಲ್ಲಿನ ಹೂಳು ತೆಗೆಯಲು ಕಾವೇರಿ ನೀರಾವರಿ ನಿಗಮಕ್ಕೆ ಸೂಚಿಸಲಾಗಿದೆ. ನೀರು ನಿಲ್ಲದಂತೆ ಮಾಡಲು ಕ್ರಮ ಕೈಗೊಳ್ಳಲು ಹಾಗೂ ಮರದ ದಿಮ್ಮಿಗಳನ್ನು ಕೂಡಲೇ ತೆರವು ಮಾಡುವಂತೆ ಅರಣ್ಯ ಇಲಾಖೆಗೆ ಸೂಚಿಸಲಾಗಿದೆ. ಕಳೆದ ಬಾರಿಯ ದಿಮ್ಮಿಗಳು ಹಾಗೆಯೇ ಉಳಿದು ಕೊಂಡಿರುವ ಬಗ್ಗೆ ದೂರುಗಳು ಬಂದಿದ್ದು, ನದಿ ಪಾತ್ರದಲ್ಲಿ ಯಾವುದೇ ಮರದ ದಿಮ್ಮಿಗಳನ್ನು ಇರಬಾರದು ಎಂದು ಸೂಚಿಸಲಾಗಿದೆ ಎಂದರು. ಇದೇ ವೇಳೆ ಸಂತ್ರಸ್ತರಿಗೆ ಮುಖ್ಯಮಂತ್ರಿ ಪರಿಹಾರದ ಚೆಕ್ ವಿತರಿಸಿದರು.



ಸಂತ್ರಸ್ತರಿಗೆ ಪರಿಹಾರದ ಚೆಕ್ ವಿತರಿಸುತ್ತಿರುವ ಸಿಎಂ ಬೊಮ್ಮಾಯಿ

ಮನೆ ಕಳೆದುಕೊಂಡ ಕುಟುಂಬಗಳಿಗೆ ಒಂದೂವರೆ ತಿಂಗಳಲ್ಲಿ ಮನೆ ವಿತರಿಸಿ

ಮಡಿಕೇರಿ, ಜು.12– ಕಳೆದ ಮೂರು ವರ್ಷಗಳ ಹಿಂದೆ ಮಹಾಮಳೆಯಿಂದ ತೊಂದರೆಗೆ ಸಿಲುಕಿದ್ದ ಹಾಗೂ ಮನೆ ಕಳೆದುಕೊಂಡಿದ್ದ ಕುಟುಂಬಗಳಿಗೆ ವಿತರಿಸಲು ಬಾಕಿ ಇರುವ ಮನೆಗಳನ್ನು ಒಂದೂವರೆ ತಿಂಗಳೊಳಗೆ ಪೂರ್ಣಗೊಳಿಸಿ ಹಸ್ತಾಂತರ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ಮಳೆಯಿಂದ ಉಂಟಾದ ಅನಾಹುತದ ಬಗ್ಗೆ ಮಂಗಳವಾರ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇನ್ಫೋಸಿಸ್ ವತಿಯಿಂದ ನಿರ್ಮಿಸುತ್ತಿರುವ ಮನೆಗಳನ್ನೂ ಸಹ ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಿ ಹಸ್ತಾಂತರ ಮಾಡಲಾಗುವುದು ಎಂದರು. ಗ್ರಾಮೀಣ ಹಾಗೂ ಮುಖ್ಯ ರಸ್ತೆಗಳಿಗೆ ಅಂದಾಜು ಪಟ್ಟಿ ಸಿದ್ಧಪಡಿಸಲು ಸೂಚಿಸಲಾಗಿದೆ. ಮೊದಲ ಹಂತದಲ್ಲಿ ತಕ್ಷಣ ದುರಸ್ತಿ ಮಾಡುವುದು, ಎರಡನೇ ಹಂತದಲ್ಲಿ ಹಾಳಾಗಿರುವ ರಸ್ತೆಗಳನ್ನು ಪುನರ್ ನಿರ್ಮಿಸಲಾಗುವುದು. 2018–19 ರಲ್ಲಿ ನಿರ್ಮಿಸಬೇಕಿದ್ದ ಮನೆಗಳ ಪೈಕಿ 835 ಮನೆಗಳನ್ನು ಈಗಾಗಲೇ ನಿರ್ಮಿಸಲಾಗಿದೆ. ಇದರಲ್ಲಿ ಕೆಲವು ಮನೆಗಳು ಮಾತ್ರ ಬಾಕಿ ಇದ್ದು, ಬಹುತೇಕ ಎಲ್ಲಾ ಮನೆಗಳಲ್ಲಿಯೂ ಜನ ವಾಸಿಸುತ್ತಿದ್ದಾರೆ ಎಂದರು.

ಕೊಡಗಿನಲ್ಲಿ ತಗ್ಗಿದ ಮಳೆ, ನದಿಗಳ ಪ್ರವಾಹ ಇಳಿಕೆ

ಭಾಗಮಂಡಲ–ಅಯ್ಯಂಗೇರಿ ರಸ್ತೆ ಸಂಚಾರ ಆರಂಭ

ಮಡಿಕೇರಿ, ಜು.12– ಕೊಡಗು ಜಿಲ್ಲೆಯಲ್ಲಿ ಮಂಗಳವಾರ ಮಳೆ ಇಳಿಕೆ ಕಂಡಿದೆ.

ಸೋಮವಾರಪೇಟೆ ತಾಲೂಕಿನ ಬೆಟ್ಟದಳ್ಳಿ ಗ್ರಾಮದಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ 146 ಮಿ.ಮೀ ಮಳೆ ದಾಖಲಾಗಿದೆ. ಮಡಿಕೇರಿ ತಾಲೂಕಿನ ಗಾಳಿಬೀಡು ವ್ಯಾಪ್ತಿಯಲ್ಲಿ 132 ಮಿ.ಮೀ ಹಾಗೂ ಮದೆನಾಡು ವ್ಯಾಪ್ತಿಯಲ್ಲಿ 126.5 ಮಿ.ಮೀ ಮಳೆ ಸುರಿದಿರುವುದಾಗಿ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ.

ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಮಳೆ ಕಡಿಮೆಯಾಗಿರುವ ಹಿನ್ನೆಲೆ ತ್ರಿವೇಣಿ ಸಂಗಮದಲ್ಲಿ ನೀರಿನ ಮಟ್ಟ ಇಳಿಕೆಯಾಗಿದೆ. ಕಳೆದ 7 ದಿನಗಳಿಂದ ಪ್ರವಾಹ ನೀರಿನಿಂದ ಬಂದ್ ಆಗಿದ್ದ ಭಾಗಮಂಡಲ–ಅಯ್ಯಂಗೇರಿ ರಸ್ತೆಯಲ್ಲಿ ವಾಹನ ಸಂಚಾರ ಮರು ಆರಂಭ ವಾಗಿದೆ. ಜಿಲ್ಲೆಯ ಬಹುತೇಕ ನದಿಗಳಲ್ಲಿ ಪ್ರವಾಹ ಮಟ್ಟ ಇಳಿಕೆಯಾಗಿದೆ.



ಸುಂಟಿಕೊಪ್ಪ ಹೋಬಳಿಯ ಕೊಡಗರಹಳ್ಳಿ ಗ್ರಾಮದ ಮನೆಯೊಂದರ ಒಂದು ಪಾರ್ಶ್ವದ ಗೋಡೆ ಕುಸಿತಕ್ಕೆ ಒಳಗಾಗಿದೆ. ಕೆದಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಲೇರಿ ಚಾಮುಂಡೇಶ್ವರಿ ಕಾಲೋನಿಯ ಅಂಬಿಕಾ ನಾರಾಯಣ ಮನೆಯ ಬಳಿ ಭೂ ಕುಸಿತವಾಗಿದ್ದು, ಕುಟುಂಬವನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ನಾಕೂರು ಶಿರಂಗಾಲ ವ್ಯಾಪ್ತಿಯಲ್ಲಿ ಮನೆಯ ಮೇಲೆ ಮರವೊಂದು ಬಿದ್ದ ಪರಿಣಾಮ ಮೇಲ್ಛಾವಣಿ, ಮನೆಯಲ್ಲಿದ್ದ ವಸ್ತುಗಳಿಗೆ ಹಾನಿಯಾಗಿದ್ದು ಸುಮಾರು 40 ಸಾವಿರ ರೂ. ನಷ್ಟ ಉಂಟಾಗಿದೆ.

ಕಳೆದ 24 ಗಂಟೆ ಅವಧಿಯಲ್ಲಿ ಮಳೆಯ ಕಾರಣದಿಂದ 1 ಭೂ ಕುಸಿತ ಪ್ರಕರಣ ದಾಖಲಾಗಿದೆ. ಜಿಲ್ಲೆಯ ವಿವಿಧ ಕಡೆಗಳಲ್ಲಿ ಅತೀವ ಶೀತ ಗಾಳಿಗೆ 6 ಜಾನುವಾರುಗಳು ಸಾವನ್ನಪ್ಪಿವೆ. ಮಳೆ ಗಾಳಿಯಿಂದ 2 ಮನೆಗಳಿಗೆ ತೀವ್ರ ಹಾನಿ ಯಾಗಿದ್ದು, 15 ಮನೆಗಳು ಭಾಗಶಃ ಹಾನಿಗೊಂಡಿವೆ. 13 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಚೆಸ್ಕಾಂ ಇಲಾಖೆಗೆ 1.30 ಲಕ್ಷರೂ. ಹಾನಿಯಾಗಿದೆ ಎಂದು ಜಿಲ್ಲಾ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ. ಸೋಮವಾರಪೇಟೆ ಅಬ್ಬೂರುಕಟ್ಟೆ ಬಳಿ 11 ಕೆ.ವಿ. ವಿದ್ಯುತ್ ಲೈನ್ ಮೇಲೆ ಮರ ಮುರಿದು ಬಿದ್ದು, ವಿದ್ಯುತ್ ಪೂರೈಕೆ ಸ್ಥಗಿತವಾದ ಬಗ್ಗೆ ವರದಿಯಾಗಿದೆ. ಮೇಕೇರಿಯಲ್ಲಿ ಕಾಫಿ ತೋಟದ ಒಳಗೆ ಮರ ಮುರಿದು ಬಿದ್ದು ವಿದ್ಯುತ್ ಲೈನ್‌ಗೆ ಹಾನಿ ಸಂಭವಿಸಿದೆ.

ಕೊಡವ ಸಮುದಾಯ ಅಭಿವೃದ್ಧಿಗೆ ಅನುದಾನಕ್ಕೆ ಮನವಿ

ಮಡಿಕೇರಿ, ಜು.12– ಕೊಡವ ಸಮಾಜ ಗಳ ಒಕ್ಕೂಟ ಹಾಗೂ ವಿವಿಧ ಕೊಡವ ಸಮಾಜಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಕೊಡವ ಸಮುದಾಯ ಅಭಿವೃದ್ಧಿಗೆ ಅನುದಾನ ಕಲ್ಪಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು ಕೊಡವ ಜನಾಂಗದ ಅಭಿವೃದ್ಧಿಯ ಕುರಿತು ಚಿಂತಿಸಿದ್ದು, ಸಮುದಾಯದ ಯುವ ಪ್ರತಿಭೆಗಳಿಗೆ ಉನ್ನತ ಮಟ್ಟದ ಶಿಕ್ಷಣ ಹಾಗೂ ಉದ್ಯೋಗದ ಬಗ್ಗೆ ಕಾಳಜಿ ವಹಿಸಿ, ಸೂಕ್ತ ಕ್ರಮ ಕೈಗೊಂಡು ಯೋಜನೆಗಳನ್ನು ರೂಪಿಸುವುದಾಗಿ ತಿಳಿಸಿದರು.

ಅಲ್ಲದೆ ಕೊಡಗಿನ ಕುಲದೇವಿ ಕಾವೇರಿ ಮಾತೆ ಹಾಗೂ ಕೊಡವ ಮಹಿಳೆಯರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡಿದ ಕಿಡಿಗೇಡಿ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಆರೋಪಿಗಳನ್ನು ಬಂಧಿಸಲು ಸೂಚಿಸುವುದಾಗಿ ತಿಳಿಸಿದರು. ಮಾಜಿ ಸಚಿವ ಮೇರಿಯಂಡ ನಾಣಯ್ಯ, ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ವಿಧಾನ ಪರಿಷತ್ತು ಸದಸ್ಯ ಸುಜಾ ಕುಶಾಲಪ್ಪ, ಫೆಡರೇಶನ್ ಆಫ್ ಕೊಡವ ಸಮಾಜದ ಅಧ್ಯಕ್ಷ ಕಲ್ಯಾಟಂಡ ವಿಷ್ಣುಕಾರ್ಯಪ್ಪ ಹಾಗೂ ಕೊಡವ ಸಮಾಜಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಜರಿದ್ದರು.



ಚಾಮರಾಜನಗರದಲ್ಲಿ ಇಂದು

ಶ್ರೀ ಚಾಮರಾಜೇಶ್ವರ ರಥೋತ್ಸವ

ಬೆಳಗ್ಗೆ 11ಕ್ಕೆ ಚಾಲನೆ, 5 ವರ್ಷದ ಬಳಿಕ ನೂತನ ರಥದಲ್ಲಿ ರಥೋತ್ಸವ



ಚಾಮರಾಜನಗರ ಜು.12(ಎಸ್‌ಎಸ್)– ನಗರದ ಇತಿಹಾಸ ಪ್ರಸಿದ್ಧ ಶ್ರೀ ಕೆಂಪನಂಜಾಂಬ ಸಮೇತ ಶ್ರೀ ಚಾಮರಾಜೇಶ್ವರ ಸ್ವಾಮಿಯವರ ರಥೋತ್ಸವ ನಾಳೆ (ಜು.13) ಬುಧವಾರ ಜರುಗಲಿದೆ.

ಅಂದು ಬೆಳಗ್ಗೆ 11 ಗಂಟೆಯಿಂದ 11.30ರ ಶುಭಘಳಿಗೆಯಲ್ಲಿ ಕನ್ಯಾಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ದೊರೆಯಲಿದೆ. ನಂತರ ರಥವು ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನವನ್ನು ಒಂದು ಸುತ್ತು ಬಂದು ಮಧ್ಯಾಹ್ನ ಸ್ವಸ್ಥಾನ ತಲುಪಲಿದೆ.

ನೂತನ ರಥದಲ್ಲಿ ಉತ್ಸವ: ದೇವಸ್ಥಾನದ ಮುಂದೆ ನಿಲ್ಲಿಸಿದ್ದ ದೊಡ್ಡರಥಕ್ಕೆ 2017ರ ಫೆ. 21ರ ಮಧ್ಯರಾತ್ರಿ ಕಿಡಿಗೇಡಿಯೊಬ್ಬ ಬೆಂಕಿ ಹಚ್ಚಿದ್ದ. ಸುಟ್ಟಿದ್ದ ತೇರಿನಲ್ಲಿ ರಥೋತ್ಸವ ನಡೆಸಬಾರದೆಂಬ ಕಾರಣಕ್ಕೆ 2017ರಿಂದ ರಥೋತ್ಸವ ನಡೆದಿರಲಿಲ್ಲ. ಈಗ ಸುಸಜ್ಜಿತವಾದ ನೂತನ ರಥ ನಿರ್ಮಾಣವಾಗಿರುವುದರಿಂದ 5 ವರ್ಷದ ಬಳಿಕ ಹೊಸ ರಥದಲ್ಲಿ ರಥೋತ್ಸವ ಬುಧವಾರ ಜರುಗಲಿದೆ. ಇದಕ್ಕಾಗಿ ಜಿಲ್ಲಾಡಳಿತ ಸಕಲ ಸಿದ್ಧತೆ ಪೂರ್ಣಗೊಳಿಸಿದೆ.

ನವದಂಪತಿಗಳ ಕಲರವ: ಶ್ರೀ ಚಾಮರಾಜೇಶ್ವರ ರಥೋತ್ಸವವು ಆಷಾಢ ಮಾಸದಲ್ಲಿ ನಡೆಯುವುದು ವಿಶೇಷ. ಈ ರಥೋತ್ಸವದಲ್ಲಿ ನವದಂಪತಿಗಳು ಪಾಲ್ಗೊಂಡು ರಥಕ್ಕೆ ಹಣ್ಣು–ದವನ ಎಸೆದು ತಮ್ಮ ಇಷ್ಟಾರ್ಥ ಈಡೇರಲಿ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಹೀಗಾಗಿ ಬುಧವಾರ ನಡೆಯುವ ರಥೋತ್ಸವದಲ್ಲಿ ನವದಂಪತಿಗಳ ಕಲರವ ಕಂಡು ಬರಲಿದೆ.

ಬಿಗಿ ಬಂದೋಬಸ್ತ್: 5 ವರ್ಷದ ಬಳಿಕ ರಥೋತ್ಸವ ನಡೆಯುತ್ತಿರುವುದರಿಂದ ಭಕ್ತರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಲಿದೆ. ಆಗಾಗಿ ಪೊಲೀಸ್ ಇಲಾಖೆ ಬಂದೋಬಸ್ತ್‌ಗೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

ವಿದ್ಯುತ್ ದೀಪಾಲಂಕಾರ: ರಥೋತ್ಸವ ಹಿನ್ನೆಲೆಯಲ್ಲಿ ಶ್ರೀ ಚಾಮರಾಜೇಶ್ವರ ದೇವಸ್ಥಾನ ಹಾಗೂ ದೇವಸ್ಥಾನದ ಮುಂಭಾಗವನ್ನು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿದೆ. ದೀಪಾಲಂಕಾರ ಆಕರ್ಷಕವಾಗಿದ್ದು, ಎಲ್ಲರ ಗಮನ ಸೆಳೆಯುತ್ತಿದೆ.

ಸಚಿವರ ಭೇಟಿ: ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಮಂಗಳವಾರ ಶ್ರೀ ಚಾಮರಾಜೇಶ್ವರ ದೇವಾಲಯಕ್ಕೆ ಭೇಟಿ ನೀಡಿ, ರಥೋತ್ಸವದ ಸಿದ್ಧತೆಗಳನ್ನು ಪರಿಶೀಲಿಸಿದರು. ನೂತನ ರಥವನ್ನು ವೀಕ್ಷಿಸಿದ ಸಚಿವರು, ಶ್ರೀ ಚಾಮರಾಜೇಶ್ವರ ದೇವರ ದರ್ಶನ ಪಡೆದರು. ನಂತರ ದೇವಾಲಯದ ಅಭಿವೃದ್ಧಿಗಾಗಿ ಬಾಕಿ ಇರುವ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜುಪಟ್ಟಿ ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಯ ಇಂಜಿನಿಯರಿಂಗ್‌ಗೆ ಸೂಚಿಸಿದರು.

ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಅಗತ್ಯ ಕ್ರಮ

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ



ಚಾಮರಾಜನಗರ, ಜು.12–ಜಿಲ್ಲೆಯಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳು ಒದಗಿಸುವ ಹಾಗೂ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿರುವ ಮೂಲ ಸೌಕರ್ಯ ಸೇರಿದಂತೆ ಇನ್ನಿತರ ಅಗತ್ಯ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸಲಾಗುವುದು ಎಂದು ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ತಿಳಿಸಿದರು.

ನಗರದ ಜಿಪಂ ಸಭಾಂಗಣದಲ್ಲಿಂದು ಕೈಗಾರಿಕಾ ನಿವೇಶನಗಳ ಅಭಿವೃದ್ಧಿ ಹೊಸ ಕೈಗಾರಿಕೆಗಳ ಸ್ಥಾಪನೆ ಹಾಗೂ ಉದ್ಯೋಗ ಸೃಷ್ಟಿ ಕುರಿತು ಹಿರಿಯ ಅಧಿಕಾರಿಗಳು, ಉದ್ಯಮ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಬದನಗುಪ್ಪೆ– ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶ ವಿಸ್ತಾರವಾಗಿದ್ದು, ಇಲ್ಲಿ ಕೈಗಾರಿಕಾ ಚಟುವಟಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯಬೇಕಿದೆ. ಕೈಗಾರಿಕೆಗಳು ಹೆಚ್ಚು ಸ್ಥಾಪನೆಯಾಗಿ ಜಿಲ್ಲೆಯ ಜನರಿಗೆ ಉದ್ಯೋಗ ಅವಕಾಶಗಳು ಲಭಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಥಮ ಆದ್ಯತೆ ನೀಡಲಾಗುತ್ತಿದೆ ಎಂದರು.

ಈಗಾಗಲೇ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ವಿದ್ಯುತ್, ನೀರು, ರಸ್ತೆ ಇನ್ನಿತರ ಸೌಲಭ್ಯ ಲಭ್ಯವಿದೆ. ಇವುಗಳನ್ನು ಮತ್ತಷ್ಟು ಸಮರ್ಪಕವಾಗಿ ಕಲ್ಪಿಸುವ ದಿಸೆಯಲ್ಲಿ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸಬೇಕು. ತಾಲೂಕಿನ ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಲಿದ್ದೇನೆ. ಚಾ.ನಗರದಲ್ಲಿಯೇ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಕಚೇರಿಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿ ಸಂಬಂಧ ಆ.5 ಅಥವಾ 6ರಂದು ಸಭೆ ನಿಗದಿ ಮಾಡಲಾಗುವುದು. ಈ ಸಭೆಯಲ್ಲಿ ಇನ್ನಷ್ಟು ವಿಸ್ತೃತವಾಗಿ ಕೈಗಾರಿಕೆಗಳ ಪ್ರಗತಿ ಕುರಿತು ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಗುಂಡ್ಲುಪೇಟೆ ಕೈಗಾರಿಕಾ ಪ್ರದೇಶಕ್ಕೆ ಅಗತ್ಯವಿರುವ ಸೌಕರ್ಯ ಒದಗಿಸಲು ಸೂಕ್ತ ಕ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಸಿ.ಎಸ್.ನಿರಂಜನ್ ಕುಮಾರ್, ಚಾಮರಾಜನಗರ ನಗರ ಸ್ಥಳೀಯ ಪ್ರಾಧಿಕಾರ ಅಧ್ಯಕ್ಷ ಜಯಸಿಂಹ, ಪರಿಷತ್ ಜಾತಿ, ಪರಿಷತ್ ಪಂಗಡಗಳ ಉದ್ಯಮಿ ಸಂಘಗಳ ಅಧ್ಯಕ್ಷ ಮಂಜುನಾಥ್ ಮಾತನಾಡಿದರು. ಡಿಸಿ ಚಾರುಲತಾ ಸೋಮಲ್, ಕೆಐಎಡಿಬಿ ಕಾರ್ಯನಿರ್ವಾಹಕ ನಿರ್ದೇಶಕ ಶಿವಶಂಕರ್, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಎಸ್ಪಿ ಟಿ.ಪಿ.ಶಿವಕುಮಾರ್, ಎಎಸ್ಪಿ ಕೆ.ಎಸ್.ಸುಂದರ್‌ರಾಜ್, ಎಡಿಸಿ ಎಸ್.ಕಾತ್ಯಾಯಿನಿದೇವಿ, ಕೆಐಎಡಿಬಿ ಇಇ ಮಹೇಶ್, ವಿಶೇಷ ಭೂಸ್ವಾಧೀನಾಧಿಕಾರಿ ಪ್ರಿಯದರ್ಶಿನಿ, ಕೆಎಸ್‌ಎಸ್ಐಡಿಸಿ ಹಿರಿಯ ಅಧಿಕಾರಿ ಆನಂದ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಪ್ರತಿನಿಧಿ ಪ್ರಭಾಕರ್, ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಶಂಕರನಾರಾಯಣ, ಉಪನಿರ್ದೇಶಕ ರಾಜೇಂದ್ರಪ್ರಸಾದ್, ಉದ್ಯಮಗಳ ಪ್ರತಿನಿಧಿಗಳು ಸಭೆಯಲ್ಲಿದ್ದರು.

ಬೃಹತ್ ಕೈಗಾರಿಕೆಗಳು ಶೀಘ್ರ ಆರಂಭ

ಚಾಮರಾಜನಗರ, ಜು.12–ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚು ಬಂಡವಾಳ ಹೂಡಿಕೆಯ ಹೆಸರಾಂತ ಬೃಹತ್ ಕೈಗಾರಿಕೆ ಉದ್ಯಮಗಳು ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿವೆ ಎಂದು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕ ನಿರ್ದೇಶಕ ಶಿವಶಂಕರ್ ತಿಳಿಸಿದರು.

ನಗರದ ಜಿಪಂ ಸಭಾಂಗಣದಲ್ಲಿ ಕೈಗಾರಿಕೆಗಳ ಸಂಬಂಧ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ತಾಲೂಕಿನ ಬದನಗುಪ್ಪೆ ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ 909 ಎಕರೆ ಕೈಗಾರಿಕಾ ಭೂಮಿ ಹಂಚಿಕೆಯಾಗಿದೆ. ಪ್ರಸಿದ್ಧ ಆದಿತ್ಯ ಬಿರ್ಲಾ ಗ್ರೂಪ್‌ಗೆ 102 ಎಕರೆ ಭೂಮಿ ನೀಡಲಾಗಿದ್ದು, ಈ ಕಂಪನಿ 1,800 ಕೋಟಿ ರೂ. ಬಂಡವಾಳ ಹೂಡಿ ಕೈಗಾರಿಕೆ ಉದ್ಯಮ ಸ್ಥಾಪಿಸುತ್ತಿದೆ. 2024ರ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲಿದೆ ಎಂದರು. ಕಲರ್ ಟೋನ್ ಕಂಪನಿ 300 ರಿಂದ 400 ಕೋಟಿ ರೂ. ಬಂಡವಾಳ ಹೂಡಿಕೆ ಮಾಡಿದ್ದು, ಮೊದಲ ಹಂತದ ಉತ್ಪಾದನೆಯು ಈ ನವೆಂಬರ್‌ನಲ್ಲಿ ಆರಂಭವಾಗಲಿದೆ. ಮತ್ತೊಂದು ಉದ್ಯಮವಾದ ಕೆಸಿಪಿ ಕಿಚನ್ ಅಪ್ಲೈನ್ಸ್ 30 ಎಕರೆ ಭೂಮಿ ಪಡೆದುಕೊಂಡಿದ್ದು, 300 ರಿಂದ 400 ಕೋಟಿ ರೂ. ವೆಚ್ಚದಲ್ಲಿ ನವೆಂಬರ್ ವೇಳೆಗೆ ಕಾರ್ಯಾರಂಭ ಮಾಡಲಿದೆ ಎಂದು ಶಿವಶಂಕರ್ ತಿಳಿಸಿದರು. ಇದಲ್ಲದೆ ಪ್ರಸಿದ್ಧ ಟಾಟಾ ಸೋಲಾರ್, ಲಾರ್ಸ್ ಬಯೋ ಟೆಕ್ ಕಂಪನಿಗಳು ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆಗಾಗಿ ಆಸಕ್ತಿ ತೋರಿದ್ದು ಭೂಮಿಯನ್ನು ಪರಿಶೀಲಿಸುತ್ತಿವೆ ಎಂದರು.

ಜು.16ಕ್ಕೆ ವಿದ್ಯುತ್ ಅದಾಲತ್

ಗುಂಡ್ಲುಪೇಟೆ, ಜು.12(ನೋಮ್.ಜೆ)– ತಾಲೂಕಿನ ಹಂಗಳ ಸೆಸ್ಕ್ ವಿಭಾಗಕ್ಕೆ ಬರುವ ಕಾಡಂಚಿನ ಮಂಗಲ ಗ್ರಾಮ ಮತ್ತು ತೆರಕಣಾಂಬಿ ಶಾಖಾ ವ್ಯಾಪ್ತಿಯ ಉಪಕಾರ ಕಾಲೋನಿಯಲ್ಲಿ ಜು.16ರಂದು ವಿದ್ಯುತ್ ಅದಾಲತ್ ನಡೆಯಲಿದೆ. ಮಂಗಲ ಗ್ರಾಮದಲ್ಲಿ ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಸೋಮರಾಜ್, ಉಪಕಾರ ಕಾಲೋನಿಯಲ್ಲಿ ಸೆಸ್ಕ್ ಎಇಇ ಸಿದ್ದರಾಜು ಅವರ ಅಧ್ಯಕ್ಷತೆಯಲ್ಲಿ ವಿದ್ಯುತ್ ಅದಾಲತ್ ಅಂದು ಬೆಳಗ್ಗೆ 11 ಗಂಟೆಗೆ ನಿಗದಿಯಾಗಿದೆ.


ಬೆಣ್ಣೆ ಅಲಂಕಾರದಲ್ಲಿ ಕಂಗೊಳಿಸಿದ ರುಕ್ಮಿಣಿ–ಪಾಂಡುರಂಗ



ಕೊಳ್ಳೇಗಾಲ, ಜು.12(ನಾಗೇಂದ್ರಸ್ವಾಮಿ)– ಪಟ್ಟಣದ ಬಸವೇಶ್ವರ ನಗರದಲ್ಲಿರುವ ರುಕ್ಮಿಣಿ ಪಾಂಡುರಂಗ ದೇಗುಲದಲ್ಲಿ ಆಷಾಢ ಪ್ರಥಮ ಏಕಾದಶಿ ಪ್ರಯುಕ್ತ ಬೆಣ್ಣೆ ಅಲಂಕಾರ, ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣಾ ಕಾರ್ಯಕ್ರಮ ಸೋಮವಾರ ಜರುಗಿತು.

ಭಾನುವಾರ ಸಂಜೆ ಸಹಾ ದೇಗುಲದಲ್ಲಿ ವಿಶೇಷ ಪೂಜಾ ಕೈಂಕರ್ಯವನ್ನು ವಿಧಿ, ವಿಧಾನಗಳೊಂದಿಗೆ ನೆರವೇರಿಸಲಾಯಿತು. ಬಳಿಕ ಸೋಮವಾರ ಬೆಳಗ್ಗಿನಿಂದಲೇ ವಿಶೇಷ ಪೂಜೆ ಬಳಿಕ ದೇವರಿಗೆ ಬೆಣ್ಣೆ ಅಲಂಕಾರ ಮಾಡಲಾಗಿತ್ತು. ಸಾವಿರಾರು ಭಕ್ತಾದಿಗಳು ಪಾಲ್ಗೊಂಡು ರುಕ್ಮಿಣಿ ಪಾಂಡುರಂಗನ ದರ್ಶನ ಪಡೆದು ಪುನೀತರಾದರು.

ಸಚಿವ ಶ್ರೀರಾಮುಲುರಿಂದ ವಿವಿಧೆಡೆ ವಸತಿ ಶಾಲೆ, ವಿದ್ಯಾರ್ಥಿನಿಲಯ ಕಟ್ಟಡ ಉದ್ಘಾಟನೆ



ಯಳಂದೂರು ತಾಲೂಕಿನ ವಡಗೆರೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಚಿವ ಶ್ರೀರಾಮುಲು ವಿದ್ಯಾರ್ಥಿನಿಯರ ಜೊತೆ ಸಂವಾದ ನಡೆಸಿದರು.

ಚಾಮರಾಜನಗರ, ಜು.12–ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನಗರ, ತಾಲೂಕು ಹಾಗೂ ಜಿಲ್ಲೆಯ ಕೊಳ್ಳೇಗಾಲ, ಯಳಂದೂರು ತಾಲೂಕುಗಳಲ್ಲಿ ನಿರ್ಮಾಣಗೊಂಡಿರುವ ವಸತಿ ಶಾಲೆ, ವಿದ್ಯಾರ್ಥಿ ನಿಲಯ ಕಟ್ಟಡಗಳನ್ನು ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಉದ್ಘಾಟಿಸಿದರು.

ಜಿಲ್ಲಾಡಳಿತ, ಜಿಪಂ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಹ ಯೋಗದಲ್ಲಿ ಹಮ್ಮಿಕೊಂಡಿದ್ದ ಆಯಾ ತಾಲೂಕಿನ ಗ್ರಾಮಗಳ ಕಾರ್ಯಕ್ರಮದಲ್ಲಿ ಸಚಿವರು ಉದ್ಘಾಟಿಸಿದರು.

ಕೊಳ್ಳೇಗಾಲ ತಾಲೂಕಿನ ಪಾಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಪಾಳ್ಯ ಗ್ರಾಮದ 8 ಎಕರೆ ಜಾಗದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಇಂದಿರಾಗಾಂಧಿ ವಸತಿ ಶಾಲೆಯ ಕಟ್ಟಡ ಲೋಕಾರ್ಪಣೆಗೊಳಿಸಿದ ಸಚಿವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತನಾಡಿ, ರಾಜ್ಯಾದ್ಯಂತ ವಸತಿ ಶಾಲೆಗಳಲ್ಲಿ 1 ಲಕ್ಷದ 54 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಉಜ್ವಲಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಸತಿ ಶಾಲೆಗಳಿಗೆ ಸೌಲಭ್ಯ ಒದಗಿಸುತ್ತಿವೆ ಎಂದರು.

ಪಾಳ್ಯದಲ್ಲಿ ಇಂದಿರಾಗಾಂಧಿ ವಸತಿ ಶಾಲೆ, ವಡಗೆರೆ ಹಾಗೂ ರಂಗಸಂದ್ರದಲ್ಲಿ ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆ, ಮಲ್ಲಯ್ಯನಪುರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನೂತನ ಕಟ್ಟಡಗಳಿಗೆ ಸೌಲಭ್ಯ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಯಳಂದೂರು ತಾಲೂಕಿನ ವಡಗೆರೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಕಟ್ಟಡ ಉದ್ಘಾಟಿಸಿದ ಸಚಿವರಿಗೆ ಶಾಸಕ ಆರ್. ನರೇಂದ್ರ ಅವರು, ವಸತಿ ಶಾಲೆಯಲ್ಲಿ ಹೆಚ್ಚುವರಿಯಾಗಿ 100 ವಿದ್ಯಾರ್ಥಿಗಳಿಗೆ ಅವಕಾಶ, ಶಾಲಾ ಆವರಣಕ್ಕೆ ಫೆನ್ಸಿಂಗ್, ಡಾಂಬರ್ ರಸ್ತೆ ನಿರ್ಮಾಣಕ್ಕೆ ಮನವಿ ಮಾಡಿದರು. ಶಾಸಕ ಎನ್.ಮಹೇಶ್, ತಮ್ಮ ಕ್ಷೇತ್ರದ ಸಂತೇಮರಹಳ್ಳಿ ಹಾಗೂ ಬಳಿಗಿರಿರಂಗನಬೆಟ್ಟದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಬಳಿಗಿರಿರಂಗನ ಬೆಟ್ಟ ಹಾಗೂ ಕುದೇರಿನಲ್ಲಿ ವಾಲ್ಮೀಕಿ ಭವನ, ಅದಿವಾಸಿ ಬುಡಕಟ್ಟು ಸಮುದಾಯ ಭವನಕ್ಕೆ ನೆರವು ನೀಡಲು ಮನವಿ ಮಾಡಿದರು.

ಚಾಮರಾಜನಗರ ತಾಲೂಕಿನ ರಂಗಸಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ಸಚಿವರು ಸಂವಾದ ನಡೆಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಈ ಭಾಗದಲ್ಲಿ ಪಿಯು ಕಾಲೇಜುಗಳಿಗೆ ಬೇಡಿಕೆ ಇದ್ದು, ಬಳಿಕ ಸಚಿವರು ಬಳಿಗಿರಿರಂಗನಬೆಟ್ಟದ ಯರಕನಗದ್ದೆ ಪೋಡಿನ ನಿವಾಸಿಗಳಿಗೆ ಸೌಲಭ್ಯ ವಿತರಿಸಿದರು. ಮಲ್ಲಯ್ಯನಪುರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಚಾಮರಾಜನಗರದಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವನ್ನು ಸಚಿವರು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಜಿಪಂ ಮಾಜಿ ಅಧ್ಯಕ್ಷ ಶಿವಮ್ಮಕೃಷ್ಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಪಿ.ಎಸ್.ಕಾಂತರಾಜು, ಎಸಿ ಗೀತಾ ಹುಡೇದ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ಇತರೆ ಆಯಾ ಭಾಗದ ಜನಪ್ರತಿನಿಧಿಗಳು, ಮುಖಂಡರಿದ್ದರು.

'ಸಮಗ್ರ ಕೃಷಿ ಅಭಿಯಾನ'ಕ್ಕೆ ಚಾಲನೆ


ಹನೂರು, ಜು.12(ಸೋಮು)– ಮಣ್ಣಿನ ಗುಣಲಕ್ಷಣಗಳನ್ನು ಅರಿತು ಬೇಸಾಯವನ್ನು ಮಾಡಬೇಕು. ಜೊತೆಗೆ ರಸಗೊಬ್ಬರ ಮತ್ತು ಔಷಧಗಳನ್ನು ಅಗತ್ಯ ಪ್ರಮಾಣದಲ್ಲಿ ಸಿಂಪಡಿಸುವುದರ ಮೂಲಕ ಉತ್ತಮ ಇಳುವರಿ ಪಡೆಯಬಹುದು ಎಂದು ಶಾಸಕ ಆರ್. ನರೇಂದ್ರ ಸಲಹೆ ನೀಡಿದರು.

ತಾಲೂಕಿನ ಲೊಕ್ಕನಹಳ್ಳಿ ರೈತ ಸಂಪರ್ಕ ಕೇಂದ್ರದಲ್ಲಿ ಏರ್ಪಡಿಸಿದ್ದ 2022–23ನೇ ಸಾಲಿನ ಸಮಗ್ರ ಕೃಷಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಹನೂರು ತಾಲೂಕಿನ ಅಜ್ಜಿಪುರ ಭಾಗದಲ್ಲಿ ಈ ಹಿಂದೆ ಒಂದೇ ಮಾದರಿಯ ಬೆಳೆಗಳನ್ನು ಬೆಳೆಯುತ್ತಿರುವುದರಿಂದ ಬೆಳೆ ಕುಂಠಿತವಾಗಿ ರೋಗ ತಗುಲುತ್ತಿತ್ತು. ಇದನ್ನು ವೈಜ್ಞಾನಿಕವಾಗಿ ಪತ್ತೆಹಚ್ಚಿ ಪರಿಹಾರ ಹುಡುಕಿದ ನಂತರ ಸಮಸ್ಯೆ ಬಗೆಹರಿದಿದೆ. ರೈತರು ಒಂದೇ ಭೂಮಿಯಲ್ಲಿ ಪದೇಪದೆ ಒಂದೇ ಮಾದರಿಯ ಬೆಳೆ ಬೆಳೆಯದೆ ಮಿಶ್ರ ಬೆಳೆಗಳನ್ನು ಬೆಳೆಯುವ ಮೂಲಕ ಅಧಿಕ ಇಳುವರಿಯನ್ನು ಪಡೆಯಬೇಕು ಎಂದರು.

ಜಿಲ್ಲೆಯಲ್ಲಿ ರೈತರ ಸೌಲಭ್ಯವಿದ್ದು, ನಮ್ಮ ಜಿಲ್ಲೆ ಪ್ರಶಸ್ತಿಯಾಗಿ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳನ್ನು ಸರಬರಾಜು ಮಾಡುವ ಮೂಲಕ ರೈತರಿಗೆ ನೆರವಾಗುತ್ತಿದ್ದೇವೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಸಹಾಯಕ ಕೃಷಿ ನಿರ್ದೇಶಕ ಸುಂದ್ರಮ್ಮ, ಲೊಕ್ಕನಹಳ್ಳಿ ಕೃಷಿ ಕೇಂದ್ರದ ಅಧಿಕಾರಿ ವೆಂಕಟನಾಯಕ, ಪಪಂ ಉಪಾಧ್ಯಕ್ಷ ಗಿರೀಶ್ ಕುಮಾರ್, ಕೃಷಿ ತಾಂತ್ರಿಕ ಅಧಿಕಾರಿ ಉಷಾದೇವಿ, ಕೃಷಿ ಯಂತ್ರೋಪಕರಣ ಕೇಂದ್ರದ ವ್ಯವಸ್ಥಾಪಕ ಚಂದ್ರಶೇಖರ್, ಲೊಕ್ಕನಹಳ್ಳಿ ಕೃಷಿಯಂತ್ರಧಾರೆ ಕೇಂದ್ರದ ವ್ಯವಸ್ಥಾಪಕ ಪ್ರಜ್ವಲ್, ಸಿಬ್ಬಂದಿ ಚೇತನ್, ರೈತರಿದ್ದರು.



ಜು.15ಕ್ಕೆ 'ಕಾವ್ಯಗಳಲ್ಲಿ ಒಡೆಯರು' ಕೃತಿ ಬಿಡುಗಡೆ



ಮೈಸೂರು, ಜು.12- ಹಿರಿಯ ಪತ್ರಕರ್ತ ಗೌರಿ ಸತ್ಯ ಅವರು ರಚಿಸಿರುವ 'ಕಾವ್ಯಗಳಲ್ಲಿ ಒಡೆಯರು' ಜು.15ರಂದು ಬಿಡುಗಡೆಯಾಗಲಿದೆ.

ಭಾರತಿ ಪ್ರಕಾಶನ ಹಾಗೂ ಪರಂಪರೆ ಮೈಸೂರು ಸಂಯುಕ್ತಾಶ್ರಯದಲ್ಲಿ ಅಂದು ಸಂಜೆ 6ಕ್ಕೆ ಜೆಎಲ್‌ಬಿ ರಸ್ತೆಯ ಶ್ರೀ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮೈಸೂರು ರಾಜವಂಶಸ್ಥರಾದ ಶ್ರೀ ರಾಜಚಂದ್ರ ಅವರು ಕೃತಿ ಬಿಡುಗಡೆ ಮಾಡಲಿದ್ದಾರೆ. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ, ಶ್ರೀಮತಿ ಇಂದ್ರಾಕ್ಷಿ ದೇವಿ, ಭಾರತಿ ಪ್ರಕಾಶನದ ಎ.ಎನ್.ಶ್ರೀನಿವಾಸ್, ಸಾಹಿತಿ ಗೌರಿ ಸತ್ಯ ಮತ್ತಿತರರು ಭಾಗವಹಿಸಲಿದ್ದಾರೆ.

ಪ್ರತಿ ವಾರ್ಡ್‌ಗೆ ತಲಾ 50 ಲಕ್ಷ ಮೇಯರ್ ಗ್ರಾಂಟ್ ಬಿಡುಗಡೆ

ದೊಡ್ಡ ಗಡಿಯಾರ ದುರಸ್ತಿಗೆ ಪುರಾತತ್ವ ಇಲಾಖೆಗೆ 34 ಲಕ್ಷ ಬಿಡುಗಡೆ



ಮೈಸೂರು,ಜು.12(ಎಂಟಿವೈ)- ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 65 ವಾರ್ಡ್‌ಗಳಲ್ಲಿ ಅಭ್ಯುದಯ ಮೇರೆಗೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯ ಕಲ್ಪಿಸಲು ಮೇಯರ್ ಅನುದಾನದಿಂದ ಪ್ರತಿ ವಾರ್ಡ್‌ಗೆ ತಲಾ 50 ಲಕ್ಷ ರೂ. ಬಿಡುಗಡೆ ಮಾಡಿರುವುದಾಗಿ ಮೇಯರ್ ಸುನಂದಾ ಪಾಲನೇತ್ರ ತಿಳಿಸಿದ್ದಾರೆ.

ಪ್ರತಿವರ್ಷ ಮೇಯರ್‌ಗೆ ನೀಡುವ ಜನರಲ್ ಗ್ರಾಂಟ್‌ನಲ್ಲಿ ಎಲ್ಲಾ ವಾರ್ಡ್‌ಗಳ ಅಭಿವೃದ್ಧಿಗೆ ಅನುದಾನ ಹಂಚಿಕೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ನನ್ನ ಅವಧಿಯ ಮೇಯರ್ ಅನುದಾನವನ್ನು 65 ವಾರ್ಡ್‌ಗಳಿಗೂ ಹಂಚಿಕೆ ಮಾಡಲಾಗಿದೆ. ಈ ಅನುದಾನದಲ್ಲಿ ಪಾಲಿಕೆ ಸದಸ್ಯರ ವಿವೇಚನೆಯೊಂದಿಗೆ ವಿವಿಧ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು. ರಸ್ತೆ ದುರಸ್ತಿ, ಬೀದಿ ದೀಪ, ಒಳಚರಂಡಿಯಂತಹ ಸಮಸ್ಯೆಗಳಿಗೆ ಈ ಅನುದಾನ ಬಳಕೆ ಮಾಡಿಕೊಳ್ಳಬಹುದು. ರಾಜ್ಯ ಸರ್ಕಾರ ಮೀಸಲಾತಿ ಪ್ರಕಟಿಸಿದ ನಂತರ ಮೇಯರ್ ಚುನಾವಣೆ ನಡೆಯಲಿದೆ. ಅದಕ್ಕಾಗಿ ಸರ್ಕಾರ ಸಿದ್ಧತೆಯಲ್ಲಿ ತೊಡಗಿದೆ ಎಂದರು. ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡ ಕೆಡವಿ ಹೊಸದಾಗಿ ನಿರ್ಮಾಣ ಮಾಡಲು ಪಾರಂಪರಿಕ ತಜ್ಞರ ಸಮಿತಿ ಹೈಕೋರ್ಟ್‌ಗೆ ವರದಿ ನೀಡಿದೆ. ಹೈಕೋರ್ಟ್ ನೀಡುವ ತೀರ್ಪಿನ ಅನುಸಾರ ಕ್ರಮ ತೆಗೆದುಕೊಳ್ಳಲಾಗುವುದು. ದೊಡ್ಡ ಗಡಿಯಾರ ದುರಸ್ತಿಗೆ ಪುರಾತತ್ವ ಇಲಾಖೆಗೆ ಪಾಲಿಕೆಯಿಂದ 34 ಲಕ್ಷ ಬಿಡುಗಡೆ ಮಾಡಲು ಆಡಳಿತಾತ್ಮಕ ಒಪ್ಪಿಗೆ ನೀಡಲಾಗಿದೆ ಎಂದರು.

ಒಂದನೇ ಪುಟದಿಂದ

ಆರು ತಿಂಗಳು 'ಬಡ್ಡಿ ನಿಶ್ಚಲತೆ'

ಗ್ರಾಹಕರು ಬಳಸಿಕೊಳ್ಳಬೇಕು ಎಂದು ಕೋರಿದರು. ನಗರಪಾಲಿಕೆಗೆ ಆರ್ಥಿಕ ಸಂಪನ್ಮೂಲ ಕ್ರೋಢೀಕರಣ ಮಾಡುವ ಹಿತದೃಷ್ಟಿಯಿಂದ ನೀರಿನ ಶುಲ್ಕ ಬಾಕಿ ಉಳಿಸಿಕೊಂಡಿರುವ ಬಳಕೆದಾರರು ಒಂದೇ ಬಾರಿ ಅಸಲು ಮೊತ್ತವನ್ನು ಸಂಪೂರ್ಣ ಪಾವತಿಸಿದಲ್ಲಿ ಅಂತಹ ಬಳಕೆದಾರರ ಬಡ್ಡಿಯನ್ನು ನಿಶ್ಚಲಗೊಳಿಸಲಾಗುವುದು. ಒಂದು ವೇಳೆ ಗ್ರಾಹಕರು ಪಾಲಿಕೆಗೆ ಬಾಕಿ ಇರುವ ಅಸಲು ಮೊತ್ತವನ್ನು ಪಾವತಿಸದಿದ್ದರೆ ಬಡ್ಡಿ ಬೆಳೆಯುತ್ತಲೇ ಇರುತ್ತದೆ. ಈ ಯೋಜನೆ ಗೃಹ ಬಳಕೆದಾರರಿಗೆ ಮಾತ್ರ ಅನ್ವಯಿಸುತ್ತದೆ ಎಂದರು.

ನೀರಿನ ಶುಲ್ಕವನ್ನು ಪಾಲಿಕೆಯ ವಲಯ ಕಚೇರಿಯ ನಗದು ಕೇಂದ್ರಗಳಲ್ಲಿ ಪಾವತಿಸಿಕೊಳ್ಳಲಾಗುತ್ತಿದ್ದು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ರೆವಿನ್ಯೂ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆ. ಈ ವ್ಯವಸ್ಥೆಯಲ್ಲಿ ಬಳಕೆದಾರರು ನೀರಿನ ಶುಲ್ಕವನ್ನು ಪಾಲಿಕೆಯ ಸಿಬ್ಬಂದಿಗೆ ಮನೆ ಬಾಗಿಲಲ್ಲೇ ಪಾವತಿಸಿ ಪ್ರಿಂಟೆಡ್ ರಶೀದಿ ಪಡೆಯುವಂತೆ ಸಲಹೆ ನೀಡಿದರು.

ಇದೇ ವೇಳೆ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 24 ಸಾವಿರ ಮಂದಿ ನಿಯಮಬಾಹಿರವಾಗಿ ಕುಡಿಯುವ ನೀರಿನ ಸಂಪರ್ಕ ಹೊಂದಿದ್ದಾರೆ. ಅಲ್ಲದೆ, 26 ಸಾವಿರ ನೀರಿನ ಸಂಪರ್ಕದ ಮೀಟರ್‌ಗಳು ಕೆಟ್ಟು ಹೋಗಿವೆ. ದೋಷಪೂರಿತ ಮೀಟರ್ ಹೊಂದಿರುವವರಿಗೆ ನೋಟಿಸ್ ನೀಡಲಾಗಿದ್ದರೂ ದುರಸ್ತಿ ಮಾಡಿಸಿಕೊಂಡಿಲ್ಲ. ಇಂತಹವರಿಗೆ ಮೂರು ಪಟ್ಟು ಶುಲ್ಕ ವಿಧಿಸಲಾಗುತ್ತದೆ. ಬಿಲ್ ಬಾಕಿ ಉಳಿಸಿಕೊಂಡಿರುವವರ, ಅನಧಿಕೃತ ಸಂಪರ್ಕ ಪಡೆದಿರುವವರ ಮನೆಯ ಸಂಪರ್ಕ ಕಡಿತಗೊಳಿಸಲಾಗುತ್ತದೆ. ಇದರಿಂದ ಪ್ರತಿ ತಿಂಗಳು 2 ಸಾವಿರ ಮಂದಿ ಹೊಸದಾಗಿ ನೀರಿನ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸುತ್ತಿದ್ದಾರೆ. ಕಳೆದ ಮೂರು ತಿಂಗಳಿಂದ 7500 ಮನೆಗಳಿಗೆ ಹೊಸದಾಗಿ ನೀರಿನ ಸಂಪರ್ಕ ನೀಡಲಾಗಿದೆ ಎಂದರು.

ಈಗಾಗಲೇ ಪಾಲಿಕೆಯಿಂದ ನಗರದ 65 ವಾರ್ಡ್‌ಗಳಲ್ಲೂ ತಿಂಗಳಿಗೆ 2 ಸಾವಿರದಂತೆ ಈವರೆಗೆ 34 ಸಾವಿರ ಹೊಸ ಮೀಟರ್ ಅಳವಡಿಸಲಾಗಿದೆ. ಪಾಲಿಕೆಯಿಂದ ಇಂತಹದ್ದೇ ಮೀಟರ್ ಹಾಕುವಂತೆ ನಿರ್ದೇಶನ ನೀಡುವುದಿಲ್ಲ. ಗ್ರಾಹಕರು ಐಎಸ್‌ಐ ಮಾರ್ಕ್ ಇರುವ ಮೀಟರ್‌ಗಳನ್ನು ಖರೀದಿಸಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸೂಪರಿಂಟೆಂಡೆಂಟ್ 'ಇಂಜಿನಿಯರ್ ಮಹೇಶ್, ವಾಣಿ ವಿಲಾಸ ನೀರು ಸರಬರಾಜು ಮಂಡಳಿಯ ಇಇ ಸಿರಾಜ್ ಇದ್ದರು.

ಅಚ್ಚುಕಟ್ಟು ಪ್ರದೇಶಕ್ಕೆ ನೀರು ಬಿಡುಗಡೆ

ಆಗಸ್ಟ್ 15ರಿಂದ ಕಟ್ಟು ಪದ್ಧತಿ(20 ದಿನ ಆನ್ ಮತ್ತು 10 ದಿನ ಆಫ್)ಯಲ್ಲಿ ನೀರು ಹರಿಸಲಾಗುವುದು ಎಂದು ತಿಳಿಸಿದರು. ಕಬಿನಿ ಜಲಾಶಯದಲ್ಲಿ 1,08,060, ಹುಲ್ಲಹಳ್ಳಿ ಅಣೆಕಟ್ಟು ನಾಲೆ ಭಾಗದಲ್ಲಿ 14,309 ಎಕರೆ ಪ್ರದೇಶ ಸೇರಿದಂತೆ 1,22,369 ಎಕರೆ ಪ್ರದೇಶವಿದೆ. ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ 129ಕ್ಕೂ ಹೆಚ್ಚು ಕೆರೆಗಳಿವೆ. ಬಾರ್ಡರ್‌ನಲ್ಲಿರುವ ಕೆರೆಗಳು ಭರ್ತಿಯಾಗುವಂತೆ ನೋಡಿಕೊಳ್ಳಲಾಗುವುದು. ಕಳೆದ ವರ್ಷವೂ ಕಡೆ ಭಾಗದ ಕೆರೆಗಳಿಗೂ ನೀರು ಹರಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ಜು.12ರ ಅಂಕಿ-ಅಂಶದಂತೆ ಜಲಾಶಯದ ನೀರಿನ ಮಟ್ಟ 2282.51 ಅಡಿಗಳಷ್ಟಿದ್ದು, 8.74 ಟಿಎಂಸಿ ನೀರಿನ ಸಂಗ್ರಹಣೆ ಇದೆ. 34 ಸಾವಿರ ಕ್ಯೂಸೆಕ್ ಒಳ ಹರಿವಿದ್ದು, 35,333 ಕ್ಯೂಸೆಕ್ಸ್ ಹೊರ ಹರಿವಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಬಿತ್ತನೆ ಬೀಜಗಳ ಕೊರತೆಯಿಲ್ಲ: ಬೆಳೆಗಳಿಗೆ ಅಗತ್ಯ ನೀರು ಪೂರೈಕೆ ಜೊತೆಗೆ ಬೆಳೆಗಳಿಗೆ ಬೇಕಾದ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ಕೊರತೆಯಿಲ್ಲ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಅದರಂತೆ ಬೆಳೆಗಳಿಗೆ ಬೇಕಾದಷ್ಟು ನೀರಿನ ಪೂರೈಕೆಗೆ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಶಾಸಕರಾದ ಅಶ್ವಿನ್ ಕುಮಾರ್, ಹರ್ಷವರ್ಧನ್, ಮೈಸೂರು ಡಿಸಿ ಡಾ.ಬಗಾದಿ ಗೌತಮ್, ಜಿಪಂ ಸಿಇಒ ಪೂರ್ಣಿಮಾ, ಚಾಮರಾಜನಗರ ಡಿಸಿ ಚಾರುಲತಾ ಸೋಮಲ್, ಚಾ.ನಗರ ಜಿಪಂ ಸಿಇಒ ಗಾಯತ್ರಿ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

ನಾಮನಿರ್ದೇಶನ ರದ್ದು

ಮಹಿಳಾ ಆಯೋಗದ ಆರ್.ಪ್ರಮಿಳಾ ನಾಯ್ಡು, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ಕೃಷಿ ಬೆಲೆ ಆಯೋಗದ ಹನುಮನಗೌಡ ಬೆಳಗುರ್ಕಿ, ಬೆಂಗಳೂರು-ಮೈಸೂರು ಮೂಲ ಸೌಕರ್ಯ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಎಂ.ಜಯದೇವ, ರಾಜ್ಯ ಮಹಿಳಾ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿಗಮದ ಶಶಿಕಲಾ ವಿ. ಟೆಂಗಳಿ ಸೇರಿದಂತೆ ನಿಗಮ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರಾಗಿದ್ದ 46 ಮಂದಿ ಹಾಗೂ 6 ಸಂಸ್ಥೆ ಹಾಗೂ ನಿಗಮಗಳ ಉಪಾಧ್ಯಕ್ಷರ ನಾಮನಿರ್ದೇಶನವನ್ನು ರದ್ದುಗೊಳಿಸಲಾಗಿದೆ.

ಮುಖ್ಯಮಂತ್ರಿಗಳ ಆದೇಶಾನುಸಾರ ರಾಜ್ಯಮಟ್ಟದ ನಿಗಮ, ಮಂಡಳಿ, ಪ್ರಾಧಿಕಾರದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ನಾಮ ನಿರ್ದೇಶನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದ್ದು, ಸಂಬಂಧಪಟ್ಟ ಇಲಾಖೆಗಳು ತಕ್ಷಣ ಮುಂದಿನ ಕ್ರಮ ವಹಿಸಿ ಹೊರಡಿಸಲಾಗುವ ಆದೇಶ ಪ್ರತಿಯನ್ನು ಮುಖ್ಯ ಕಾರ್ಯದರ್ಶಿ ಕಚೇರಿಗೆ ತಲುಪಿಸಲು ಸೂಚನೆ ನೀಡಲಾಗಿದೆ.

ಪ್ರತಿಮೆಗಳಿಗೆ ಭವ್ಯಮಂಟಪ ನಿರ್ಮಾಣ

ಆರಂಭವಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಂಕರೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಕೊರೊನಾ ಸೋಂಕಿನಿಂದಾಗಿ ಎರಡು ವರ್ಷಗಳ ಕಾಲ ಲಾಕ್‌ಡೌನ್, ಸೆಮಿ ಲಾಕ್‌ಡೌನ್, ವೀಕೆಂಡ್ ಕರ್ಫ್ಯೂನಂತಹ ನಿರ್ಬಂಧದಿಂದಾಗಿ ಪ್ರತಿಮೆಗಳು ಮತ್ತು ಮಂಟಪಗಳ ಕೆಲಸ ಸ್ಥಗಿತಗೊಂಡಿತ್ತು. ಇದೀಗ ಕಾಮಗಾರಿ ಭರದಿಂದ ಸಾಗಿದ್ದು, ಇನ್ನೆರಡು ತಿಂಗಳೊಳಗಾಗಿ ಮುಗಿಸುವುದಾಗಿ ತಿಳಿಸಿದರು. ರಾಜವಂಶದ ಪ್ರಮೋದಾದೇವಿ ಒಡೆಯರ್ ಅವರ ಮಾರ್ಗದರ್ಶನ, ಸಲಹೆಯಂತೆ ನಾಲ್ವಡಿ ಮತ್ತು ಸರ್ ಎಂವಿ ಅವರ ಪ್ರತಿಮೆಗಳನ್ನು ಕೆತ್ತಲಾಗುತ್ತಿದ್ದು, ಎರಡೂ ಮಂಟಪಗಳಡಿ ಮಹನೀಯರ ಪರಿಚಯ, ಸಾಧನೆ, ಅಣೆಕಟ್ಟೆ, ಬೃಂದಾವನದ ಇತಿಹಾಸದ ಬಗ್ಗೆ ಚಿತ್ರ ಸಮೇತ ಮಾಹಿತಿ ಒಳಗೊಂಡ ಮ್ಯೂಸಿಯಂ ಮಾಡಿ ಪ್ರವಾಸಿಗರ ವೀಕ್ಷಣೆಗೆ ಅವಕಾಶ ಕಲ್ಪಿಸುವ ಉದ್ದೇಶವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಂಟಪ ನಿರ್ಮಾಣ ಜೊತೆಗೆ ಮಾರ್ಬಲ್‌ನಿಂದ ಮಾಡಿದ ಇಬ್ಬರ ಪ್ರತಿಮೆ ಸಿದ್ಧಪಡಿಸಲು 8.5 ಕೋಟಿ ರೂ. ಕಾಮಗಾರಿ ಜವಾಬ್ದಾರಿ ಹೊತ್ತಿರುವ ಗುತ್ತಿಗೆದಾರ ರಮೇಶ್, ನಾಲ್ವಡಿ ಮತ್ತು ಸರ್ ಎಂವಿ ಪ್ರತಿಮೆಗಳನ್ನು ಸಿದ್ಧಪಡಿಸಲು ಜೈಪುರ್‌ನ ಶಿಲ್ಪಿಯೊಬ್ಬರಿಗೆ ಜವಾಬ್ದಾರಿ ವಹಿಸಿದ್ದಾರೆ.

ಸಂಕಷ್ಟ ಕಾಲದಲ್ಲಿ ಸರ್ಕಾರ ನಿಮ್ಮ ಜೊತೆಗಿದೆ

ಪ್ರವಾಹ, ಮಳೆ ಹಾನಿ ಸಂತ್ರಸ್ತರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಯ



ಮೈಸೂರು, ಜು.12(ಆರ್‌ಕೆಬಿ)- ಸಂಕಷ್ಟ ಕಾಲದಲ್ಲಿ ಸರ್ಕಾರ ನಿಮ್ಮ ಜೊತೆಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರವಾಹ ಮತ್ತು ಮಳೆ ಹಾನಿ ಸಂತ್ರಸ್ತರಿಗೆ ಧೈರ್ಯ ತುಂಬಿದ್ದಾರೆ.

ಪ್ರವಾಹ ಮತ್ತು ಮಳೆ ಹಾನಿಯಿಂದ ತೊಂದರೆಗೊಳಗಾಗಿರುವ ಕೊಡಗು ಜಿಲ್ಲೆಗೆ ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಲು ತೆರಳುವ ಮುನ್ನ ಮಂಗಳವಾರ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

ಸರ್ಕಾರದ ಎಲ್ಲಾ ಸಚಿವರು ಮಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿದ್ದಾರೆ. ನಾನೂ ಕೂಡ ಮಡಿಕೇರಿ, ಮಂಗಳೂರು, ಉಡುಪಿ ಪ್ರವಾಸ ಕೈಗೊಂಡಿದ್ದು, ಅಲ್ಲಿ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುತ್ತೇನೆ ಎಂದರು.

ಮಳೆ ಹಾನಿ ಕುರಿತು ಕೆಲವು ಮಾಹಿತಿಗಳಿವೆ. ಪ್ರಾಣ ಹಾನಿ ಹಾಗೂ ಮನೆಗಳು ಬಿದ್ದಿರುವ ಕುರಿತು ಮಾಹಿತಿ ಇದೆ. ಈ ಬಾರಿ ಮಳೆಯಿಂದಾಗಿ ರಸ್ತೆ ಸಂಪರ್ಕಗಳು ಕಡಿತಗೊಂಡಿವೆ. ಕೆಲವು ಕಡೆ ಭೂ ಕುಸಿತ ಆಗಿದೆ. ಕೊಡಗಿನಲ್ಲಿ ಭೂ ಕಂಪನವೂ ಆಗಿದೆ. ಕಡಲ ತೀರದಲ್ಲಿ ಕಡಲ ಕೊರೆತ ಆಗಿದೆ ಉತ್ತರ ಕರ್ನಾಟಕದಲ್ಲಿ ನದಿ ಪಕ್ಕದ ಗ್ರಾಮಗಳಿಗೆ ಮತ್ತು ಮನೆಗಳಿಗೆ ತೊಂದರೆಯಾಗಿದೆ. ಜಲಾಶಯದಿಂದ ನೀರು ಬಿಟ್ಟ ಹಿನ್ನೆಲೆಯಲ್ಲಿ ಅಲ್ಲಲ್ಲಿ ಬೆಳೆಗಳು ನಾಶವಾಗಿದೆ. ಬೆಳೆ ಹಾನಿ ಕುರಿತು ಸಂಜೆಯೊಳಗೆ ಸಮೀಕ್ಷಾ ವರದಿ ಬರಲಿದೆ ಎಂದು ಹೇಳಿದರು.

ಕಳೆದ ಬಾರಿ ಭೂ ಕುಸಿತ ಆದ ಕಡೆ ಹಾಗೂ ಈ ಬಾರಿ ಭೂಕುಸಿತ ಆಗಿರುವ ಕಡೆಗಳಲ್ಲಿ ತಜ್ಞರಿಂದ ಮಾಹಿತಿ ಪಡೆದು ಶಾಶ್ವತ ಪರಿಹಾರ ಕ್ರಮಗಳ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ರಾಷ್ಟ್ರೀಯ ವಿಪತ್ತು ನಿರ್ವಹಣೆಯಡಿ 739 ಕೋಟಿ ಹಣ ಇದ್ದು, ರಕ್ಷಣೆ ಮತ್ತು ಪರಿಹಾರಗಳಿಗೆ ಯಾವುದೇ ರೀತಿಯಲ್ಲೂ ಹಣದ ಕೊರತೆ ಇಲ್ಲ. ಕೆಲವು ಕಡೆ ಸ್ಥಳಾಂತರ ಕಾರ್ಯ ನಡೆದಿದೆ. ಉತ್ತರ ಕರ್ನಾಟಕದಲ್ಲಿ 63 ಊರುಗಳಲ್ಲಿ ಜನರನ್ನು ಸ್ಥಳಾಂತರ ಮಾಡಿದ್ದೇವೆ. ಶಾಶ್ವತ ಪರಿಹಾರ ಮಾಡುವ ಕುರಿತು ತಜ್ಞರ ಅಭಿಪ್ರಾಯ ಪಡೆಯಲಾಗುವುದು ಎಂದು ತಿಳಿಸಿದರು.

ನಿಗಮ ಮಂಡಳಿಗಳ ಕುರಿತು ಕೋರ್ ಕಮಿಟಿಯಲ್ಲಿ ಈಗಾಗಲೇ 6 ತಿಂಗಳ ಹಿಂದೆಯೇ ಯಾರಿಗೆ ಒಂದೂವರೆ ವರ್ಷ ಮೇಲಾಗಿದೆಯೋ ಅವರನ್ನು ತೆಗೆದು ಹೊಸಬರಿಗೆ ಅವಕಾಶ ನೀಡುವ ತೀರ್ಮಾನ ಆಗಿದೆ. ಅದರ ಪ್ರಕಾರ ಮುಂದಿನ ದಿನಗಳಲ್ಲಿ ಆ ಕೆಲಸ ಮಾಡಲಾಗುವುದು ಎಂದರು.

ಉಸ್ತುವಾರಿ ಸಚಿವರು ಆಯಾ ಜಿಲ್ಲೆಗಳ ಮಳೆ ಹಾಗೂ ಪ್ರವಾಹ ಸಂತ್ರಸ್ತ ಪ್ರದೇಶಗಳಿಗೆ ಹೋಗುತ್ತಿಲ್ಲ ಎಂಬ ಆರೋಪ ಶುದ್ಧ ಸುಳ್ಳು. ಉಸ್ತುವಾರಿ ಸಚಿವರೇ ಎಲ್ಲರೂ ತಾವಾಗಿಯೇ ತಮ್ಮ ಪ್ರದೇಶಗಳಿಗೆ ಭೇಟಿ ನೀಡುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೊಡಗಿನ ಭೂ ಕುಸಿತದ ಪ್ರದೇಶಗಳಲ್ಲಿ ಮುಂಜಾಗ್ರತೆ

ಕೊಡಗಿನಲ್ಲಿ ಬೆಟ್ಟದ ಮೇಲಿರುವವರ ಜನರ ಆಸ್ತಿ, ಪ್ರಾಣ ಹಾನಿಯಾಗದಂತೆ ಅವರ ಮನವೊಲಿಸುವ ಕಾರ್ಯ ಮಾಡಲಾಗುವುದು. ಕಳೆದ ಬಾರಿ ಹಾಗೂ ಈ ಬಾರಿ ಭೂ ಕುಸಿತಕ್ಕೊಳಗಾದ ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಮುಂಜಾಗ್ರತೆ ವಹಿಸಿದ್ದೇವೆ. ಉಡುಪಿಯಲ್ಲಿ ಸಚಿವ ಅಂಗಾರ, ದಕ್ಷಿಣ ಕನ್ನಡದಲ್ಲಿ ಸಚಿವ ಸುನಿಲ್‌ಕುಮಾರ್, ಉತ್ತರ ಕನ್ನಡದಲ್ಲಿ ಶ್ರೀನಿವಾಸ ಪೂಜಾರಿ ಹೋಗಿದ್ದಾರೆ. ಪಿರಿಯಾಪಟ್ಟಣದಲ್ಲಿ ಸಚಿವ ಎಸ್.ಟಿ.ಸೋಮಶೇಖರ್ ಪರಿಶೀಲಿಸುತ್ತಿದ್ದಾರೆ. ಕಂದಾಯ ಸಚಿವರು ಕೊಡಗು, ಚಿಕ್ಕಮಗಳೂರಿಗೆ ಭೇಟಿ ನೀಡಿ ಬಂದಿದ್ದಾರೆ. ಲೋಕೋಪಯೋಗಿ ಸಚಿವರು ಶಿರಾಡಿ ಘಾಟ್ ಸೇರಿದಂತೆ ಇತರೆ ಸಚಿವರು ಆಯಾ ಪ್ರದೇಶಗಳಿಗೆ ಭೇಟಿ ನೀಡಿ ಪರಿಹಾರ ಇನ್ನಿತರ ಕಾರ್ಯಗಳಲ್ಲಿ ಭಾಗವಹಿಸಿದ್ದಾರೆ. ಇಡೀ ಸರ್ಕಾರ, ಅಧಿಕಾರಿಗಳೆಲ್ಲರೂ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಒಟ್ಟಾರೆ ಇಡೀ ಸರ್ಕಾರ ಸಂಕಷ್ಟ ಕಾಲದಲ್ಲಿ ಜನರೊಟ್ಟಿಗೆ ಇರಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಚಿವರಾದ ಎಸ್.ಟಿ.ಸೋಮಶೇಖರ್, ವಿ.ಸುನೀಲ್ ಕುಮಾರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಹರ್ಷವರ್ಧನ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ರಾಜೀವ್‌ಗಾಂಧಿ ಪಂಚಾಯತ್‌ರಾಜ್ ಕಾಂಗ್ರೆಸ್ ಸಮಿತಿಯಿಂದ ಸಮಾವೇಶ

ಮಾಜಿ ಸಚಿವರು, ಶಾಸಕರು, ಸಮಿತಿಯ ರಾಜ್ಯ ಮುಖಂಡರು ಭಾಗಿ



ಮೈಸೂರು, ಜು.12(ಆರ್‌ಕೆಬಿ)- ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಗೊಳಿಸಿ ಪಕ್ಷ ಸಂಘಟನೆ ಮಾಡುವ ಉದ್ದೇಶದಿಂದ ರಾಜೀವ್‌ಗಾಂಧಿ ಪಂಚಾಯತ್ ರಾಜ್ ಕಾಂಗ್ರೆಸ್ ಸಮಿತಿಯ ವತಿಯಿಂದ ಜು.14 ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ಕಾಂಗ್ರೆಸ್ ಭವನದಲ್ಲಿ ಸಮಾವೇಶ ಆಯೋಜಿಸಲಾಗಿದೆ ಎಂದು ಸಮಿತಿಯ ಮೈಸೂರು ಜಿಲ್ಲಾಧ್ಯಕ್ಷ ಮಲ್ಲೇಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಚಾಲನೆ ನೀಡಲಿದ್ದಾರೆ. ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ಎಚ್.ಪಿ.ಮಂಜುನಾಥ್, ಅನಿಲ್ ಚಿಕ್ಕಮಾದು, ಡಾ.ಯತೀಂದ್ರ ಸಿದ್ದರಾಮಯ್ಯ, ರಾಜೀವ್ ಗಾಂಧಿ ಪಂಚಾಯತ್ ರಾಜ್ ಕಾಂಗ್ರೆಸ್ ಸಮಿತಿಯ ರಾಜ್ಯಾಧ್ಯಕ್ಷ ನಾರಾಯಣಸ್ವಾಮಿ, ಎಐಸಿಸಿ ಸಲಹಾ ಸಮಿತಿ ಸದಸ್ಯರಾದ ಘೋರ್ಪಡೆ, ಬಿ.ಆರ್. ಪಾಟೀಲ್, ಪಕ್ಷದ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಇನ್ನಿತರರು ಪಾಲ್ಗೊಳ್ಳುವರು ಎಂದರು.

ಗ್ರಾಮೀಣ ಪ್ರದೇಶದ ಕುಡಿಯುವ ನೀರು, ರಸ್ತೆ ದುರಸ್ತಿ ಮೊದಲಾದ ಮೂಲ ಸೌಲಭ್ಯಗಳನ್ನು ಜನರಿಗೆ ಒದಗಿಸುವ ಬಗ್ಗೆ ಹಾಗೂ ಈ ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯ ಸಾಧನೆಗಳನ್ನು ಜನರಿಗೆ ಮನವರಿಕೆ ಮಾಡುವ ನಿಟ್ಟಿನಲ್ಲಿ ಅರಿವು ಮೂಡಿಸುವುದು ಈ ಸಮಾವೇಶದ ಉದ್ದೇಶವಾಗಿದೆ. ಕಾಂಗ್ರೆಸ್ ಪಕ್ಷದ ಗ್ರಾಪಂ ಸದಸ್ಯರು ಮತ್ತು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸಮೂರ್ತಿ, ಕಾರ್ಯದರ್ಶಿ ಡಿ.ಎಂ.ರಾಜು, ಮುಖಂಡರಾದ ನವೀನ್, ಸುರೇಶ್ ಉಪಸ್ಥಿತರಿದ್ದರು.

ಮೊದಲ ಏಕದಿನ: ಭಾರತಕ್ಕೆ 10 ವಿಕೆಟ್ ಜಯ


ಸರಣಿಯಲ್ಲಿ 1-0 ಅಂತರದ ಮುನ್ನಡೆ



ಲಂಡನ್, ಜು.12- ಬೂಮ್ರಾ ಅವರ ಮಾರಕ ಬೌಲಿಂಗ್ ದಾಳಿ ಹಾಗೂ ನಾಯಕ ರೋಹಿತ್ ಶರ್ಮಾ ಅವರ ಬಿರುಸಿನ ಅರ್ಧಶತಕದ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ 1-0 ಅಂತರದ ಮುನ್ನಡೆ ಸಾಧಿಸಿದೆ.

ಇಲ್ಲಿನ ಕೆನ್ನಿಂಗ್‌ಟನ್ ಓವಲ್ ಮೈದಾನದಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್, ತಂಡದ ಮೊತ್ತ 26 ರನ್ ಆಗುವಷ್ಟರಲ್ಲಿ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ನಂತರವೂ ಬ್ಯಾಟಿಂಗ್‌ನಲ್ಲಿ ಚೇತರಿಸಿಕೊಳ್ಳದ ಆಂಗ್ಲರು ಬೂಮ್ರಾ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿ 25.2 ಓವರ್‌ಗಳಲ್ಲಿ 110 ರನ್‌ಗಳಿಗೆ ಆಲೌಟಾದರು. ಭಾರತದ ಪರ ಬೂಮ್ರಾ 6 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು. ಉಳಿದಂತೆ ಶಮಿ 3, ಪ್ರಸಿದ್ಧ ಕೃಷ್ಣ 1 ವಿಕೆಟ್ ಉರುಳಿಸಿದರು. 111 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 18.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 114 ರನ್ ಗಳಿಸುವ ಮೂಲಕ ಗೆಲುವಿನ ದಡ ಸೇರಿತು. ತಂಡದ ಪರ ಬಿರುಸಿನ ಬ್ಯಾಟಿಂಗ್ ಮಾಡಿದ ನಾಯಕ ರೋಹಿತ್ ಶರ್ಮಾ 58 ಎಸೆತಗಳಲ್ಲಿ 5 ಸಿಕ್ಸರ್, 6 ಬೌಂಡರಿ ಒಳಗೊಂಡ 76ರನ್ ಗಳಿಸಿದರೆ, 4 ಬೌಂಡರಿ ಒಳಗೊಂಡ 31 ರನ್ ಗಳಿಸಿದ ಶಿಖರ್ ಧವನ್ ಅಜೇಯರಾಗಿ ಉಳಿದರು. ಬೂಮ್ರಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಯೋಗ ಶಿಕ್ಷಕ ಅನಂತ ರಚಿತ 'ಯೋಗಿರಾಜ ಶ್ರೀತಿರುಮಲೆ ಕೃಷ್ಣಮಾಚಾರ್ಯ' ಕೃತಿ ಬಿಡುಗಡೆ



ಮೈಸೂರು, ಜು.12(ಎಂಕೆ)- ಯೋಗ ಶಿಕ್ಷಕ ಎನ್.ಅನಂತ ರಚಿತ 'ಯೋಗಿರಾಜ ಶ್ರೀ ತಿರುಮಲೆ ಕೃಷ್ಣಮಾಚಾರ್ಯ' ಕೃತಿಯನ್ನು ಮಂಗಳವಾರ ಲೋಕಾರ್ಪಣೆಗೊಳಿಸಲಾಯಿತು. ಮೈಸೂರಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಪೌಂಡರೀಕ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕೃತಿ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಯೋಗ ಸಾಧಕರ ಕುರಿತು ಕನ್ನಡದಲ್ಲಿ ಕೃತಿ ರಚನೆ ಮಾಡಿರುವುದು ಶ್ಲಾಘನೀಯ. ಇದರಿಂದ ಹಲವು ಯೋಗಪಟುಗಳಿಗೆ ಅನುಕೂಲವಾಗಲಿದೆ. ಪ್ರಧಾನಿಗಳು ಮೈಸೂರಿಗೆ ಬಂದು ಯೋಗ ದಿನಾಚರಣೆ ಭಾಗವಹಿಸಿದ ನಂತರ ಯೋಗಾಭ್ಯಾಸ ಮಾಡುವವರ ಸಂಖ್ಯೆ ತುಂಬಾ ಹೆಚ್ಚಾಗಿದೆ. ಈ ಕುರಿತು ಪ್ರಧಾನಿಗಳೆ ಮುಖ್ಯಮಂತ್ರಿಗಳಲ್ಲಿ ವಿಚಾರಿಸಿದ್ದಾರೆ ಎಂದು ತಿಳಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಮೈಸೂರಿನಲ್ಲಿ ಯೋಗ ಪ್ರವರ್ಧಮಾನಕ್ಕೆ ಬರಲು ಹಾಗೂ ಯೋಗ ನಗರಿ ಎಂದು ಕರೆಸಿಕೊಳ್ಳಲು ಕೃಷ್ಣಮಾಚಾರ್ಯರು ಕಾರಣರಾಗಿದ್ದಾರೆ. ಯೋಗಕ್ಕೆ ಮಾತ್ರವಲ್ಲದೆ ಪ್ರಾಚೀನ ಅನೇಕ ಕೃತಿಗಳನ್ನು ಅಧ್ಯಯನ ಮಾಡಿ, ವೇದಾಂತ ಗಳಲ್ಲಿಯೂ ಪಾಂಡಿತ್ಯವನ್ನು ಪಡೆದಿದ್ದರು ಎಂದರು.

ಯೋಗದ ಮೇಲೆ ಅಪಾರ ನಂಬಿಕೆವುಳ್ಳ ವರಾಗಿದ್ದ ಕೃಷ್ಣಮಾಚಾರ್ಯರು ಹೆಚ್ಚಿನ ಅಧ್ಯಯನಕ್ಕಾಗಿ ಟಿಬೆಟ್‌ಗೆ ಹೋಗಬೇಕಾದ ಸಂದರ್ಭದಲ್ಲಿ ಅಂದಿನ ವೈಸ್‌ರಾಯ್ ಆಗಿದ್ದ ಲಾರ್ಡ್ ಇರ್ವಿನ್ ಅವರಿಗೆ ಯೋಗ ಚಿಕಿತ್ಸೆ ನೀಡಿ ಅನುಮತಿ ಪಡೆದಿದ್ದರು. ಅಲ್ಲದೆ ಮೈಸೂರು ಮಹಾರಾಜರ ಆಶ್ರಯದಲ್ಲಿ ಯೋಗಗುರುಗಳಾಗಿ ಅನೇಕರಿಗೆ ಯೋಗ ತರಬೇತಿ ನೀಡಿದ್ದಾರೆ. ಅವರಲ್ಲಿ ಪಟ್ಟಾಭಿ ಜೋಯಿಸ್ ಪ್ರಮುಖರಾಗಿದ್ದಾರೆ ಎಂದು ತಿಳಿಸಿದರು.

ಜಗತ್ತಿಗೆ ಯೋಗ: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಇಂದು ಜಗತ್ತಿನಾದ್ಯಂತ ಯೋಗ ದಿನ ಆಚರಣೆಯಾಗುತ್ತಿರುವುದಕ್ಕೆ ಮೂಲ ಕೃಷ್ಣಮಾಚಾರ್ಯರಾಗಿದ್ದಾರೆ. ಅಲ್ಲದೆ ಯೋಗದ ಮೂಲಕವೇ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಕೂಡ ಜಗತ್ತಿನಾದ್ಯಂತ ಮನೆ ಮಾತಾಗಿದ್ದಾರೆ ಎಂದು ಹೇಳಿದರು.

ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಯೋಗ ಇಂಡಿಯಾ ಸಂಸ್ಥಾಪಕ ಭರತ್ ಶೆಟ್ಟಿ, ವ್ಯಂಗ್ಯ ಚಿತ್ರಕಾರ ಎಂ.ವಿ.ನಾಗೇಂದ್ರ ಬಾಬು, ಸುವರ್ಣ ಬೆಳಕು ಫೌಂಡೇಶನ್ ಅಧ್ಯಕ್ಷ ಮಹೇಶ್ ನಾಯಕ್, ಬಿ.ಪಿ.ಮೂರ್ತಿ, ತೇಜಸ್ ಕೌಶಿಕ್, ಪ್ರದೀಪ್ ಮತ್ತಿತರರಿದ್ದರು.

ವಿಶ್ವ ಶಾಂತಿಗಾಗಿ ಪ್ರಚಾರ...

ದತ್ತಕ್ರಿಯಾ ಯೋಗದಿಂದಲೇ ವಿಶ್ವ ಶಾಂತಿಗಾಗಿ ಪ್ರಚಾರ ಮಾಡಲಾಗುತ್ತಿದೆ. ದತ್ತಕ್ರಿಯಾ ಯೋಗದಲ್ಲಿ ಶರೀರ ಹಾಗೂ ಮನಸ್ಸಿಗೂ ಯೋಗಾಭ್ಯಾಸ ಮಾಡಿಸಲಾಗುತ್ತದೆ. ವಿದ್ಯಾರ್ಥಿಗಳು, ಯುವಕ-ಯುವತಿಯರು ಯೋಗಾಭ್ಯಾಸ ಮಾಡುವುದು ಬಹಳ ಮುಖ್ಯವಾಗಿದೆ. ಸಮಾಜ ಆರೋಗ್ಯವಾಗಿದ್ದರೆ ದೇಶವೂ ಚೆನ್ನಾಗಿರುತ್ತದೆ.

- ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ,
ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ

ಮೈಸೂರಲ್ಲಿ 'ಆಲೂರು ವೆಂಕಟರಾಯರು ಒಂದು ನೆನಪು'

ಕನ್ನಡ ನಮ್ಮ ಉಸಿರಾಗದ ಹೊರತು ಕನ್ನಡ ಸಂಸ್ಕೃತಿಗೆ ಉಳಿಗಾಲವಿಲ್ಲ ಎಂದಿದ್ದ ವೆಂಕಟರಾಯರು



ಮೈಸೂರು, ಜು.12(ಆರ್‌ಕೆಬಿ)- ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರ 143ನೇ ಜಯಂತಿ ಅಂಗವಾಗಿ ಮೈಸೂರಿನ ಮನುವನ ಉದ್ಯಾನವನದಲ್ಲಿ ಮಂಗಳವಾರ ಆಲೂರು ವೆಂಕಟರಾಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಸ್ಮರಿಸಲಾಯಿತು.

ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ 'ಆಲೂರು ವೆಂಕಟರಾಯರು ಒಂದು ನೆನಪು' ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ವೈ.ಡಿ. ರಾಜಣ್ಣ ಆಲೂರು ವೆಂಕಟರಾಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಹಸಿರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ ಎಂದು ಕೂಗಿ ಹೇಳಿದವರು ಆಲೂರು ವೆಂಕಟರಾಯರು, ಆದರೆ ಕರ್ನಾಟಕವೆಂಬ ಹೆಸರಾಗಿದೆ- ಆದರೆ ಕನ್ನಡ ಇನ್ನೂ ಹಸಿರಾಗಬೇಕಿದೆ. ಅವರಂತಹ ಸ್ಮರಣೀಯರು ಮತ್ತೆ ಹುಟ್ಟಿ ಬರಬೇಕಿದೆ ಎಂದರು.

ಕನ್ನಡ ಸಾಹಿತ್ಯ, ಪತ್ರಿಕೋದ್ಯಮ ಕ್ಷೇತ್ರಕ್ಕೆ ಸ್ವತಂತ್ರ ಪೂರ್ವದಲ್ಲೇ ತಮ್ಮನ್ನು ಸಮರ್ಪಿಸಿಕೊಂಡವರು ಆಲೂರು ವೆಂಕಟರಾಯರು. ಕನ್ನಡ ನಮ್ಮ ಉಸಿರಾಗದ ಹೊರತು ಕನ್ನಡ ಸಂಸ್ಕೃತಿಗೆ ಉಳಿಗಾಲವಿಲ್ಲ ಎಂದು ಮನಗಂಡಿದ್ದರು. ಬದುಕಿನುದ್ದಕ್ಕೂ ಕನ್ನಡಕ್ಕಾಗಿ ಕನವರಿಸಿದರು. 1907ರಲ್ಲೇ ಕನ್ನಡ ಗ್ರಂಥಕರ್ತರ ಸಮ್ಮೇಳನ ಆಯೋಜಿಸಿದ್ದರು. ಕನ್ನಡಿಗರು ಹೈದರಾಬಾದ್, ಬಾಂಬೆ, ಮದ್ರಾಸ್ ಮೈಸೂರು ಪ್ರಾಂತ್ಯದಲ್ಲಿ ಹಂಚಿ ಹೋಗಿದ್ದಾಗ, ಆ ಎಲ್ಲಾ ಕನ್ನಡಿಗರು ಕರ್ನಾಟಕದ ಹೆಸರಿನಲ್ಲಿ ಐಕ್ಯವಾಗಬೇಕು, ಕನ್ನಡಿಗರಿಗೊಂದು ಅಸ್ಮಿತೆ ಇರಬೇಕು ಎಂದು ಹಂಬಲಿಸಿದವರು. ಕರ್ನಾಟಕದ ಏಕೀಕರಣ, ವಿಶಾಲ ಕರ್ನಾಟಕ ರಾಜ್ಯದ ಅಸ್ತಿತ್ವ ಆಗಬೇಕು ಎಂಬುದು ಅವರ ಗುರಿಯಾಗಿತ್ತು ಎಂದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ ಕನ್ನಡ, ಕನ್ನಡಿಗ, ಕರ್ನಾಟಕ ಇರುವ ತನಕ ಮರೆಯಲಾಗದ ಮಹಾನ್ ಚೇತನ ಆಲೂರು ವೆಂಕಟರಾಯರು. 25ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಅವರು ಬಾಲಗಂಗಾಧರ ತಿಲಕರ ಗೀತಾ ರಹಸ್ಯವನ್ನು ಕನ್ನಡಕ್ಕೆ ಅನುವಾದಿಸಿ, ಕನ್ನಡ ಸಾಹಿತ್ಯಕ್ಕೆ ಗೌರವ ತಂದುಕೊಟ್ಟವರು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ನಗರಪಾಲಿಕೆ ಸದಸ್ಯೆ ಸೌಮ್ಯ ಉಮೇಶ್, ಜಗದೀಶ್, ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಮುಖಂಡರಾದ ಅಪೂರ್ವ ಸುರೇಶ್, ಬಸವರಾಜ್ ಬಸಪ್ಪ, ಶಿವರಾಜ್, ರಾಕೇಶ್ ಕುಂಚಿಟಿಗ, ಸುಚೀಂದ್ರ, ಚೇತನ್ ಕಾಂತರಾಜು, ರಂಗನಾಥ್, ಚಕ್ರಪಾಣಿ, ಪುರುಷೋತ್ತಮ್, ಶಿವಕುಮಾರ್, ಜೀವನ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ವಿವಿಧೆಡೆ ಇಂದು ಗುರು ಪೂರ್ಣಿಮಾ ಆಚರಣೆ

ಮೈಸೂರು, ಜು.12-ಮೈಸೂರು ನಗರ ಸೇರಿದಂತೆ ದೇಶದಾದ್ಯಂತ ನಾಳೆ (ಜು.13) ಗುರು ಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ.

ರಾಮಕೃಷ್ಣ ಆಶ್ರಮ: ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಬುಧವಾರ ಬೆಳಗ್ಗೆ 5.25 ರಿಂದ ನಾರಾಯಣ ಸೂಕ್ತಮ್ ಮೂಲಕ ಗುರು ಪೂರ್ಣಿಮೆಗೆ ಚಾಲನೆ ನೀಡ ಲಾಗುವುದು. ನಂತರ ಆಚಾರ್ಯೋಪದೇಶ, ಗುರುಸ್ತೋತ್ರ, ಮಂಗಳಾರತಿ ಮತ್ತು ಭಜನೆ ನಡೆಯಲಿದೆ. ತದನಂತರ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಪೂಜೆ, ಗ್ರಂಥಮಾಪನ, ಶ್ರೀ ಗುರು ಪೂರ್ಣಿಮೆ ಬಗ್ಗೆ ಪ್ರವಚನ, ಪುಸ್ತಕ ಬಿಡುಗಡೆ, ಶ್ರೀರಾಮಕೃಷ್ಣ ಅಷ್ಟೋತ್ತರ ಅರ್ಚನೆ, ಆರತಿ ನಡೆಯಲಿದೆ.

ಶ್ರೀ ಸ್ವರ್ಣ ನೃಸಿಂಹ ಸಾಯಿ ಪೀಠಿಕೆ: ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್‌ನಿಂದ ಬುಧವಾರ ಬೆಳಗ್ಗೆ ಮೈಸೂರು-ಬನ್ನೂರು ರಸ್ತೆಯಲ್ಲಿರುವ ವಾಜಮಂಗಲದ ಆರ್.ಆರ್.ವೆಡ್ಡಿಂಗ್ ಬೆಲ್ಸ್‌ನಲ್ಲಿ ಗುರು ಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ವಿವಿಧ ಪೂಜೆ, ಹೋಮಗಳು, ಪಾದುಕಾ ಪೂಜೆ, ಸಭಾ ಕಾರ್ಯಕ್ರಮಗಳು ಜರುಗಲಿದ್ದು, 'ವಿದ್ಯಾನಂದಶ್ರೀ' ಫಲಾನುಭವಿ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ ವಿತರಣೆ ಮಾಡಲಾಗುವುದು. ನಂತರ ಭಿಕ್ಷಾವಂದನೆ, ಮಹಾಮಂಗಳಾರತಿ ನಡೆಯಲಿದೆ.

ಶ್ರೀ ಸಾಯಿ ಮಂದಿರ: ಮೈಸೂರಿನ ರಾಮಕೃಷ್ಣನಗರ 'ಇ' ಅಂಡ್ 'ಎಫ್' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿಯಲ್ಲಿ ಜು.13ರಂದು ಗುರು ಪೂರ್ಣಿಮಾ ಆಚರಿಸಲಾಗುತ್ತಿದೆ. ಅಂದು ಬೆಳಗ್ಗೆ 7 ಗಂಟೆಯಿಂದ ಕಾಕಡಾರತಿ, ಜಲಾಭಿಷೇಕ, ಪುಷ್ಪಾರ್ಚನೆ ಸೇರಿದಂತೆ ವಿವಿಧ ಆರತಿ, ಭಜನೆ, ಪೂಜಾ ಕಾರ್ಯಕ್ರಮಗಳು ನಡೆಯಲಿವೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್: ಮೈಸೂರಿನ ಹೆಬ್ಬಾಳು ಎರಡನೇ ಹಂತದಲ್ಲಿರುವ ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್ ವತಿಯಿಂದ ಸಾಯಿ ಮಂದಿರದಲ್ಲಿ ಬುಧವಾರ ಗುರು ಪೂರ್ಣಿಮೆ, ಸಾಮೂಹಿಕ ಗ್ರಹದೋಷ ನಿವಾರಣೆ, ಸಾಯಿ ಪೂಜೆ, ಸಂಕಲ್ಪ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸುತ್ತೂರು ಮಠ: ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶ್ರೀ ಮಠದಲ್ಲಿ ನಾಳೆ (ಬುಧವಾರ) ಗುರು ಪೂರ್ಣಿಮಾ ಮತ್ತು ಬೆಳದಿಂಗಳ ಸಂಗೀತ ಕಾರ್ಯಕ್ರಮವನ್ನು ಸಂಜೆ 5.30 ಗಂಟೆಗೆ ಏರ್ಪಡಿಸಲಾಗಿದ್ದು, ಸುತ್ತೂರು ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ. ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ಗುರು ಪೂರ್ಣಿಮೆ ಕುರಿತು ಉಪನ್ಯಾಸ ನೀಡುವರು. ವಿದ್ವಾನ್ ಗಾನ ಪ್ರವೀಣ್ ಯೋಗೀಶ್ ಶರ್ಮ ಬಳ್ಳೆ ಪದವು ಅವರಿಂದ ಗಾಯನ ನಡೆಯಲಿದೆ.

ಹೆಚ್ಚಿದ ಕಪಿಲೆ ನೀರಿನ ಮಟ್ಟ ತಗ್ಗು ಪ್ರದೇಶಗಳು ಜಲಾವೃತ

ನಂಜನಗೂಡು, ಜು.12(ಸುದರ್ಶನ್)– ಕಪಿಲಾ ನದಿ ನೀರಿನ ಮಟ್ಟ ಮಂಗಳವಾರ ಮತ್ತಷ್ಟು ಹೆಚ್ಚಾಗಿದ್ದು, ನಗರದ ಕೆಲ ದೇಗುಲಗಳು, ತಗ್ಗು ಪ್ರದೇಶಗಳ ಮನೆಗಳು ಹಾಗೂ ಅಂಗಡಿ–ಮುಂಗಟ್ಟು ಜಲಾವೃತವಾಗಿವೆ

ಕೇರಳದ ವೈನಾಡಿನಲ್ಲಿ ಹೆಚ್ಚು ಮಳೆಯಾಗುತ್ತಿರುವ ಕಾರಣ ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚಿದೆ. ಹೀಗಾಗಿ ಜಲಾಶಯದಿಂದ 38 ಸಾವಿರ ಕ್ಯೂಸೆಕ್‌ಗಿಂತಲೂ ಹೆಚ್ಚಿನ ನೀರು ಬಿಡುಗಡೆ ಮಾಡಲಾಗಿದೆ. ಪರಿಣಾಮ ಕಪಿಲೆ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದಾಳೆ. ಒಳಹರಿವು ಹೆಚ್ಚಾದರೆ ಜಲಾಶಯದಿಂದ ಮತ್ತಷ್ಟು ನೀರು ಬಿಡುವ ಸಾಧ್ಯತೆ ಇದೆ.

ತಗ್ಗು ಪ್ರದೇಶಗಳು ಜಲಾವೃತ: ನಗರದ ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟ, ಐತಿಹಾಸಿಕ 16 ಕಾಲು ಮಂಟಪ ಈಗಾಗಲೇ ಮುಳುಗಡೆಯಾಗಿದ್ದು, ಪರಶುರಾಮ ದೇವಾಲಯ, ಮಲ್ಲನಮೂಲೆ ಮಠ ನೀರಿನಿಂದ ಜಲಾವೃತವಾಗಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಅಲ್ಲಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ.

200 ಎಕರೆ ಬೆಳೆಹಾನಿ: ಕಪಿಲೆ ಪ್ರವಾಹದಿಂದ ತಾಲೂಕಿನ ಮುಳ್ಳೂರು, ಕುಳ್ಳಂಕನಹುಂಡಿ, ಬೊಕ್ಕಹಳ್ಳಿ ಕತ್ವಾಡಿಪುರ, ನಂದಿಗುಂದ, ನಗರ್ಲೆ ಗ್ರಾಮಗಳ ಅಂದಾಜು 200 ಎಕರೆ ಅಚ್ಚುಕಟ್ಟು ಪ್ರದೇಶ ಜಲಾವೃತವಾಗಿದ್ದು, ಭತ್ತದ ಬೆಳೆ ನಾಶವಾಗಿದೆ.



ನಂಜನಗೂಡಿನ ಶ್ರೀಕಂಠೇಶ್ವರ ಸ್ನಾನಘಟ್ಟ ಮುಳುಗಡೆಯಾಗಿರುವುದು.



ಸ್ನಾನಘಟ್ಟಕ್ಕೆ ಶಾಸಕ ಬಿ.ಹರ್ಷವರ್ಧನ್ ಭೇಟಿ ನೀಡಿ, ಪರಿಶೀಲಿಸಿದರು.

ನಿವಾಸಿಗಳ ಸ್ಥಳಾಂತರ: ನಗರದ ಹಳ್ಳದ ಕೇರಿ ಬಡಾವಣೆಯ ಸಾಕಷ್ಟು ಮನೆಗಳು ಜಲಾವೃತವಾಗಿದೆ. ಅಲ್ಲದೆ ದೇವಾಲಯ ಸಮೀಪದ ತಗ್ಗು ಪ್ರದೇಶದ ತೋಪಿನ ಬೀದಿ, ಹಳ್ಳದಕೇರಿ, ಒಕ್ಕಲಗೇರಿ ಬಡಾವಣೆಗೆ ನೀರು ನುಗ್ಗಿದ್ದು, ಪ್ರವಾಹ ಭೀತಿ ಎದುರಿಸುತ್ತಿರುವ ಅಲ್ಲಿನ ನಿವಾಸಿಗಳು ಮನೆಯಲ್ಲಿನ ಪದಾರ್ಥಗಳನ್ನು ಸ್ಥಳಾಂತರಿಸುತ್ತಿದ್ದಾರೆ. ನಗರದ ಹಳ್ಳದಕೇರಿಯ 4 ಮನೆಗಳು ಜಲಾವೃತಗೊಂಡಿರುವ ಪರಿಣಾಮ ಅಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ. ಅಲ್ಲದೆ ಕಪಿಲ ನದಿಯ ಸುತ್ತಮುತ್ತಲಿನ ಅಂಗಡಿ ಮಳಿಗೆಗಳನ್ನು ತಹಸೀಲ್ದಾರ್ ಆದೇಶದ ಮೇರೆಗೆ ತೆರವುಗೊಳಿಸಲಾಗುತ್ತಿದೆ.

ತಹಸೀಲ್ದಾರ್ ಪರಿಶೀಲನೆ: ತಗ್ಗು ಪ್ರದೇಶದ ಬಡಾವಣೆಗಳಿಗೆ ಪ್ರವಾಹದಿಂದ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿರುವ ಸ್ಥಳಕ್ಕೆ ತಹಸೀಲ್ದಾರ್ ಭೇಟಿ ನೀಡಿ ಪರಿಶೀಲಿಸಿದ್ದು, ತಗ್ಗು ಪ್ರದೇಶದ ಮನೆಗಳ ಹಾನಿ ಬಗ್ಗೆ ವರದಿ ನೀಡಿ ಪರಿಹಾರ ಕಲ್ಪಿಸಿಕೊಡಲಾಗುವುದು ಎಂದು ತಹಸೀಲ್ದಾರ್ ಶಿವಮೂರ್ತಿ ಭರವಸೆ ನೀಡಿದ್ದಾರೆ.

ಜಲಾವೃತ ಪ್ರದೇಶಗಳಿಗೆ ಶಾಸಕ ಹರ್ಷವರ್ಧನ್ ಭೇಟಿ

ನಂಜನಗೂಡು: ಕಪಿಲಾ ನದಿ ಪ್ರವಾಹದಿಂದ ಜಲಾವೃತವಾಗಿರುವ ನಗರದ ಹಳ್ಳದಕೇರಿ, ದೇಗುಲದ ಸ್ನಾನಘಟ್ಟಕ್ಕೆ ಶಾಸಕ ಬಿ.ಹರ್ಷವರ್ಧನ್ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ವಾರದ ಹಿಂದೆಯೇ ಅಧಿಕಾರಿಗಳ ಸಭೆ ಕರೆದು ಪ್ರವಾಹದ ಬಗ್ಗೆ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದ್ದೆ. ಅಂತೆಯೇ ನಗರದ 3 ಕಡೆ ಹಾಗೂ ಗ್ರಾಮೀಣ ಪ್ರದೇಶದ 2 ಕಡೆ ಆಶ್ರಯ ಕೇಂದ್ರಗಳನ್ನು ತೆರೆಯಲಾಗಿದೆ. ಕಪಿಲಾ ನದಿಯ ನೀರಿನ ಪ್ರಮಾಣ ಇನ್ನೂ ಹೆಚ್ಚಾದಲ್ಲಿ ನದಿ ಪಾತ್ರದ ಜನರನ್ನು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲಾಗುವುದು. ಜೊತೆಗೆ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದಲ್ಲಿ ಪ್ರತಿದಿನ 200 ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ತಮ್ಮ ಸೂಚನೆಯಂತೆ ತಾಲೂಕಿನ ಹಲವು ಗ್ರಾಮಗಳಿ ಕೃಷಿ ಅಧಿಕಾರಿಗಳು ತೆರಳಿ ಬೆಳೆ ಸಮೀಕ್ಷೆ ನಡೆಸಿ 200 ಎಕರೆ ಪ್ರದೇಶದಲ್ಲಿ ಹಾನಿಯಾಗಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಸಂತ್ರಸ್ತ ರೈತರ ಖಾತೆಗೆ ನೇರವಾಗಿ ಪರಿಹಾರದ ಹಣ ಜಮೆ ಮಾಡುವಂತೆಯೂ ಸೂಚಿಸಲಾಗಿದೆ ಎಂದರು. ಇನ್ನೂ ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ತಾಲೂಕಿನ ಇಂದಿರಾನಗರ, ಹೆಡಿಯಾಲದಲ್ಲಿ ತಲಾ ಒಂದೊಂದು ಮನೆ ಕುಸಿದಿದೆ. ಈಗಾಗಲೇ ಮುಖ್ಯಮಂತ್ರಿಗಳು 5 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿದ್ದು, ಅಧಿಕಾರಿಗಳು ವರದಿ ನೀಡಿದ ತಕ್ಷಣ ಪರಿಹಾರ ದೊರಕಲಿದೆ. ತಾಲೂಕಿನಲ್ಲಿ ಅಧಿಕಾರಿಗಳು 24 ಗಂಟೆಗಳೂ ಸಹ ಜನರ ಸೇವೆಯಲ್ಲಿದ್ದು, ಯಾರೂ ಆತಂಕಕ್ಕೆ ಒಳಗಾಗಬಾರದು. ಏನೇ ಆದರೂ ಸಹ ಸಹಾಯವಾಣಿ ಸಂಪರ್ಕಿಸಿದಲ್ಲಿ ಅಧಿಕಾರಿಗಳು ಸಹಾಯ ಹಸ್ತ ಚಾಚಲಿದ್ದಾರೆ. ಪ್ರವಾಹ ಎದುರಿಸಲು ಸಕಲ ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದರು.

ಕ್ರೀಡೆಯಿಂದ ದೇಹ, ಮನಸ್ಸು ಸದೃಢ

ಪುರಸಭಾಧ್ಯಕ್ಷ ಎಸ್.ಮದನ್‌ರಾಜ್

ತಿ.ನರಸೀಪುರ, ಜು.12(ಎಸ್‌ಕೆ)– ಕ್ರೀಡೆಯಿಂದ ದೇಹ ಹಾಗೂ ಮನಸ್ಸು ಸದೃಢವಾಗುತ್ತದೆ. ಅಲ್ಲದೆ, ಕ್ರೀಡೆ ಮನಸ್ಸಿಗೆ ಉಲ್ಲಾಸ ತರುವ ಜೊತೆಗೆ ಏಕಾಗ್ರತೆ ಹೆಚ್ಚಿಸಿ ಆತ್ಮವಿಶ್ವಾಸ ಮೂಡಿಸುತ್ತದೆ ಎಂದು ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.



ಪಟ್ಟಣದ ಭೈರಾಪುರ ಗೋಲ್ಡನ್ ಸ್ಟ್ರೈಕರ್ಸ್ ವತಿಯಿಂದ 4ನೇ ವಾರ್ಡ್‌ನಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಮುಕ್ತ ವಾಲಿಬಾಲ್ ಪಂದ್ಯಾವಳಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿನಿತ್ಯದ ಜಂಜಾಟದ ಜೀವನದಲ್ಲಿ ಕ್ರೀಡೆ ಒಂದು ಅವಿಭಾಜ್ಯ ಅಂಗವಾಗಬೇಕು ಎಂದರು.

ಪುರಸಭಾ ಸದಸ್ಯ ಎಲ್.ಮಂಜುನಾಥ್ ಮಾತನಾಡಿ, ದೇಹ ಮತ್ತು ಮನಸ್ಸಿನ ಸಮತೋಲನ ಸಾಧಿಸುವಲ್ಲಿ ಕ್ರೀಡೆ ಪ್ರಮುಖ ಪಾತ್ರ ವಹಿಸುತ್ತದೆ. ಚಿಕ್ಕ ವಯಸ್ಸಿನಿಂದಲೇ ಕ್ರೀಡೆಗಳಲ್ಲಿ ಸಕ್ರಿಯವಾಗಿ ತೊಡಗಿಸಿದರೆ ಸದೃಢ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ವಾಲಿಬಾಲ್ ಪಂದ್ಯಾವಳಿಯಲ್ಲಿ ಮಂಡ್ಯ ಬಾಯ್ಸ್ ಪ್ರಥಮ ಬಹುಮಾನ 15 ಸಾವಿರ, ಮೈಸೂರಿನ ಮಣಿಕಂಠ ಬಾಯ್ಸ್ ದ್ವಿತೀಯ ಬಹುಮಾನ 10 ಸಾವಿರ ಹಾಗೂ ವಿಕ್ಕಿ ಬಾಯ್ಸ್ ತೃತೀಯ ಬಹುಮಾನ 5 ಸಾವಿರ ಮತ್ತು ಟ್ರೋಫಿ ಪಡೆದರು. ಪಂದ್ಯಾವಳಿಯನ್ನು ಅರುಂಧತಿ ಸಹಕಾರ ಸಂಘದ ಅಧ್ಯಕ್ಷ ಕೆಂಚಪ್ಪ ಉದ್ಘಾಟಿಸಿದರು. ಈ ವೇಳೆ ಪುರಸಭೆ ಸದಸ್ಯರಾದ ನಾಗರಾಜು, ಅಹಮದ್ ಸೈಯದ್, ಹನೂರು ತಾಪಂ ಇಓ ರವೀಂದ್ರ, ಶಿವಶಂಕರ ಸ್ಪೋರ್ಟ್ಸ್ ಅಕಾಡೆಮಿ ಮುಖ್ಯಸ್ಥ ನವೀನ್, ಬಾಗಳಿ ಯೋಗೀಶ್, ಯಜಮಾನರು ದಿಲೀಪ್ ಹಾಗೂ ಹೇಮಂತ್, ಅಪ್ಪು, ಅಮಿತ್, ಚೇತನ್, ಶಶಿಕಾಂತ್, ಸುಪ್ರೀತ್, ಗಿರಿಧರ್, ವಿಕಾಸ್, ರಾಜೇಶ್, ಸಿದ್ದು, ನಿಕ್ಕಿ, ಅಭಿ, ರಂಗ ಮತ್ತಿತರರಿದ್ದರು.

22.5 ಕೋಟಿ ವೆಚ್ಚದ ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ನಂಜನಗೂಡು, ಜು.12– ಬಾಗಲಕೋಟೆ–ಬಿಳಿಗಿರಿರಂಗನಬೆಟ್ಟ, ರಾಮನಾಥಪುರ–ತೆರಕಣಾಂಬಿ ಹಾಗೂ ತಾಲೂಕಿನ ಹುರಾ ಗ್ರಾಮದಿಂದ ರಾಮನಾಥಪುರ–ತೆರಕಣಾಂಬಿ ಸಂಪರ್ಕ ಕಲ್ಪಿಸುವ 22.5 ಕೋಟಿ ರೂ. ವೆಚ್ಚದಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.



ನಂಜನಗೂಡು ತಾಲೂಕಿನ ಹರದನಹಳ್ಳಿಯಲ್ಲಿ 22.5 ಕೋಟಿ ರೂ. ವೆಚ್ಚದ 13 ಕಿಮೀ ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹುಲ್ಲಹಳ್ಳಿ ಗ್ರಾಮದಿಂದ ಹಂಪಾಪುರ ಮಾರ್ಗವಾಗಿ ಬಾಗಲಕೋಟೆ, ಬಿಳಿಗಿರಿರಂಗನ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿ ಬಿದ್ದು ಸಂಪೂರ್ಣ ಹಾಳಾಗಿತ್ತು. ಈ ರಸ್ತೆ ಅಭಿವೃದ್ಧಿಗಾಗಿ 13.5 ಕೋಟಿ ರೂ. ವೆಚ್ಚದಲ್ಲಿ 9.5 ಕಿಮೀ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ 7 ಕೋಟಿ ರೂ. ವೆಚ್ಚದಲ್ಲಿ ತಾಲೂಕಿನ ಇಂದಿರಾನಗರದ ಮೂಲಕ ರಾಮನಾಥಪುರ–ತೆರಕಣಾಂಬಿ 4.10 ಕಿಮೀ, ರಾಜ್ಯ ಹೆದ್ದಾರಿ ಮತ್ತು 2 ಕೋಟಿ ವೆಚ್ಚದಲ್ಲಿ ಹುರಾ ಗ್ರಾಮದ ಮೂಲಕ ರಾಮನಾಥಪುರ–ತೆರಕಣಾಂಬಿಗೆ ಹೋಗುವ ರಸ್ತೆ 1.6 ಕಿಮೀ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಲಾಗಿದ್ದು ಮುಂದಿನ 3 ತಿಂಗಳ ಅವಧಿಯಲ್ಲಿ ರಸ್ತೆ ಕಾಮಗಾರಿ ಮುಕ್ತಾಯಗೊಂಡು ಜನರಿಗೆ ಅನುಕೂಲವಾಗಲಿದೆ ಎಂದರು.

ಇದು ಚುನಾವಣಾ ವರ್ಷವಾದ್ದರಿಂದಾಗಿ ಕೆಲವರು ನನಗೆ ಕೆಸರು ಎರಚಲು ಕಾದಿದ್ದಾರೆ. ಅವರಿಗೆ ಅದೇ ಕೆಲಸ. ಅದಕ್ಕೆ ನಾನು ಎದೆಗುಂದುವುದಿಲ್ಲ. ಕ್ಷೇತ್ರದಲ್ಲಿ ನಾನು ಮಾಡಿರುವ ಕೆಲಸಗಳೇ ನನಗೆ ಶ್ರೀರಕ್ಷೆಯಾಗಿದ್ದು, ಮುಂದಿನ ಅವಧಿಯಲ್ಲಿ ಎಲ್ಲಾ ಗ್ರಾಮಗಳಲ್ಲೂ ಮೂಲಸೌಕರ್ಯ ಬಾಕಿ ಇಲ್ಲದಂತೆ ಅಭಿವೃದ್ಧಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆಂಡಗಣ್ಣಪ್ಪ, ಹರದನಹಳ್ಳಿ ಗ್ರಾಪಂ ಅಧ್ಯಕ್ಷ ಸುಂದರಪ್ಪ, ಉಪಾಧ್ಯಕ್ಷೆ ಇಂದಿರಮ್ಮ, ಬಿಜೆಪಿ ಮಹಾಶಕ್ತಿಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ಗ್ರಾಪಂ ಸದಸ್ಯರಾದ ಬಸಪ್ಪ, ಚಿಕ್ಕನಾಯಕ, ಮಹೇಶ್, ರಾಜೇಂದ್ರ, ನಾಗಣ್ಣ, ಮುಖಂಡರಾದ ರವಿ, ಲೋಕೋಪಯೋಗಿ ಎಇಇ ಮುತ್ತುರಾಜ್, ಎಇ ಬಸವರಾಜು, ಜಾಯ್‌ಕುಮಾರ್ ಇದ್ದರು.

ಚುಂಚನಕಟ್ಟೆ ಶ್ರೀರಾಮ ದೇವಾಲಯಕ್ಕೆ ಸಿದ್ಧಗಂಗಾಶ್ರೀಗಳ ಭೇಟಿ

ಚುಂಚನಕಟ್ಟೆ, ಜು.12(ಮಧು)– ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀರಾಮ ದೇವಾಲಯಕ್ಕೆ ತುಮಕೂರಿನ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಭೇಟಿ ನೀಡಿ ದೇವರ ದರ್ಶನ ಪಡೆದರು.

ಕೆ.ಆರ್.ನಗರದ ಭಕ್ತರ ನಿವಾಸಕ್ಕೆ ಆಗಮಿಸಿದ್ದ ಅವರು, ಚುಂಚನಕಟ್ಟೆ ಆಗಮಿಸಿ ಸೀತಾ ಲಕ್ಷ್ಮಣ ಸಮೇತ ಶ್ರೀರಾಮ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮೈದುಂಬಿ ಹರಿಯುತ್ತಿರುವ ಧನುಷ್ಕೋಟಿ ಜಲಪಾತ ವೀಕ್ಷಿಸಿದರು. ಹತ್ತಾರು ಮೀಟರ್ ಎತ್ತರದಿಂದ ಬೀಳುತ್ತಿರುವ ಕಾವೇರಿ ಜಲಧಾರೆ ಕಂಡು ಆನಂದಿಸಿದ ಶ್ರೀಗಳು, ಜಾಗದ ಇತಿಹಾಸ ಮತ್ತು ಮಹಿಮೆ ಬಗ್ಗೆ ಮಾಹಿತಿ ಪಡೆದು ಸಂತಸ ವ್ಯಕ್ತಪಡಿಸಿದರು.

ಕಾವೇರಿ ನದಿ ದಂಡೆಯಲ್ಲಿರುವ ಗ್ರಾಫೈಟ್ ಇಂಡಿಯಾ ವಿದ್ಯುತ್ ಉತ್ಪಾದನಾ ಕೇಂದ್ರ ವೀಕ್ಷಿಸಿದ ಶ್ರೀಗಳು ಶ್ರೀರಾಮ ದೇವಾಲಯದ ಮುಂದೆ ಕ್ಷೇತ್ರದ ಶಾಸಕ ಸಾ.ರಾ.ಮಹೇಶ್ ಅವರ ದೂರದೃಷ್ಟಿಯಿಂದ ಪ್ರತಿಷ್ಠಾಪಿಸಿರುವ ಆಂಜನೇಯಸ್ವಾಮಿ ಏಕಶಿಲಾ ವಿಗ್ರಹದ ಅಂದಕ್ಕೆ ಮಾರು ಹೋಗಿ ಭಕ್ತಿ ಪರವಶರಾದರು.



ಈ ವೇಳೆ ಅಂಕನಹಳ್ಳಿ ಮಠದ ವಿಜಯಕುಮಾರ ಸ್ವಾಮೀಜಿ, ಅರಕೆರೆ ವಿರಕ್ತ ಮಠದ ಸಿದ್ದೇಶ್ವರ ಶ್ರೀಗಳು, ಕೊಡ್ಲಿಪೇಟೆ ಕಲ್ಮಠದ ಮಹಾಂತ ಸ್ವಾಮೀಜಿ, ಸಿರಿಗಳಲೆ ಮಠದ ಶಿವಲಿಂಗ ಸ್ವಾಮೀಜಿ, ಬೇಗೂರು ಮೃತ್ಯುಂಜಯ ಸ್ವಾಮೀಜಿ, ತಣ್ಣೀರು ಮಠದ ವಿಜಯಕುಮಾರ್ ಸ್ವಾಮೀಜಿ, ರೇಣುಕೇಶ್ ಸ್ವಾಮೀಜಿ, ಕೆಆರ್.ನಗರ ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಮಹೇಶ್, ವೀರಶೈವ ಮುಖಂಡ ಆದರ್ಶ, ಪ್ರವೀಣ್ ಇನ್ನಿತರರಿದ್ದರು.



ಸರಗೂರಿನ ಪ್ರವಾಸಿ ಮಂದಿರದಲ್ಲಿ ಎಂ.ಸಿ.ತಳಲು ಗ್ರಾಪಂ ನೂತನ ಅಧ್ಯಕ್ಷೆ ಅಂಬಿಕಾ ಚಂದ್ರಶೇಖರ್ ಅವರನ್ನು ಬಿಜೆಪಿ ಮುಖಂಡ ಹೆಚ್.ವಿ.ಕೃಷ್ಣಸ್ವಾಮಿ ಅಭಿನಂದಿಸಿದರು. ಈ ವೇಳೆ ಉಪಾಧ್ಯಕ್ಷ ನಿಂಗಮ್ಮ ನಿಂಗಯ್ಯ, ಸದಸ್ಯರಾದ ರಾಜಕುಮಾರ, ಬರಗಿ ಕುಮಾರ್, ತಾಲೂಕು ಬಿಜೆಪಿ ಉಪಾಧ್ಯಕ್ಷ ನಿಜಗುಣ, ಮುಖಂಡರಾದ ಲಿಂಗರಾಜು, ರಾಜೇಶ್, ರಾಮುಲು, ಕಾರ್ಯಕರ್ತರು ಹಾಜರಿದ್ದರು.

ನಿಂದನಾತ್ಮಕ ಸಂದೇಶದಿಂದ ಕೆರಳಿದ ಯುವಕ: ಸ್ನೇಹಿತನಿಗೇ ಇರಿದು ಪರಾರಿ

ಹುಣಸೂರು, ಜು.12(ಕೆಕೆ)– ಇನ್‌ಸ್ಟಾಗ್ರಾಂನಲ್ಲಿ ನಿಂದಿಸಿದ ಗೆಳೆಯನಿಗೆ ಚಾಕುವಿನಿಂದ ಇರಿದ ಘಟನೆ ನಗರದ ಹುಣಸೂರು–ಮೈಸೂರು ಹೆದ್ದಾರಿಯ ಎಪಿಎಂಸಿ ಜಂಕ್ಷನ್ ಬಳಿ ಮಂಗಳವಾರ ಮಧ್ಯಾಹ್ನ ನಡೆದಿದೆ. ತಾಲೂಕಿನ ಅಂಗಟಹಳ್ಳಿ ಕುಚೇಲೇಗೌಡರ ಪುತ್ರ ಬೀರೇಶ್(23) ಇರಿತಕ್ಕೊಳಗಾಗಿದ್ದು, ತೀವ್ರವಾಗಿ ಗಾಯಗೊಂಡ ಈತನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈತನ ಸ್ನೇಹಿತನೂ ಆದ ನಗರದ ಗೋಕುಲ್ ರಸ್ತೆಯ ಕುಟ್ಟಿ ಜಿಮ್‌ನಲ್ಲಿ ಕಾರ್ಯ ನಿರ್ವಹಿಸುವ ನಿತಿನ್ ಹಾಗೂ ಕಲ್ಕುಣಿಕೆ ನಿವಾಸಿ ಮನು ಇರಿದ ಆರೋಪಿಗಳು.

ವಿವರ: ಹೊಸದಾಗಿ ಮದುವೆಯಾಗಿದ್ದ ನಿತಿನ್‌ಗೆ ಇನ್‌ಸ್ಟಾಗ್ರಾಂನಲ್ಲಿ ಬೀರೇಶ್ ನಿಂದನಾತ್ಮಕ ಮೇಸೇಜ್ ಮಾಡಿದ್ದ ಎನ್ನಲಾಗಿದೆ. ಇದರಿಂದ ಆಕ್ರೋಶಗೊಂಡಿದ್ದ ನಿತಿನ್, ಬೀರೇಶ್‌ನನ್ನು ಹತ್ಯೆ ಮಾಡುವ ಸಂಚು ರೂಪಿಸಿ, ತನ್ನ ಸ್ನೇಹಿತ ಮನು ಜೊತೆ ಸ್ಕೂಟರ್‌ನಲ್ಲಿ ಮಂಗಳವಾರ ಮಧ್ಯಾಹ್ನ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದಿದ್ದಾನೆ. ಅಲ್ಲಿ ನಿಂತಿದ್ದ ಬೀರೇಶ್‌ನನ್ನು ಸ್ಕೂಟರ್‌ಗೆ ಹತ್ತಿಸಿಕೊಂಡ ಆರೋಪಿಗಳು, ನಗರದ ಬೈಪಾಸ್ ರಸ್ತೆ ಅನ್ನಪೂರ್ಣ ಹೋಟೆಲ್ ಬಳಿ ತೆರಳುತ್ತಿದ್ದಂತೆ ತಮ್ಮ ಮಧ್ಯದಲ್ಲಿ ಕುಳಿತಿದ್ದ ಬೀರೇಶ್ ಬೆನ್ನಿಗೆ ನಿತಿನ್ ಚಾಕುವಿನಿಂದ ಇರಿದು, ಅವನನ್ನು ಸ್ಕೂಟರ್‌ನಿಂದ ಕೆಳಗೆ ತಳ್ಳಿ ಪರಾರಿಯಾಗಿದ್ದಾರೆ. ಈ ವೇಳೆ ನೋವಿನಿಂದ ಚೀರಿಕೊಂಡ ಬೀರೇಶ್‌ನನ್ನು ಸ್ಥಳದಲ್ಲಿದ್ದ ಮರದ ವ್ಯಾಪಾರಿಯೊಬ್ಬರು ರಕ್ಷಿಸಿ, ನಗರದ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಅಲ್ಲದೇ ರಕ್ತದ ಮಡುವಿನಲ್ಲಿ ಬಿದ್ದಿದ್ದ ಬೀರೇಶ್‌ಗೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದು ಘಟನಾ ಸ್ಥಳಕ್ಕಾಗಮಿಸಿದ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ನೆರೆಯಿಂದ ಸೂರು ಕಳೆದುಕೊಂಡ ಬಿದರಹಳ್ಳಿ ಸರ್ಕಲ್‌ನ

49 ಸಂತ್ರಸ್ತರಿಗೆ ಶೀಘ್ರ ಮನೆ ನಿರ್ಮಾಣ: ಸಚಿವ ಎಸ್‌ಟಿಎಸ್ ಭರವಸೆ

ಹೆಚ್.ಡಿ.ಕೋಟೆ, ಜು.12(ಮಂಜು)– ನೆರೆಯಿಂದ ಸೂರು ಕಳೆದುಕೊಂಡ ಬಿದರಹಳ್ಳಿ ಸರ್ಕಲ್‌ನ 49 ಸಂತ್ರಸ್ತರಿಗೆ ಶೀಘ್ರ ಮನೆ ನಿರ್ಮಿಸಿ ಕೊಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭರವಸೆ ನೀಡಿದರು.

ತಾಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯ ಭರ್ತಿಯಾಗಿದ್ದು, ಮುಖ್ಯಮಂತ್ರಿಗಳು ಜಲಾಶಯಕ್ಕೆ ಬಾಗಿನ ಅರ್ಪಿಸಲು ಬರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಚಿವರು ಅಗತ್ಯ ಮುನ್ನೆಚ್ಚರಿಕಾ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ಸಚಿವರನ್ನು ಭೇಟಿ ಮಾಡಿದ ಬಿದರಹಳ್ಳಿ ಸರ್ಕಲ್‌ನ ನೆರೆ ಸಂತ್ರಸ್ತರು, ಕಳೆದ 4 ವರ್ಷಗಳ ಹಿಂದೆ ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡುಗಡೆ ಮಾಡಿದ ಪರಿಣಾಮ ಉಂಟಾದ ನೆರೆಯಿಂದ ನಾವು ಮನೆ ಕಳೆದುಕೊಂಡಿದ್ದೇವೆ. ನಮಗೆ ವಾಸಿಸಲು ಸೂಕ್ತ ಮನೆ ಇಲ್ಲ. ಪ್ರತಿ ಬಾರಿ ಇಲ್ಲಿಗೆ ಆಗಮಿಸುವ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನಿಮಗೆ ಸೂರು ಕಲ್ಪಿಸಿ ಕೊಡುವುದಾಗಿ ಆಶ್ವಾಸನೆ ಕೊಡುತ್ತಾರೆ. ಆದರೆ ಇದುವರೆಗೂ ನಮಗೆ ಮನೆ ನಿರ್ಮಿಸಿ ಕೊಟ್ಟಿಲ್ಲ. ಇದರಿಂದ ನಾವು ಸಂಕಷ್ಟಕ್ಕೆ ಸಿಲಿಕಿದ್ದೇವೆ. ಇದೀಗ ನೀವು ಬಂದಿದ್ದೀರಿ. ನಮಗೆ ಸೂರು ನಿರ್ಮಿಸಿ ಕೊಡಲು ಕ್ರಮ ಕೈಗೊಳ್ಳುವಂತೆ ಸಚಿವರಿಗೆ ಮನವಿ ಮಾಡಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಎಸ್.ಟಿ.ಸೋಮಶೇಖರ್, ನಿಮಗೆ ಮನೆ ನಿರ್ಮಿಸಿ ಕೊಡುವ ವಿಚಾರವಾಗಿ ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಸಿದ್ದೇನೆ. ಶೇ.95 ರಷ್ಟು ಯೋಜನೆ ರೂಪಿಸಸಲಾಗಿದೆ. ಸಂತ್ರಸ್ತರಿಗೆ ಶೀಘ್ರ ಮನೆ ನಿರ್ಮಿಸಿ ಕೊಡಲಾಗುವುದು ಎಂದು ಭರವಸೆ ನೀಡಿದ ಸಚಿವರು ಈಗಾಗಲೇ ನೆರೆಯಿಂದ ಮನೆ ಕಳೆದುಕೊಂಡ ಕುಟುಂಬಗಳಿಗೆ ಮುಖ್ಯಮಂತ್ರಿಗಳು 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ ಯಾರು ಚಿಂತಿಸಬೇಡಿ ಎಂದರು.

ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸುವುದರಿಂದ ಜಲಾಶಯದ ಎದುರಿನ ಸೇತುವೆ ಮುಳುಗಡೆಯಾಗಿ ಬಿದರಹಳ್ಳಿ, ಎನ್.ಬೇಗೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ರಸ್ತೆ ಸಂಪರ್ಕ ಕಡಿತಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ 55 ಕೋಟಿ ರೂ. ವೆಚ್ಚದ ಸೇತುವೆ ಹಾಗೂ ಕಾಂಕ್ರಿಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಈ ಹಿಂದೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರು ಗುದ್ದಲಿ ಪೂಜೆ ನೆರವೇರಿಸಿದ್ದರು. ಗುಣಮಟ್ಟದ ಕಾಮಗಾರಿ ನಡೆಯುತ್ತಿದ್ದು, ಶೀಘ್ರ ಪೂರ್ಣಗೊಂಡು ಈ ಭಾಗದ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ ಎಂದರು.

ಈ ವೇಳೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಎಸಿ ವರ್ಣಿತ್ ನೇಗಿ, ಜಿಪಂ ಸಿಇಓ ಪೂರ್ಣಿಮಾ, ತಹಸೀಲ್ದಾರ್ ಚೆಲುವರಾಜು, ಆರ್‌ಐ ರವಿಚಂದ್ರನ್, ಮಹೇಶ್, ಕಬಿನಿ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರ ಜನಾರ್ಧನ್, ಸಹಾಯಕ ಇಂಜಿನಿಯರ್ ವಿಶ್ವನಾಥ್, ಗೇಜ್ ನಾಗರಾಜ್, ಸಿಪಿಐ ಬಸವರಾಜ್, ಎಸ್‌ಐ ಜಯಪ್ರಕಾಶ್, ಬಿದರಹಳ್ಳಿ ಗ್ರಾಪಂ ಅಧ್ಯಕ್ಷ ವೆಂಕಟಸ್ವಾಮಿ, ಸದಸ್ಯರಾದ ಸತ್ಯ, ಶಿವಣ್ಣ, ಚೆನ್ನನಾಯಕ, ಪಿಡಿಓ ಪರಮೇಶ್, ಬಿಜೆಪಿ ತಾಲೂಕು ಅಧ್ಯಕ್ಷ ಗುರುಸ್ವಾಮಿ, ಮುಖಂಡರಾದ ಹೆಚ್.ಸಿ.ಲಕ್ಷ್ಮಣ್, ಮಂಜು, ವಿನಯ್, ರಾಜು, ಮಹೇಶ್ ಇನ್ನಿತರರಿದ್ದರು.



> ನೆರೆಯಿಂದ ಮನೆ ಕಳೆದುಕೊಂಡಿರುವ 49 ಕುಟುಂಬಗಳಿಗೆ ನೀರಾವರಿ ನಿಗಮದಿಂದ ಮನೆ ನಿರ್ಮಿಸಿ ಕೊಡಲು ಅನುಮತಿ ಪಡೆಯಲಾಗಿದೆ. ಆದ್ದರಿಂದ ಎಲ್ಲಾ ಕುಟುಂಬಗಳಿಗೂ ಮನೆ ನಿರ್ಮಾಣ ಮಾಡಿಕೊಡುವ ಜವಾಬ್ದಾರಿ ನನ್ನದು.
> **-ಎಸ್.ಟಿ.ಸೋಮಶೇಖರ್,** ಮೈಸೂರು ಉಸ್ತುವಾರಿ ಸಚಿವ.

> ಪ್ರವಾಹ ಜಾಸ್ತಿಯಾಗಿ ಮನೆ ಕಳೆದುಕೊಂಡ 49 ಕುಟುಂಬಗಳಿಗೆ 50 ಸಾವಿರ ರೂ. ನೆರೆ ಪರಿಹಾರದ ಚೆಕ್ ನೀಡಲು ಬಂದಿದ್ದ ಅಧಿಕಾರಿಗಳಿಗೆ ಸಚಿವ ಸೋಮಣ್ಣನವರು ಇವರಿಗೆ ಪರಿಹಾರ ಚೆಕ್ ಕೊಡುವುದು ಬೇಡ. ಮನೆ ಕಟ್ಟಿಸಿ ಕೊಡೋಣ ಎಂದು ಭರವಸೆ ನೀಡಿದ್ದರು. ಮನೆಯೂ ಇಲ್ಲ. ನೆರೆ ಪರಿಹಾರದ ಹಣವೂ ಇಲ್ಲ. 4 ವರ್ಷಗಳಿಂದ ಮನೆ ಇಲ್ಲದೆ ನಮ್ಮ ಕುಟುಂಬಗಳು ಬೀದಿ ಪಾಲಾಗಿದೆ.
> - **ಕಾಳಿಯಮ್ಮ** ಬಿದರಹಳ್ಳಿ ಸರ್ಕಲ್ ನಿವಾಸಿ.

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪೋಷಕರ ಪಾತ್ರ ಬಹುಮುಖ್ಯ



ತಿ.ನರಸೀಪುರ, ಜು.11(ಎಸ್‌ಕೆ)– ಆರ್ಥಿಕ ಸಂಕಷ್ಟದ ನಡುವೆ ಮಕ್ಕಳಿಗೆ ಗೌರವಯುತ ಸ್ಥಾನ ದೊರಕಿಸಿಕೊಡಲು ಶ್ರಮಿಸುವ ಪೋಷಕರಿಗೆ ಪರಿಶ್ರಮ ಶ್ಲಾಘನೀಯ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪೋಷಕರ ಪಾತ್ರ ಬಹುಮುಖ್ಯ ಎಂದು ವಿದ್ಯೋದಯ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ತಿಳಿಸಿದರು.

ವಿದ್ಯೋದಯ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ವಿದ್ಯೋದಯ ಪದವಿ ಪೂರ್ವ ಕಾಲೇಜು ಹಾಗೂ ಬಾಲಿಕಾ ಪದವಿ ಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಉತ್ತಮವಾಗಿ ವ್ಯಾಸಾಂಗ ಮಾಡಿ ಉನ್ನತ ಹುದ್ದೆ ಅಲಂಕರಿಸಿ ಪೋಷಕರಿಗೆ ಗೌರವ ತರುವ ಕೆಲಸ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಮ್ಮ ಸಂಸ್ಥೆಯ 64 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವುದು ಹೆಮ್ಮೆಯ ವಿಷಯ. ಇದಕ್ಕೆ ಕಾರಣರಾದ ಉಪನ್ಯಾಸಕರು, ಶಿಕ್ಷಕರು, ಆಡಳಿತ ಮಂಡಳಿಯವರಿಗೆ ಅಭಿನಂದನೆಗೆ ಸಲ್ಲಿಸುತ್ತೇನೆ ಎಂದರು.

ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಕೆಪಿ.ಉದಯ ಕುಮಾರ್, ಎಸ್.ಶಿವನಂಜಪ್ಪ ಪ್ರಾಚಾರ್ಯರಾದ ಎನ್.ಕಲ್ಪನ, ಟಿ.ಎಸ್.ಬಸವಣ್ಣಸ್ವಾಮಿ, ಎ.ಎಸ್.ನಟರಾಜು, ಶಿವಮಲ್ಲಪ್ಪ, ಮುಖ್ಯಶಿಕ್ಷಕಿ ಎಸ್.ಜ್ಯೋತಿ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಡಾ.ಚಂದ್ರಪ್ಪ, ಸೋಮಣ್ಣ, ನಾಗೇಂದ್ರ, ರವೀಶ್ ಕುಮಾರ್, ಡಿ.ರಾಮನಾಥನ್, ಗೀತಾ, ಬಸವರಾಜು, ಮಹದೇವಸ್ವಾಮಿ, ರಾಜೇಂದ್ರ, ಹೆಚ್.ಎಸ್.ಶಿವಶಂಕರ, ಬಿ.ಎಂ.ಶಿವಮಲ್ಲಪ್ಪ, ಆರ್.ಎಸ್.ಮಹದೇವಸ್ವಾಮಿ, ಎಂ.ಸುರೇಶ, ಅಡಿಗೆ ನಂದೀಶ, ರಮೇಶ ಇತರರಿದ್ದರು.

ಪುಟ್ಟೇಗೌಡ ನಿಧನ



ಸುತ್ತೂರು, ಜು.12– ಇಲ್ಲಿನ ಕೆಂಪಿಸಿದ್ದನಹುಂಡಿ ಗ್ರಾಮದ ಗ್ರಾಪಂ ಮಾಜಿ ಸದಸ್ಯ ಪುಟ್ಟೇಗೌಡ(58) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೃತರ ಸ್ವಗ್ರಾಮದಲ್ಲಿ ನೆರವೇರಿತು.

ಗೊತ್ತು ಗುರಿಯಿಲ್ಲದ ಯುಜಿಡಿ ಕಾಮಗಾರಿ : ವ್ಯಾಪಾರಸ್ಥರ ಫಜೀತಿ



ಮೈಸೂರು, ಜು.12(ಜಿಎ)– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆ(ಸಂಚಾರ ಪೊಲೀಸ್ ಎಸಿಪಿ ಕಚೇರಿ ಬಳಿ)ಯಲ್ಲಿ ನಡೆಯುತ್ತಿರುವ ಯುಜಿಡಿ ಕಾಮಗಾರಿಯಿಂದಾಗಿ ವಾಹನ ಸವಾರರು, ವ್ಯಾಪಾರಸ್ಥರು ನಿತ್ಯ ಸಂಕಷ್ಟ ಪಡುವಂತಾಗಿದೆ. ಕಳೆದೊಂದು ತಿಂಗಳಿಂದ ಯುಜಿಡಿ ಕಾಮಗಾರಿ ನಡೆಯುತ್ತಿದ್ದು, ಪಾಲಿಕೆ ಅಧಿಕಾರಿಗಳ ಯಡವಟ್ಟಿಗೆ ಕಾಮಗಾರಿ ನೆನಗುದಿಗೆ ಬಿದ್ದಿದ್ದು, ವಾಹನ ಸವಾರರು ಹಾಗೂ ಇಲ್ಲಿನ ವ್ಯಾಪಾರಿಗಳು ಪರಿತಪಿಸುತ್ತಿದ್ದಾರೆ.

ವಾರದ ಹಿಂದೆಯಷ್ಟೆ ಹೊಸದಾಗಿ ಯುಜಿಡಿ ಮ್ಯಾನ್‌ಹೋಲ್ ನಿರ್ಮಿಸಿ ಪೈಪ್‌ಲೈನ್ ಅಳವಡಿಸಿದ ಮಾರ್ಗದಲ್ಲಿಯೇ ಮತ್ತೆ ಹತ್ತಾರು ಅಡಿ ಆಳದ ಗುಂಡಿ ತೆಗೆದು ಅವಾಂತರ ಸೃಷ್ಟಿಸಲಾಗಿದೆ. ಕಾಮಗಾರಿ ಪೂರ್ಣಗೊಳಿಸದೆ ಹೊಸದಾಗಿ ಅಳವಡಿಸಿದ ಯುಜಿಡಿ ಪೈಪ್‌ಲೈನ್‌ಗಳನ್ನು ಒಡೆದು ಹಾಕಿ ಸಾರ್ವಜನಿಕರ ತೆರಿಗೆ ಹಣವನ್ನು ಪೋಲು ಮಾಡಲಾಗುತ್ತಿದೆ ಎಂದು ಸಾರ್ವಜನಿಕರು ಕಿಡಿಕಾರಿದ್ದಾರೆ. ಕಳೆದ ಹಲವು ದಿನಗಳಿಂದ ಈ ಗುಂಡಿಯೂ ಇದೇ ಸ್ಥಿತಿಯಲ್ಲಿದ್ದು, ಕೇವಲ ಮೂರು ದಿನಗಳ ಕಾಮಗಾರಿ ಎಂದು ಅಂದು ಪಾಲಿಕೆ ಅಧಿಕಾರಿಗಳು ತಿಳಿಸಿದರು. ಆದರೆ, ಇಷ್ಟು ದಿನಗಳಾದರೂ ಈ ಕಾಮಗಾರಿ ಮುಗಿದಿಲ್ಲ ಎಂದು ಮನೇರಿ ಟೀ ಅಂಗಡಿ ಮಾಲೀಕ ಶಶಿ ಸೂರ್ಯವಂಶಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಒಂದು ದಿನ ಏಕಾಏಕಿ ಜೆಸಿಬಿ ಮೂಲಕ ಅಂಗಡಿ ಮುಂದೆ ಗುಂಡಿ ತೆಗೆಯಲು ಆರಂಭಿಸಿದರು. ಆಗ ನಾನು ಏಕೆ ಇಷ್ಟು ದೊಡ್ಡ ಗುಂಡಿ ತೆಗೆಯುತ್ತಿದ್ದೀರಾ ಎಂದು ಪ್ರಶ್ನಿಸಿದ್ದಕ್ಕೆ ಅಧಿಕಾರಿಗಳು ಮೂರು ದಿನಗಳಲ್ಲಿಯೇ ಕಾಮಗಾರಿ ಮುಗಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುತ್ತೇವೆ ಎಂದಿದ್ದರು. ಆದರೆ, ಇಲ್ಲಿಯವರೆಗೂ ಅರ್ಧ ಕಾಮಗಾರಿ ಮಾಡಿದ್ದು, ಮುಖ್ಯ ರಸ್ತೆಯಲ್ಲಿರುವ ಬಾರೀ ಗುಂಡಿಯನ್ನು ಮುಚ್ಚಿಲ್ಲ. ಕೊರೊನಾ ಕಾರಣಕ್ಕೆ ಕಳೆದ ಎರಡು ವರ್ಷಗಳಿಂದ ಸರಿಯಾಗಿ ವ್ಯಾಪಾರ ವಹಿ ವಾಟುಗಳು ನಡೆಯುತ್ತಿಲ್ಲ. ಇದರ ನಡುವೇ ಅಂಗಡಿಯ ಮುಂದೆಯೇ ಈ ರೀತಿ ಬೃಹತ್ ಗುಂಡಿ ತೆಗೆದಿದ್ದರೆ ಗ್ರಾಹಕರು ಬರುತ್ತಾರೆಯೇ ಎಂದು ಬೇಸರ ವ್ಯಕ್ತಪಡಿಸಿದರು. ಈ ರಸ್ತೆಯನ್ನೇ ವಾಹನ ಸವಾರರು ಅವಲಂಭಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬೃಹತ್ ಗುಂಡಿಯ ನಡುವೆಯೇ ನಿತ್ಯವೂ ಆಟೋ, ದ್ವಿಚಕ್ರ ವಾಹನ ಸಂಚರಿಸುತ್ತಿವೆ. ಆಯತಪ್ಪಿ ಗುಂಡಿಗೆ ಬಿದ್ದರೆ ಯಾರು ಹೊಣೆ? ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ಪೂರ್ಣಗೊಳಿಸಿ ಸಂಚಾರವನ್ನು ಸುಗಮ ಗೊಳಿಸದೇ ಹೋದರೆ ವ್ಯಾಪಾರಸ್ಥರು ಪ್ರತಿಭಟನೆಗಿಳಿಯುವ ಎಚ್ಚರಿಕೆ ನೀಡಿದ್ದಾರೆ.

ಸಿದ್ದರಾಮಯ್ಯರಿಗೆ ಮುರುಘಾ ಮಠದ ಜಯದೇವಶ್ರೀ ಪ್ರಶಸ್ತಿ



ದಾವಣಗೆರೆ: ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಜಯದೇವ ಶ್ರೀ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ಮುರುಘಾ ಮಠದಿಂದ ಕೊಡಮಾಡುವ ಪ್ರತಿಷ್ಠಿತ ಪ್ರಶಸ್ತಿ ಇದಾಗಿದೆ. ದಾವಣಗೆರೆಯ ಶಿವಯೋಗಿ ಆಶ್ರಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯರಿಗೆ ಮುರುಘಾ ಮಠದ ಶೂನ್ಯ ಪೀಠಾಧೀಪತಿ ಶಿವಮೂರ್ತಿ ಮುರುಘಾ ಶರಣರು ಪ್ರಶಸ್ತಿ ನೀಡಿ ಸನ್ಮಾನಿಸಿದರು. ಇದಲ್ಲದೆ ಶೂನ್ಯ ಪೀಠ ಅಲ್ಲಮ ಪ್ರಶಸ್ತಿಯನ್ನು ಡಾ. ಡಿ.ಹೆಚ್. ಶಂಕರಮೂರ್ತಿಯವರಿಗೆ, ಶೂನ್ಯ ಪೀಠ ಚನ್ನಬಸವ ಪ್ರಶಸ್ತಿಯನ್ನು ಪ್ರೊ. ಹೆಚ್ ಎ ಭಿಕ್ಷಾವರ್ತಿ ಮಠ ಅವರಿಗೆ, ಶೂನ್ಯ ಪೀಠ ಅಕ್ಕನಾಗಮ್ಮ ಪ್ರಶಸ್ತಿಯನ್ನು ಚೆನ್ನಮ್ಮ ಹಳ್ಳಿಕೇರಿಯವರಿಗೆ ಪ್ರದಾನ ಮಾಡಲಾಯಿತು.

NOTICE

NOTICE is hereby given that **Sri. Vishwananda S. and his family** have agreed to sell the property mentioned in the schedule hereto, to my client. All persons claiming an interest in the said property or any part thereof by way of sale, gift, lease, inheritance, exchange, mortgage, charge, lien, trust, possession, easement, attachment or otherwise howsoever are hereby required to make the same known to the undersigned at his office at #1089, 1st Floor, Vishnuvardhana Road, Chamarajapuram, Mysore-05 (9945761155) within 15 days from the date hereof, failing which the said sale completed, without any reference to such claim and the same, if any, shall be considered as waived.

SCHEDULE

All that part and parcel of the land bearing Plot No. 63/1A F2A measuring 80 Ft. from East to West and 63 ft, from North to South, totally measuring 5040 Sq.Ft. situated at Gurukar Devanna Road, Kille Mohalla, Mysuru and bounded on East by: Gurukar Devanna Road; West by: Property of Sri. M. Rajendra Kumar; North by: Private Property & South by: Property of N. B. Chaitanya, N. B. Vijaya & N. B. Sambashivan.

Sd/- **P. Prithvi Kiran Setty**
Advocate, KAR 1293/11, # 1089,
1st Floor, Vishnuvardhana Road,
Chamarajapuram, Mysuru-570 005
Date: 05.07.2022

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ,
ಗುಣಭರವಸೆ ವಿಭಾಗ, ಮೈಸೂರು–570005.
ದೂ.: 0821–2448844 ಇ–ಮೇಲ್: eemysqa@gmail.com
ಸಂ: ಕಾಇಂ/ಲೋಇ/ಗುಭವಿ/ಮೈ/ಸ.ಇಂ/ವಾ.ಟೆಂಡರ್/2022–23
ದಿ:11.07.2022

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ)

ಕಾರ್ಯಪಾಲಕ ಇಂಜಿನಿಯರ್, ಲೋಇ, ಗುಣಭರವಸೆ ವಿಭಾಗ, ಮೈಸೂರು ರವರಿಂದ 1) "Hiring of vehicle with driver for PWD Quality Assurance Circle, Mysuru for the year 2022-23 2) "Hiring of vehicle with driver for PWD Quality Assurance Sub Division, Chamarajanagara for the year 2022-23 3) "Hiring of vehicle with driver for PWD Quality Assurance Sub Division, Kushalnagara for the year 2022-23 ಗೆ ಮಾಸಿಕ ಬಾಡಿಗೆ ಆಧಾರದಲ್ಲಿ ವಾಹನ ಸೇವೆ [Four wheeler Vehicle with Driver] "ಇ–ಪೋರ್ಟಲ್" ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಈ ಕಛೇರಿಯಿಂದ ಆಹ್ವಾನಿಸಲಾಗಿದ್ದು, ಕರ್ನಾಟಕ ಸರ್ಕಾರದ ಇ–ಪೋರ್ಟಲ್‌ನಲ್ಲಿ ನೋಂದಾಯಿತ ಏಜೆನ್ಸಿ/ಟೆಂಡರ್‌ದಾರರು ಮಾತ್ರ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಟೆಂಡರ್ ಬಿಡ್‌ಗಳನ್ನು "ಇ–ಪೋರ್ಟಲ್" ಮುಖಾಂತರ ಸಲ್ಲಿಸತಕ್ಕದ್ದು. ಟೆಂಡರ್‌ಗಿಟ್ಟ ಮೊತ್ತ ಕ್ರಮವಾಗಿ ರೂ.3.92 ಲಕ್ಷ, ರೂ.3.42 ಲಕ್ಷ ಹಾಗೂ ರೂ.3.42 ಲಕ್ಷ ಮತ್ತು ಇ.ಎಂ.ಡಿ ಮೊತ್ತ ಕ್ರಮವಾಗಿ ರೂ.9,800 ರೂ.8,600 ಹಾಗೂ ರೂ.8,600 ಟೆಂಡರ್ ಸಲ್ಲಿಸಲು ಕೊನೆ ದಿನಾಂಕ & ಸಮಯ: 22.07.2022 ಸಂಜೆ 5.00 ಗಂಟೆ, ಟೆಂಡರ್ ತೆರೆಯುವ ದಿನಾಂಕ & ಸಮಯ:25.07.2022 ಬೆಳಗ್ಗೆ 11.00 ಗಂಟೆ ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ www.eproc.karnatak.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಗುಣಭರವಸೆ ವಿಭಾಗ, ಮೈಸೂರು.
DIPR/DD-MYS/MCA/232/2022-23